“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತೇಳನೆಯ ಅಧಿವೇಶನ

ದಿನಾಂಕ: 16ನೇ ಸೆಪ್ಟೆಂಬರ್ 2022

ಶುಕ್ರವಾರ

## ವಿಷಯಾನುಕ್ರಮಣಿಕೆ [INDEX]

01. ಪ್ರಕಟಣೆ

02. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

558 – ಕಲಬುರಗಿ ಜಿಲ್ಲೆಯ ರೈತರ ಬೆಳೆ ವಿಮೆ ಮೊತ್ತವನ್ನು ಪಾವತಿಸುವ ಬಗ್ಗೆ

- ಶ್ರೀ ಶಶಿಲ್ ಜಿ.ನಮೋಶಿ
- ಶ್ರೀ ಬಿ.ಸಿ.ಪಾಟೀಲ್(ಕೃಷಿ ಸಚಿವರು)

559 + 582 – ಮಳೆಯಿಂದ ಸಂಭವಿಸಿರುವ ಕೃಷಿ ಬೆಳೆಯ ನಷ್ಟದಿಂದ ಸಂಕಷ್ಟಕ್ಕೆ ಸಿಲುಕಿರುವ ಕೃಷಿಕರಿಗೆ ಪರಿಹಾರ ಒದಗಿಸಿರುವ ಕುರಿತು.

- ಶ್ರೀ ಕೆ.ಅಬ್ದುಲ್ ಜಬ್ಬಾರ್
- ಶ್ರೀ ಶರವಣ ಟಿ.ಎ.
- ಶ್ರೀ ಬಿ.ಸಿ.ಪಾಟೀಲ್(ಕೃಷಿ ಸಚಿವರು)

508 – ರೈತರಿಗೆ ಉಗ್ರಾಣ, ಶೀತಲ ಕೇಂದ್ರ ಕೊರತೆ ಇರುವ ಬಗ್ಗೆ

- ಶ್ರೀ ಗೋವಿಂದ ರಾಜು
- ಶ್ರೀ ಬಿ.ಸಿ.ಪಾಟೀಲ್(ಕೃಷಿ ಸಚಿವರು)

**552 – ವಾಹನಗಳಲ್ಲಿ ಅತಿ ಪ್ರಕರ ದೀಪಗಳಿಂದ (Head Light) ಅಪಘಾತ ಸಂಭವಿಸುವ ಬಗ್ಗೆ**

- ಶ್ರೀ ವೈ.ಎಂ.ಸತೀಶ್
- ಶ್ರೀ ಬಿ.ಶ್ರೀರಾಮುಲು(ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು)

**488 – ಇರುಳಿಗರ ಜನಾಂಗಕ್ಕೆ ಸೌಲಭ್ಯವನ್ನು ಕಲ್ಪಿಸುವ ಬಗ್ಗೆ**

- ಶ್ರೀ ಎಸ್.ರವಿ
- ಶ್ರೀ ಬಿ.ಶ್ರೀರಾಮುಲು(ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು)

**503– ಕಾರ್ಮಿಕ ಇಲಾಖೆಯಲ್ಲಿ ಕಾರ್ಮಿಕರಿಗೆ ಕಾರ್ಡ್ ಅನ್ನು ಒದಗಿಸುವ ಬಗ್ಗೆ**

- ಡಾ:ಕೆ.ಗೋವಿಂದರಾಜ್ (ಶ್ರೀ ಸಲೀಂ ಅಹಮದ್‌ರವರ ಪರವಾಗಿ)
- ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್(ಕಾರ್ಮಿಕ ಸಚಿವರು)

**535 – ಕೆ.ಎಸ್.ಆರ್.ಟಿ.ಸಿ. ಮತ್ತು ಸಾರಿಗೆ ನೌಕರರ ಪ್ರತಿಭಟನೆ ಕುರಿತು**

- ಶ್ರೀ ಡಿ.ಎಸ್.ಅರುಣ್
- ಶ್ರೀ ಬಿ.ಶ್ರೀರಾಮುಲು(ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು)

**546 – ಹಿಂದುಳಿದ ವರ್ಗಗಳ ಗಂಗಾ ಕಲ್ಯಾಣಕ್ಕೆ ಜಾರಿಯಾಗುವ ಯೋಜನೆಗಳ ಕುರಿತು**

- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

**571 – ನಗರ ಪ್ರದೇಶಗಳಲ್ಲಿ ಸಿಗ್ನಲ್ ಇರುವ ಕಡೆ ಭಿಕ್ಷುಕರ ಹಾವಳಿಯಿಂದಾಗಿ ಸಂಚಾರ ದಟ್ಟಣೆ ಉಂಟಾಗುವ ಬಗ್ಗೆ**

- ಶ್ರೀ ಅ.ದೇವೇಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

**501 – ಪ್ರವರ್ಗ –1ರ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ**

- ಶ್ರೀ ಎಂ.ನಾಗರಾಜು
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

**521 – ವಿದ್ಯಾರ್ಥಿ ನಿಲಯಗಳ ಮೂಲ ಸೌಕರ್ಯ ಕೊರತೆಯ ಬಗ್ಗೆ**

- ಶ್ರೀ ಎಂ.ಎಲ್.ಅನಿಲ್‌ಕುಮಾರ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

**526 – ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯ ಬಗ್ಗೆ**

- ಶ್ರೀ ಕೆ.ಹರೀಶ್‌ಕುಮಾರ್
- ಶ್ರೀ ಬಿ.ಸಿ.ಪಾಟೀಲ್(ಕೃಷಿ ಸಚಿವರು)

**555 + 512 ಐಷಾರಾಮಿ ಕಾರುಗಳ ತೆರಿಗೆ ಹಾಗೂ ಹೊರ ರಾಜ್ಯದಲ್ಲಿ ವಾಹನಗಳ ನೋಂದಣಿ ಕುರಿತು.**

- ಶ್ರೀ ಸಿ.ಎನ್.ಮಂಜೇಗೌಡ
- ಶ್ರೀ ಎನ್.ರವಿಕುಮಾರ್
- ಶ್ರೀ ಬಿ.ಶ್ರೀರಾಮುಲು(ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**೦3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

**ಅ) ವಿದ್ಯಾರ್ಥಿನಿಯರಿಗೆ ಕಿರುಕುಳ ನೀಡಿದ ಆರೋಪದ ಮೇಲೆ ಮೊರಾರ್ಜಿ ದೇಸಾಯಿ ವಸತಿ ಶಾಲೆ ಕುಂಚಾವರಂ, ಚಿಂಚೋಳಿ ಇಲ್ಲಿ ಪ್ರಭಾರಿ ಪ್ರಾಂಶುಪಾಲರು ಮತ್ತು ಕಂಪ್ಯೂಟರ್ ಆಪರೇಟರ್ ಇವರನ್ನು ಪಾಲಕರು ಥಳಿಸಿರುವ ಬಗ್ಗೆ**

– **ಶ್ರೀ ಕೋಟ ಶ್ರೀನಿವಾಸ ಪೂಜಾರಿ** (ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

**ಆ) ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಕಟ್ಟಡಗಳು ಅಪಾಯದ ಅಂಚಿನಲ್ಲಿದ್ದು ಚಾವಣಿ ಕುಸಿತ, ಗೋಡೆಗಳು ಶಿಥಿಲವಾಗಿರುವುದು ಮತ್ತು ಇನ್ನಿತರೆ ಮೂಲಭೂತ ಸೌಕರ್ಯಗಳ ಕೊರತೆ ಬಗ್ಗೆ**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ)

**ಇ) ಕೊಡಗು ಜಿಲ್ಲೆಯ ಭಾಗಮಂಡಲ ತೀರ್ಥಯಾತ್ರಾ ಸ್ಥಳದಲ್ಲಿ ಮೇಲ್ಸಾವಣಿಗಳ ನಿರ್ಮಾಣ, ಪಾದಚಾರಿ ಮಾರ್ಗ, ಭೋಜನಶಾಲೆ ಹಾಗೂ ಪಾಕಶಾಲೆಗಳನ್ನು ನಿರ್ಮಾಣ ಮಾಡಲು ಸರ್ಕಾರ ಅನುದಾನ ಮಂಜೂರು ಮಾಡುವ ಬಗ್ಗೆ**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು, ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರ ಪರವಾಗಿ)

**ಈ) ಸ್ಮಾರ್ಟ್ ಸಿಟಿ ಅಭಿವೃದ್ಧಿಯಲ್ಲಿನ ಗುಣಮಟ್ಟ ಹಾಗೂ ಕಾಮಗಾರಿಗಳ ಬಗ್ಗೆ**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು, ನಗರಾಭಿವೃದ್ಧಿ ಸಚಿವರ ಪರವಾಗಿ)

**೦4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ವಿಶೇಷಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಲ್ಲಿ ಹುದ್ದೆಗಳು ಭರ್ತಿಯಾಗದಿರುವುದರಿಂದ ಸರ್ಕಾರದ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನಗೊಳ್ಳದಿರುವ ಬಗ್ಗೆ.**

– ಶ್ರೀ ಮಂಜುನಾಥ ಭಂಡಾರಿ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಆ) ಶಿರಾ ತಾಲ್ಲೂಕಿನ ಚನ್ನಕುಂಟೆ ಮಾರ್ಗ ರಸ್ತೆಯಲ್ಲಿರುವ ಸೇತುವೆಯು ರಸ್ತೆ ಮಟ್ಟಕ್ಕೆ ಇಳಿದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ.**

– ಶ್ರೀ ಚಿದಾನಂದ ಎಂ.ಗೌಡ

– ಶ್ರೀ ಸಿ.ಸಿ.ಪಾಟೀಲ್ (ಲೋಕೋಪಯೋಗಿ ಸಚಿವರು)

**ಇ) ರಾಜ್ಯದಲ್ಲಿ ಮಧ್ಯಾಹ್ನದ ಉಪಹಾರ ಯೋಜನೆ ಕಾರ್ಯಕ್ರಮದ ಅಡಿ ವಿದ್ಯಾರ್ಥಿಗಳಿಗೆ ಬಿಸಿಯೂಟವನ್ನು ತಯಾರಿಸಿ ಉಣಬಡಿಸುವವರಿಗೆ ಸರ್ಕಾರ ಕಳೆದ 6 ತಿಂಗಳಿನಿಂದ ಗೌರವ ಧನ ನೀಡದಿರುವ ಬಗ್ಗೆ.**

– ಶ್ರೀ ಪ್ರಕಾಶ್ ಕೆ.ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತಕರು)

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಈ) ಪ್ರಧಾನಮಂತ್ರಿ ಜನೌಷಧಿಯ ಕೇಂದ್ರಗಳಲ್ಲಿ ಔಷಧಗಳು ಸಕಾಲದಲ್ಲಿ ಪೂರೈಕೆ ಆಗದಿರುವ ಬಗ್ಗೆ.**

– ಶ್ರೀ ಕೆ.ಎ.ತಿಪ್ಪೇಸ್ವಾಮಿ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಉ) ಅನುದಾನಿತ ಪದವಿ ಕಾಲೇಜುಗಳಲ್ಲಿ 2015ರ ಪೂರ್ವಕಾಲದಲ್ಲಿ ನಿವೃತ್ತಿ ಮತ್ತು ಮರಣದಿಂದಾಗಿ ತೆರವಾಗಿ ಮಂಜೂರಾದ ಬೋಧಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.**

– ಶ್ರೀ ನಿರಾಣಿ ಹಣಮಂತ್ ರುದ್ರಪ್ಪ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

–

**ಊ) ನಗರ ಪಾಲಿಕೆ/ನಗರಸಭೆ ನೌಕರರಿಗೆ ಹಾಗೂ ಪೌರ ಕಾರ್ಮಿಕರುಗಳಿಗೆ ಸರ್ಕಾರದ ಆರೋಗ್ಯ ಸಂಜೀವಿನಿ ವಿಮಾ ಯೋಜನೆಯನ್ನು ವಿಸ್ತರಿಸಲು ಬಳ್ಳಾರಿ ಮಹಾನಗರ ಪಾಲಿಕೆ ಆವರಣದಲ್ಲಿ ನಡೆಯುತ್ತಿರುವ ಪ್ರತಿಭಟನೆ ಕುರಿತು.**

– ಶ್ರೀ ವೈ.ಎಂ.ಸತೀಶ್

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಋ) ಕೆಪಿಎಸ್‌ಸಿ ಯಿಂದ ಉದ್ಯೋಗಾಕಾಂಕ್ಷಿಗಳಿಗೆ ನೇಮಕಾತಿ ಪ್ರಕ್ರಿಯೆಯಲ್ಲಿ ಪದೇ ಪದೇ ಅನ್ಯಾಯವಾಗುತ್ತಿರುವ ಬಗ್ಗೆ.**

– ಶ್ರೀ ಯು.ಬಿ.ವೆಂಕಟೇಶ್

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಎ) ಅಂತರರಾಷ್ಟ್ರೀಯ, ರಾಷ್ಟ್ರೀಯ ಕ್ರೀಡಾ ಕೂಟಗಳಲ್ಲಿ ಕ್ರೀಡಾಪಟುಗಳು ಮಾದಕ ದ್ರವ್ಯಗಳಂತಹ ಉದ್ದೀಪನ ಮದ್ದು ಸೇವಿಸಿರುವ ಪ್ರಕರಣಗಳ ಕುರಿತು.**

– ಶ್ರೀ ಡಿ.ಎಸ್.ಅರುಣ್

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಏ) ಬೆಂಗಳೂರು ನಗರ ಮತ್ತು ಸುತ್ತಮುತ್ತ ಪ್ರದೇಶಗಳ ರಾಜಕಾಲುವೆಗಳ ಒತ್ತುವರಿ ಕುರಿತು.**

– ಶ್ರೀ ಹೆಚ್.ಎಸ್.ಗೋಪಿನಾಥ್

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**೦೫. ನಿಯಮ ೬೮ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ**

**ರಾಜ್ಯದಲ್ಲಿ ಇತ್ತೀಚೆಗೆ ಸುರಿಯುತ್ತಿರುವ ಮಳೆಯಿಂದಾಗಿ ಬೆಂಗಳೂರು ನಗರ ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳು ಪ್ರವಾಹ ಭೀತಿಯನ್ನು ಎದುರಿಸುತ್ತಿದ್ದು, ರಾಜ್ಯದ ಹೆದ್ದಾರಿ ಮತ್ತು ರಸ್ತೆಗಳು ಕೊಚ್ಚಿಹೋಗಿದ್ದು, ಕೆರೆಕೋಡಿಗಳು ಒಡೆದು ಅಪಾರ ಹಾನಿಯುಂಟಾಗಿ ಜನರು ಸಂಕಷ್ಟಕ್ಕೆ ಒಳಗಾಗಿರುವ ಕುರಿತು.**

- ಶ್ರೀ ಎಸ್.ರವಿ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
- ಶ್ರೀ ಮಂಜುನಾಥ ಭಂಡಾರಿ
- ಶ್ರೀ ಎಸ್.ಅಂಗಾರ(ಬಂದರು, ಒಳನಾಡು ಸಾರಿಗೆ ಮತ್ತು ಮೀನುಗಾರಿಕೆ ಸಚಿವರು)

<><><>

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(873) 16.09.2022 10.50 **ಕೆಜಿ –ಕೆಎಸ್**

**ಕರ್ನಾಟಕ ವಿಧಾನ ಪರಿಷತ್ತು**

**ಶುಕ್ರವಾರ, 16ನೇ ಸೆಪ್ಟೆಂಬರ್ 2022**

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ**

**ಸಭಾಂಗಣದಲ್ಲಿ ಬೆಳಗ್ಗೆ 10 ಗಂಟೆ 59 ನಿಮಿಷಕ್ಕೆ ಸಮಾವೇಶಗೊಂಡಿತು**

**ಸಭಾಪತಿ (ಶ್ರೀ ರಘುನಾಥ್ ರಾವ್ ಮಲ್ಕಾಪೂರೆ) ಅವರು**

**ಪೀಠದಲ್ಲಿ ಉಪಸ್ಥಿತರಾದರು.**

## 1. ಪ್ರಕಟಣೆ

**ಸಭಾಪತಿಯವರು:-** ಕರ್ನಾಟಕ ಜನತಾ ದಳ(ಜಾತ್ಯಾತೀತ), ಪಕ್ಷದ ರಾಜ್ಯಾಧ್ಯಕ್ಷರಾದ ಶ್ರೀ ಸಿ.ಎಂ.ಇಬ್ರಾಹಿಂ ರವರು ದಿನಾಂಕ 14-09-2022 ರಂದು ತಮ್ಮ ಪತ್ರದಲ್ಲಿ ತಿಳಿಸಿದ ರೀತ್ಯಾ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡರವರನ್ನು ಕರ್ನಾಟಕ ಜನತಾ ದಳ(ಜಾತ್ಯಾತೀತ), ಶಾಸಕಾಂಗ ಪಕ್ಷದ ನಾಯಕರನ್ನಾಗಿ ಮಾನ್ಯತೆ ನೀಡಲಾಗಿದೆ ಎಂಬ ವಿಷಯವನ್ನು ಸದನದ ಗಮನಕ್ಕೆ ತರಲಾಗಿದೆ.

(ಮುಂದು.,)

**(874) 16-09-2022 (11.00) ಎಂವಿ-ಕೆಎಸ್**

**(ಸಭಾಪತಿಯವರ ಉಪಸ್ಥಿತಿ)**

**2. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ: 558**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ಕಲ್ಯಾಣ ಕರ್ನಾಟಕ ಭಾಗದಲ್ಲಿ ವಿಶೇಷವಾಗಿ ಗುಲ್ಬರ್ಗ, ಬೀದರ್, ರಾಯಚೂರು ಮತ್ತು ಇತ್ಯಾದಿ ಜಿಲ್ಲೆಗಳಲ್ಲಿ ಶೇಕಡಾ 80ರಷ್ಟು ರೈತರು ಮಳೆಯ ಆಧಾರದ ಮೇಲೆ ಬೆಳೆಯನ್ನು ಬೆಳೆಯುತ್ತಾರೆ. ಅಲ್ಲಿ irrigation comparatively ನಲ್ಲಿ ಬಹಳ ಕಡಿಮೆ ಇದೆ. ಒಂದು ರೀತಿಯಲ್ಲಿ ಅವರೆಲ್ಲರೂ ಸಹ ಈ ಬೆಳೆ ವಿಮೆಯ ಮೇಲೆ ಅವಲಂಭಿತರಾಗಿರುತ್ತಾರೆ. ಇಂತಹ ಒಂದು ಸಂದರ್ಭದಲ್ಲಿ ವಿಮಾ ಕಂಪನಿಯವರು ಸಮಯಕ್ಕೆ ತಕ್ಕಂತೆ ವಿಮಾ ಹಣವನ್ನು ನೀಡಲಿಲ್ಲವೆಂದರೆ ರೈತರಿಗೆ ಬಹಳ ತೊಂದರೆಯಾಗುತ್ತದೆ. ಆ ರೈತರಿಗೆ ಮತ್ಯಾವುದೇ ಬೇರೆ ದಾರಿಯಿಲ್ಲ. ಈ ಕಾರಣದಿಂದ ಆತ್ಮಹತ್ಯೆ ಮಾಡಿಕೊಳ್ಳುವಂತಹ ಸ್ಥಿತಿಗತಿಯನ್ನು ನೋಡುತ್ತಿದ್ದೇವೆ. 2018-19ನೇ ಸಾಲಿನಲ್ಲಿ ಸುಮಾರು 1,437 ರೈತರಿಗೆ 92.88 ಲಕ್ಷ ರೂಪಾಯಿ, ಅಂದರೆ ಒಂದು ಕೋಟಿ ರೂಪಾಯಿಗಳಷ್ಟು ಬೆಳೆ ವಿಮೆ ಸಿಕ್ಕಿಲ್ಲ. ಅದೇ ರೀತಿಯಾಗಿ 2019-20ನೇ ಸಾಲಿನಲ್ಲಿ ಸುಮಾರು 313 ರೈತರಿಗೆ ಬೆಳೆ ಪರಿಹಾರದ ಹಣ ಸಿಕ್ಕಿಲ್ಲ. ಈ ರೀತಿ ವಿಳಂಭವಾಗುವುದಕ್ಕೆ ಕಾರಣವೇನು ಎಂದು ಕೇಳಬಯಸುತ್ತೇನೆ. ಹೆಚ್ಚು ಕಡಿಮೆ ಸುಮಾರು 42 ಲಕ್ಷ ರೂಪಾಯಿಗಳ ಬೆಳೆ ಪರಿಹಾರ ನೀಡಬೇಕಾಗಿದೆ. ಈಗಾಗಲೇ ಇದಕ್ಕೆ ಸಾಕಷ್ಟು ವಿಳಂಭವಾಗಿದೆ. ನಮ್ಮ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆ ವಿಮೆಯ ನೋಂದಣಿಯನ್ನು ಬಹಳ ಚೆನ್ನಾಗಿ ಮಾಡಿಸಿದ್ದಾರೆ. ಅದೇ ರೀತಿ ಕಳೆದ ವರ್ಷ ಬಳ್ಳಾರಿ ಜಿಲ್ಲೆಯಲ್ಲಿ 29,233 ರೈತರಿಂದ ಬೆಳೆ ವಿಮೆಯ ನೋಂದಣಿಯಾಗಿದ್ದರೆ, ಈ ವರ್ಷ 15,997 ಬೆಳೆ ವಿಮೆಯ ನೋಂದಣಿಯಾಗಿದೆ. ಹೆಚ್ಚು ಕಡಿಮೆ ಅರ್ಧದಷ್ಟು ಬೆಳೆ ವಿಮೆ ನೋಂದಣಿಯನ್ನು ಕಡಿಮೆ ಮಾಡಿದ್ದಾರೆ. ದಯವಿಟ್ಟು ಇದಕ್ಕೆ ಇಲಾಖೆಯ ಕಡೆಯಿಂದ ದೊಡ್ಡ ಪ್ರಮಾಣದಲ್ಲಿ ಪ್ರಚಾರ ಮಾಡಬೇಕು. ಬೆಳೆ ವಿಮೆಯ ನೋಂದಣಿ ಮಾಡಿಸಿದರೆ,

ನನಗೆ ಅನಿಸಿದಂತೆ ರೈತರಿಗೆ ಪರಿಹಾರ ಸಿಗುತ್ತದೆ. ನನ್ನ ವಿನಂತಿ ಏನೆಂದರೆ, ಹಳೆ ಬಾಕಿ ಏನೆ ಇರಲಿ, ಏಕೆಂದರೆ, ನಾನು ಎರಡು-ಮೂರು ಅಧಿಕಾರಿಗಳ ಜೊತೆ ಸಂಪರ್ಕ ಮಾಡಿ ನೋಡಿದಾಗ, ಸರ್ಕಾರ ವಿಳಂಬ ನೀತಿಯನ್ನು ಅನುಸರಿಸಿಲ್ಲ ಮತ್ತು ಸರ್ಕಾರದಿಂದ ಯಾವುದೇ ರೀತಿಯ ವಿಳಂಬವಾಗಿಲ್ಲ. ಆದರೆ, ವಿಮಾ ಕಂಪನಿಗಳು ಇದನ್ನು ವಿಳಂಬ ಮಾಡುತ್ತಿದ್ದಾರೆ. ಇದರ ಬಗ್ಗೆ ಕೆಲವು ರೈತರು ಕೋರ್ಟ್‌ಗೆ ಹೋಗಿದ್ದಾರೆ. The Court has clearly said that, ರೈತರಿಗೆ ಬಡ್ಡಿ ಸಮೇತ ಪರಿಹಾರ ನೀಡಬೇಕೆಂದು ತಿಳಿಸಿದ್ದಾರೆ. ಈಗ ನೀವು ಕೊಡುವುದಿಲ್ಲವೆನ್ನುವುದಾದರೆ, ರೈತರು ಸರ್ಕಾರಕ್ಕೆ ಬಡ್ಡಿ ಇತ್ಯಾದಿ ಪರಿಹಾರ ನೀಡಿ ಎಂದು ಕೇಳುತ್ತಾರೆ. ಅದಕ್ಕೆ ದಯವಿಟ್ಟು ವಿಮಾ ಕಂಪನಿಗಳಿಂದ ಯಾವುದೇ ರೀತಿಯ ಸಮಸ್ಯೆಗಳು ಆಗಬಾರದು. ಆ ರೀತಿ ಏನಾದರೂ ಇದ್ದರೆ, ಅವರನ್ನು blacklist ಮಾಡಿ, ದೂರ ಇಡಿ ಎನ್ನುವುದು ನನ್ನ ವಿನಂತಿಯಾಗಿದೆ.

**ಶ್ರೀ ಬಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಗುಲ್ಬರ್ಗ ಜಿಲ್ಲೆಯ 313 ರೈತರ ಬೆಳೆ ವಿಮೆ ಬಾಕಿ ಇದೆ. ಅದು Aadhaar seat based ಆಗುತ್ತದೆ. Aadhaar seating, ಆದ ತಕ್ಷಣ ಆ 313 ರೈತರಿಗೆ ಬೆಳೆ ವಿಮೆಯನ್ನು ಬಿಡುಗಡೆ ಮಾಡುತ್ತೇವೆ. ಈಗ ಆಗಸ್ಟ್ ತಿಂಗಳ ಕೊನೆಗೆ 32,500 ರೈತರಿಗೆ 530 ಕೋಟಿ ರೂಪಾಯಿಗಳನ್ನು ಜೂನ್ ಒಂದೇ ತಿಂಗಳಿನಲ್ಲಿ ಬಿಡುಗಡೆ ಮಾಡಿದ್ದೇವೆ. ನಾನು ಇಲ್ಲಿಯವರೆಗೆ ವಿಮಾ ಕಂಪನಿಗಳ ಜೊತೆ ಸುಮಾರು ಒಂಬತ್ತು ಸಭೆಗಳನ್ನು ಮಾಡಿದ್ದೇನೆ. ಪ್ರತಿ ಬುಧವಾರ ಜಿಲ್ಲಾ ಮಟ್ಟದಲ್ಲಿ ಇಲಾಖೆಯ ಜಂಟಿ ನಿರ್ದೇಶಕರು ಸಭೆಗಳನ್ನು ಮಾಡುತ್ತಾರೆ. ಅದೇ ರೀತಿ ಪ್ರತಿ ಶುಕ್ರವಾರ ಇಲಾಖೆಯ ಆಯುಕ್ತರು ವಿಮಾ ಕಂಪನಿಗಳ ಜೊತೆ ಸಭೆ ಮಾಡುತ್ತಾರೆ. ಇದು 2014-15ರಿಂದ ಹಾಗೆಯೇ ಬಾಕಿ ಇತ್ತು. ನಾನು ಕೃಷಿ ಸಚಿವನಾದ ಮೇಲೆ ಸುಮಾರು ಸಭೆಗಳನ್ನು ಮಾಡಿ, ಇವತ್ತು ಅದನ್ನು ಅತ್ಯಂತ ಕೆಳಹಂತಕ್ಕೆ ತಂದಿದ್ದೇನೆ. ಸುಮಾರು 103 ಕೋಟಿ ರೂಪಾಯಿ Escrow Account ನಲ್ಲಿ ಇತ್ತು. ಅದು ಏಕೆ ಆ ರೀತಿ ಆಗಿತ್ತು ಎಂದರೆ, ಈಗ ಎನ್.ಪಿ.ಸಿ.ಐ. (National Payments Corporation of India) ಮುಖಾಂತರ ಪಾವತಿಯಾಗುತ್ತದೆ. ಮೊದಲು ಡಿ.ಬಿ.ಟಿ (Direct Benefit Transfer) ಮುಖಾಂತರ ಪಾವತಿಯಾಗುತ್ತಿತ್ತು. ಮೊದಲು ನೇರವಾಗಿ ಅವರ ಖಾತೆಗೆ ಕಳುಹಿಸುತ್ತಿದ್ದೆವು. ಆದರೆ, ಈಗ ಅಕೌಂಟ್ ಅನ್ನು Aadhaar Card based ಮಾಡಿಬಿಟ್ಟಿದ್ದಾರೆ. ಈಗ Aadhaar Card based ಮಾಡಿದರೆ, ರೈತರು ಕೆಲವು ಸಮಯದಲ್ಲಿ ಏನು ಮಾಡಿರುತ್ತಾರೆಂದರೆ, ಇಲ್ಲಿ ಅಕೌಂಟ್ ಅನ್ನು ತೆರೆಯುವಾಗ ಆಧಾರ್ ಕಾರ್ಡ್ ಅನ್ನು ಲಿಂಕ್ ಮಾಡಿರುತ್ತಾರೆ. ಅನಂತರ ಮತ್ತೊಂದು ಯೋಜನೆ ಬಂದಾಗ ಅದನ್ನು delink ಮಾಡಿ,

ಮತ್ತೊಂದು ಅಕೌಂಟ್‌ಗೆ ಆಧಾರ್ ಕಾರ್ಡ್ ಜೋಡಣೆ ಮಾಡಿದಾಗ, ಅದು ಆಗಿರುವುದಿಲ್ಲ. ಇಂತಹ ಸಂದರ್ಭದಲ್ಲಿ ನಾವು ವಿಮಾ ಕಂಪನಿಗಳಿಗೆ ಬಹಳ ತಾಕೀತು ಮಾಡಿದ್ದೇವೆ. ಅಂದರೆ, ವಿಮಾ ಹಣವನ್ನು ಕಟ್ಟಿಸಿಕೊಳ್ಳುವಾಗ ಯಾವ ರೀತಿಯ ಆಸಕ್ತಿ ಇರುತ್ತದೆ, ಅದೇ ರೀತಿ ವಿಮಾ ಪರಿಹಾರದ ಹಣ ಕೊಡುವಾಗ ಸಹ ಅಷ್ಟೇ ಆಸಕ್ತಿ ಇರಬೇಕಾಗುತ್ತದೆ ಎಂದು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಎಲ್ಲಾ ಕೇಂದ್ರಗಳಲ್ಲೂ ಕೂಡ ಈ ಪ್ರಧಾನಮಂತ್ರಿ ಫಸಲ್ ಬೀಮಾ ಯೋಜನೆಯ ಕೇಂದ್ರಗಳು ಇಲ್ಲ. ಆ ಕೇಂದ್ರಗಳು ರೈತರಿಗೆ ಬೇಕಾಗಿದೆ.

**ಶ್ರೀ ಬಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್. ಭೋಜೇಗೌಡರು ಕೇಳಿರುವುದಕ್ಕೆ ತಿಳಿಸುವುದೇನೆಂದರೆ, ಪ್ರತಿ ತಾಲ್ಲೂಕಿನ ರೈತ ಸಂಪರ್ಕ ಕೇಂದ್ರಗಳ ಕಛೇರಿಯಲ್ಲಿ ಒಬ್ಬೊಬ್ಬ ವಿಮಾ ಕಂಪನಿಯವರನ್ನು ಕೂರಿಸುವಂತಹ ಕೆಲಸ ಮಾಡಿದ್ದೇವೆ. ಈ ಮೊದಲು ಈ ರೀತಿ ಇರಲಿಲ್ಲ. ಏಕೆಂದರೆ, ಮೊದಲು ರೈತರು ಕೃಷಿ ಇಲಾಖೆಯನ್ನು ದೂಷಣೆ ಮಾಡುತ್ತಿದ್ದರು. ವಿಮಾ ಕಂಪನಿಗಳು ಬೆಂಗಳೂರು ಅಥವಾ ಮುಂಬೈಯಲ್ಲಿ ಇರಬಹುದು ಎನ್ನುವಂತಹ ವಿಚಾರ ಅವರಿಗೆ ಇತ್ತು. ಆದರೆ, ಈಗ ಅವರು ಅಲ್ಲಿ ಒಂದು ಬೋರ್ಡ್ ಹಾಕಿಕೊಳ್ಳಬೇಕು. ಅವರಿಗೆ ರೈತ ಸಂಪರ್ಕ ಕೇಂದ್ರದಲ್ಲಿಯೇ ಕುಳಿತುಕೊಳ್ಳಬೇಕೆಂದು ಕಡ್ಡಾಯ ಮಾಡಿದ್ದೇವೆ. ಪ್ರತಿ ಸಭೆಯಲ್ಲೂ ಕೂಡ ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಈ ವರ್ಷ ಸುಮಾರು 18.50 ಲಕ್ಷ ರೈತರು ನೋಂದಣಿ ಮಾಡಿಸಿಕೊಂಡಿದ್ದಾರೆ. ಈ ಬಾರಿ ಅತೀ ಹೆಚ್ಚು ರೈತರು ನೋಂದಣಿ ಮಾಡಿಕೊಂಡಿದ್ದಾರೆ. ಏಕೆಂದರೆ, ಈ ಬಾರಿ ಜಾಸ್ತಿ ಮಳೆಯಾಗಿದೆ. ಹಾಗಾಗಿ ನಾವು ಈಗ mid-season adversity claim ಮಾಡುವುದಕ್ಕೆ ಈಗಾಗಲೇ ಸುಮಾರು 27 ಜಿಲ್ಲೆಗಳಿಗೆ ತಿಳಿಸಿದ್ದೇವೆ. ಕಳೆದ ವರ್ಷಕ್ಕಿಂತ ಈ ವರ್ಷ ಏಳು ಲಕ್ಷ ರೈತರು ನೋಂದಾಯಿಸಿಕೊಂಡಿದ್ದಾರೆ. ನಾವು ವಿಮಾ ಕಂಪನಿಗಳಿಗೆ ಯಾವುದೇ ರೀತಿಯ ರಿಯಾಯಿತಿ ಅಥವಾ ಮುಲಾಜು ಇಟ್ಟುಕೊಂಡಿಲ್ಲ. ನಾನು ಅಧಿಕಾರಿಗಳ ಜೊತೆ ಸಭೆಯನ್ನು ಮಾಡಿ, ರೈತರಿಗೆ ಅನುಕೂಲವಾಗಬೇಕು ಎನ್ನುವಂತಹ ದೃಷ್ಟಿಯಿಂದ ಈ ಎಲ್ಲಾ ರೀತಿಯ ಕೆಲಸಗಳನ್ನು ಮಾಡುತ್ತಿದ್ದೇವೆ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ಪ್ರಧಾನಮಂತ್ರಿ ಫಸಲ್ ಬೀಮಾ ಯೋಜನೆ ಒಂದು ಒಳ್ಳೆಯ ಯೋಜನೆಯಾಗಿದೆ. ಇದರಲ್ಲಿ ಸರ್ಕಾರದ ಒಂದು ಒಳ್ಳೆಯ ಉದ್ದೇಶವಿದೆ.

ಮಾನ್ಯ ಸಚಿವರು ಸುಮಾರು ಒಂಬತ್ತು ಸಭೆಗಳನ್ನು ಮಾಡಿ, ಒಂದು ಒಳ್ಳೆಯ ಪ್ರಯತ್ನ ಮಾಡುತ್ತಿದ್ದಾರೆ. ಆದರೆ, ಈ ವರ್ಷದ ಬೆಳೆ ವಿಮೆಯನ್ನು ಯಾವಾಗ ಕೊಡುತ್ತಾರೆಂದು ತಿಳಿಸಲಿ.

**ಶ್ರೀ ಬಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮೊದಲು ಏನು ಇತ್ತು ಎಂದರೆ, 2021-22ನೇ ಸಾಲಿನ ಮಾರ್ಚ್‌ನಲ್ಲಿ ನಾವು ಅದನ್ನು ಪರಿಗಣನೆಗೆ ತೆಗೆದುಕೊಂಡು ಮಾಡುತ್ತಿದ್ದೆವು. ಆದರೆ, ನಾವು ಈ ವರ್ಷ ಏನು ಮಾಡಿದ್ದೇವೆಂದರೆ, ಯಾವುದು ದೀರ್ಘ ಬೆಳೆ ಇದೆ, ಅದನ್ನು ಬಿಟ್ಟು ಬಿಡುವುದು. ಡಿಸೆಂಬರ್‌ವರೆಗೆ ಎಷ್ಟು ಆಗಿರುತ್ತದೆ, ಅಷ್ಟನ್ನು ನೋಂದಣಿ ಮಾಡಿ, ಡಿಸೆಂಬರ್‌ಗೆ ಮುಂಗಾರಿನ ಹಣ ಕೊಡಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ಅದೇ ರೀತಿ ವಿಮಾ ಕಂಪನಿಗಳಿಗೂ ಕೂಡ ಸೂಚನೆಯನ್ನು ನೀಡಿದ್ದೇವೆ.

**ಪ್ರಶ್ನೆ ಸಂಖ್ಯೆ: 559+582**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಅಬ್ದುಲ್ ಜಬ್ಬರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಇವತ್ತಿನವರೆಗೆ ದಾವಣಗೆರೆ ಜಿಲ್ಲೆಯಲ್ಲಿ ಸುಮಾರು 13,778 ನಷ್ಟವಾಗಿರುವುದು ಕಂಡು ಬಂದಿದೆ. ಅದರಲ್ಲಿ ಕೇವಲ ಹನ್ನೊಂದು ಸಾವಿರ ಜನರಿಗೆ ಪರಿಹಾರದ ಹಣ ನೀಡಲಾಗಿದೆ. ಇನ್ನುಳಿದ ಬಾಕಿ ಜನರಿಗೆ ಪರಿಹಾರದ ಹಣ ನೀಡಿಲ್ಲವೆಂದು ಹೇಳುತ್ತಿದ್ದಾರೆ. ಅಲ್ಲಿ ಬಹಳ ಹೆಚ್ಚು ನಷ್ಟವಾಗಿದೆ. ಮಾನ್ಯ ಮಂತ್ರಿಗಳು ನಮ್ಮ ಪಕ್ಕದ ಜಿಲ್ಲೆಯವರು. ಅಲ್ಲಿ, ಎಲೆ, ಭತ್ತ ಮತ್ತು ಈ ರೀತಿಯ ಬಹಳ ನಮೂನೆಯ ಕೃಷಿ ಬೆಳೆಗಳನ್ನು ಬೆಳೆಯುತ್ತಾರೆ. ಅದಕ್ಕೆ ಸರಿಯಾದ ರೀತಿಯಲ್ಲಿ ಪರಿಹಾರ ನೀಡಿಲ್ಲ. ಇವತ್ತಿನವರೆಗೆ ಕೇಂದ್ರ ಸರ್ಕಾರದ ಎನ್.ಡಿ.ಆರ್.ಎಫ್ (National Disaster Response Fund) ನಿಂದ enhancement ಸಿಕ್ಕಿಲ್ಲವೆನಿಸುತ್ತದೆ. ಈ ಹಿಂದೆ 2020ರಲ್ಲಿ ಆಗಬೇಕಾಗಿತ್ತು, ಆದರೆ, 2022 ಆದರೂ ಸಹ ಇಲ್ಲಿಯವರೆಗೂ ಸಹ enhance ಆಗಿಲ್ಲ. ಈಗ ರೈತರಿಗೆ ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರದಿಂದ ಎಷ್ಟು ಪರಿಹಾರ ನೀಡಿದ್ದಾರೆಂದು ತಿಳಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಬಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ವರ್ಷ ಮಳೆಯಿಂದ ಹಾನಿಯಾಗಿದ್ದು, ಅದರಲ್ಲಿ ಸುಮಾರು 7,61,438 ಹೆಕ್ಟೇರ್‌ನ ಕೃಷಿ ಪ್ರದೇಶಕ್ಕೆ ನಷ್ಟವಾಗಿದೆ. ಕೃಷಿ ಇಲಾಖೆಯಿಂದ ಮೊದಲು eyesight ನಲ್ಲಿ ಸರ್ವೇ ಮಾಡಿಕೊಳ್ಳುತ್ತೇವೆ. ಅನಂತರ ಕಂದಾಯ ಇಲಾಖೆಯ ಅಧಿಕಾರಿಗಳು ಮತ್ತು ಕೃಷಿ ಇಲಾಖೆಯ ಅಧಿಕಾರಿಗಳು ಜಂಟಿ ಸರ್ವೇ ಮಾಡುತ್ತಾರೆ. ಅದಾದ ನಂತರ ಕಂದಾಯ ಇಲಾಖೆಯವರು ಅದನ್ನು ಪರಿಹಾರದಲ್ಲಿ ನೋಂದಾಯಿಸಬೇಕಾಗುತ್ತದೆ. ಆ ನೋಂದಾವಣಿ ಹೇಗೆ ಆಗುತ್ತದೆ, ಅದರ ಪ್ರಕಾರವಾಗಿ ಈಗಾಗಲೇ ಹಣವನ್ನು ಬಿಡುಗಡೆ ಮಾಡಿಕೊಂಡು ಬಂದಿದ್ದೇವೆ.

**(ಮುಂದು)**

(875) 16.09.2022 11.10 LL-GR **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಿ.ಸಿ. ಪಾಟೀಲ್(ಮುಂದು):-**

ಇಲ್ಲಿಯವರೆಗೆ ಕಂದಾಯ ಇಲಾಖೆಯಿಂದ ಸುಮಾರು 116.39 ಲಕ್ಷ ರೂಪಾಯಿಗಳ ಹಣ ಬಿಡುಗಡೆಯಾಗಿರುತ್ತದೆ. ದಾವಣಗೆರೆ ಜಿಲ್ಲೆಗೆ 10 ಲಕ್ಷದ 6 ಸಾವಿರ ರೂಪಾಯಿ ಬಿಡುಗಡೆಯಾಗಿರುತ್ತದೆ. ಪರಿಹಾರದಲ್ಲಿ ನೊಂದಾವಣೆಯಾಗಬೇಕು. ನಮ್ಮ ಜಂಟಿ ಸರ್ವೆಯಾದ ನಂತರ, ಎಷ್ಟೆಷ್ಟು ನೊಂದಾವಣೆ ಆಗುತ್ತದೆ. ಆ ಪ್ರಕಾರದಲ್ಲಿ ಸರ್ಕಾರ ಪರಿಹಾರ ಹಣ ಬಿಡುಗಡೆ ಮಾಡುವುದಕ್ಕೆ ಸಿದ್ಧವಿದೆ. ನಿನ್ನೆಯ ದಿವಸ ನಮಗೆ ಕಂದಾಯ ಅಧಿಕಾರಿಗಳು ಹೇಳಿದ ಹಾಗೆ, ಇವೊತ್ತು ಅಥವಾ ನಾಳೆ ಇನ್ನು 221 ಕೋಟಿ ರೂಪಾಯಿ ಪರಿಹಾರ ಹಣ ತಕ್ಷಣ ಬಿಡುಗಡೆ ಆಗುತ್ತದೆ. ಅದರ ಬಗ್ಗೆ ಯಾವುದೇ ಆತಂಕ ಬೇಡ. ತಮ್ಮ ಮಾಹಿತಿಗೆ ಹೇಳುವುದೇನೆಂದರೆ, ಮೊದಲು ಎನ್.ಡಿ.ಆರ್.ಎಫ್., ಮತ್ತು ಎಸ್.ಡಿ.ಆರ್.ಎಫ್., ರೂಲ್ಸ್ ಪ್ರಕಾರ ಪ್ರತಿ ಹೆಕ್ಟೇರ್‌ಗೆ 6,800 ರೂಪಾಯಿ ಪರಿಹಾರ ಇತ್ತು. ಈಗ ಅದನ್ನು 13,600 ರೂಪಾಯಿಗೆ ಏರಿಸಿದ್ದೇವೆ. ನೀರಾವರಿ ಭೂಮಿಗೆ ಮೊದಲು 13 ಸಾವಿರ ರೂಪಾಯಿ ಪರಿಹಾರ ಇದ್ದದ್ದನ್ನು, 25 ಸಾವಿರ ರೂಪಾಯಿ ಪ್ರತಿ ಹೆಕ್ಟೇರ್‌ಗೆ ಮಾಡಿದ್ದೇವೆ ಮತ್ತು ತೋಟಗಾರಿಕೆ ಬೆಳೆಗಳಿಗೆ ಪ್ರತಿ ಹೆಕ್ಟೇರ್‌ಗೆ 18 ಸಾವಿರ ರೂಪಾಯಿ ಇತ್ತು. ಅದನ್ನು ನಾವು ಈಗ 28 ಸಾವಿರ ರೂಪಾಯಿಗಳಿಗೆ ಏರಿಸಿದ್ದೇವೆ. ಈ ಪರಿಹಾರ ಹಣಕ್ಕೆ ನಮ್ಮ ಕೇಂದ್ರ ಸರ್ಕಾರದಿಂದ ಬದಲಾವಣೆ ಆಗಿರುವುದಿಲ್ಲ. ಆದರೆ, ರಾಜ್ಯ ಸರ್ಕಾರ ಕಾಳಜಿ ತೆಗೆದುಕೊಂಡು ನಮ್ಮ ಆರ್ಥಿಕ ಪರಿಸ್ಥಿತಿಯಿಂದ ಅದನ್ನು ನಿಭಾಯಿಸುವಂತಹ ಕೆಲಸವನ್ನು ನಾವು ಮಾಡುತ್ತಿದ್ದೇವೆ.

**ಶ್ರೀ ಕೆ. ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೇ, ಹಾಗಾದರೆ, ಕೇಂದ್ರ ಸರ್ಕಾರ ಏನೂ ಕೊಟ್ಟಿರುವುದಿಲ್ಲ.

**ಶ್ರೀ ಬಿ.ಸಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ ಎಂದು ಕಂದಾಯ ಇಲಾಖೆಯವರನ್ನು ಕೇಳಬೇಕು. ಅದು ನನ್ನ ವ್ಯಾಪ್ತಿಗೆ ಬರುವುದಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಟಿ.ಎ. ಶರವಣರವರು ಸಹ ತಮ್ಮ ಪ್ರಶ್ನೆಯನ್ನು ಕೇಳುತ್ತಾರೆ. ಎರಡೂ ಪ್ರಶ್ನೆಗಳಗೂ ಒಟ್ಟಿಗೆ ಉತ್ತರ ನೀಡಿ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಅಬ್ದುಲ್ ಜಬ್ಬಾರ್‌ರವರು ಒಂದು ಒಳ್ಳೆಯ ವ್ಯಾಲಿಡ್ ಪಾಯಿಂಟ್ ರೈಸ್ ಮಾಡಿರುತ್ತಾರೆ. ಇಲ್ಲಿ ಏನಾಗಿದೆಯೆಂದರೆ ಒಂದೆಡೆ ಸರ್ಕಾರದ ನಿರ್ಲಕ್ಷ್ಯ. ಮತ್ತೊಂದೆಡೆ ಪ್ರಕೃತಿಯ ಚೆಲ್ಲಾಟ. ಇವೊತ್ತಿನ ದಿವಸ ಡಬಲ್ ಇಂಜಿನ್ ಸರ್ಕಾರ ನಡೆಯುತ್ತಿದೆ. ಅಂದರೆ, ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಒಂದೇ ಪಕ್ಷದ ಸರ್ಕಾರ ನಡೆಯುತ್ತಿದೆ. ಹಾಗಾಗಿ, ರಾಜ್ಯ ಸರ್ಕಾರ ಕೇಂದ್ರ ಸರ್ಕಾರದಿಂದ ಕೇಳಿರತಕ್ಕಂತಹ ಹಣ ಎಷ್ಟು ಮತ್ತು ಅದಕ್ಕೆ ಕೇಂದ್ರ ಕೊಟ್ಟಿರತಕ್ಕಂತಹ ಹಣ ಎಷ್ಟು ಎಂಬುದನ್ನು ಹೇಳಲಿ. ಇವೊತ್ತಿನ ದಿವಸ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರ ಪರಿಹಾರ ಕೇಳಿರುವಂಥದ್ದು 7,600 ಕೋಟಿ ರೂಪಾಯಿಗಳು. ಅದಕ್ಕೆ ಕೇಂದ್ರ ಸರ್ಕಾರ ಕೊಟ್ಟಿರುವ ಪರಿಹಾರ ಹಣ ಎಷ್ಟೆಂದರೆ ಕೇವಲ 325 ಕೋಟಿ ರೂಪಾಯಿಗಳು. ಏತಕ್ಕೋಸ್ಕರ ಈ ರೀತಿ ಮಾಡುತ್ತಿದೆ? ಏಕೆಂದರೆ, ಕೇಂದ್ರದಲ್ಲಿಯೂ ಸಹ ಇವರದ್ದೇ ಆದಂತಹ ಸರ್ಕಾರ ಇದೆಯೆಲ್ಲಾ. ಡಬಲ್ ಇಂಜಿನ್ ಸರ್ಕಾರಕ್ಕೆ ಇಷ್ಟೊಂದು ತಾರತಮ್ಯ ಇದೆಯೇ?

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಉತ್ತರ ನೀಡಿ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಾನು ನನ್ನ ಪ್ರಶ್ನೆಯನ್ನು ಕೇಳಿಬಿಡುತ್ತೇನೆ. ಆ ನಂತರ ಅವರು ನನ್ನ ಪ್ರಶ್ನೆಗೆ ಉತ್ತರ ನೀಡಲಿ.

**ಸಭಾಪತಿಯವರು:-** ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ನಾನು ನನ್ನ ಪ್ರಶ್ನೆಯನ್ನೇ ಕೇಳುತ್ತಿದ್ದೇನೆ. ಒಂದು ಜಿಲ್ಲೆಯಲ್ಲಿ ಎಷ್ಟು ಜನರಿಗೆ, ಎಷ್ಟೆಷ್ಟು ಪರಿಹಾರ ಹಣವನ್ನು ಎನ್.ಡಿ.ಆರ್.ಎಫ್., ನಲ್ಲಿ ಕೊಟ್ಟಿದ್ದಾರೆಂಬ ಬಗ್ಗೆ ಸಂಪೂರ್ಣ ವಿವರ ನೀಡಲಿ. ಉದಾಹರಣೆಗೆ, ದಾವಣಗೆರೆ ಜಿಲ್ಲೆಯ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಅದರಂತೆ, ಎಷ್ಟು ರೈತರಿಗೆ, ಎಷ್ಟೆಷ್ಟು ಪರಿಹಾರ ಕೊಟ್ಟಿದ್ದಾರೆಂಬ

ಮಾಹಿತಿಯನ್ನು ನಮಗೆ ನೀಡಲಿ. ಒಂದು ಜಿಲ್ಲೆಯನ್ನು ನಾವು ಮಾದರಿ ತೆಗೆದುಕೊಳ್ಳುತ್ತೇವೆ. ಇವೊತ್ತಿನ ದಿವಸ ರೈತ/ಅನ್ನದಾತ ರಾಷ್ಟ್ರದ ಬೆನ್ನೆಲುಬು ಎಂದು ಕೇವಲ ಭಾಷಣದಲ್ಲಿ ಬಿಗಿಯುತ್ತೇವೆ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇವೊತ್ತಿನ ದಿವಸ ನಿಜವಾದ ಫಲಾನುಭವಿಗಳಿಗೆ ಇಂತಹ ಸಂಕಷ್ಟದ ಪರಿಸ್ಥಿತಿಯಲ್ಲಿ ಸರ್ಕಾರ ನೆರವಿಗೆ ಬರಬೇಕಾಗಿತ್ತು. ಆದರೆ, ನಿರೀಕ್ಷಿತ ಮಟ್ಟದಲ್ಲಿ ಅದು ಆಗುತ್ತಿಲ್ಲ.

**ಸಭಾಪತಿಯವರು:-** ಮಾನ್ಯ ಶರವಣರವರೇ, ಮಾನ್ಯ ಸಚಿವರು ಉತ್ತರ ನೀಡುವುದನ್ನು ತಾವು ಕೇಳಿ.

**ಶ್ರೀ ಬಿ.ಸಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಡಬಲ್ ಇಂಜಿನ್ ಸರ್ಕಾರ ಸರಿಯಾದ ಕೆಲಸವನ್ನೇ ಮಾಡುತ್ತಿದೆ. ಮೊನ್ನೆಯ ದಿವಸ ಕೇಂದ್ರದ ಬರ ಅಧ್ಯಯನ ಸಮಿತಿಯಿಂದ ನಮ್ಮ ರಾಜ್ಯಕ್ಕೆ ಅಧಿಕಾರಿಗಳ ಒಂದು ತಂಡ ಬಂದಿದ್ದು, ಅವರು, ಮಾನ್ಯ ಮುಖ್ಯಮಂತ್ರಿಗಳು, ಕೃಷಿ ಮಂತ್ರಿಗಳು, ತೋಟಗಾರಿಕೆ ಮಂತ್ರಿಗಳು ಮತ್ತು ಕಂದಾಯ ಮಂತ್ರಿಗಳ ಜೊತೆ ಒಂದು ಸಭೆ ಮಾಡಿರುತ್ತಾರೆ. ಆ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೆಲವೊಂದು ಸಲಹೆಗಳನ್ನು ನೀಡಿರುತ್ತಾರೆ. ಅದರಲ್ಲಿ ಕೇಂದ್ರ ಅಧ್ಯಯನ ಸಮಿತಿಯು ಏನು ಚಾರ್ಟ್ ಹಾಕಿಕೊಂಡಿದ್ದರು, ಆ ಚಾರ್ಟ್ ಪ್ರಕಾರ ಆಗುವುದಿಲ್ಲ. ಈ ಬಗ್ಗೆ ನನಗೆ ಗೊತ್ತಿದೆ. ಹಾಗಾಗಿ, ತಾವು ಮೊದಲು ಬೆಂಗಳೂರು ನಗರ ವೀಕ್ಷಣೆ ಮಾಡಿ. ಆ ನಂತರ ಸೌತ್ ಕೆನರಾ ಹಾಗೂ ಎಲ್ಲಿ ನೆರೆ ಹಾನಿಯಾಗಿದೆ ಅಲ್ಲಿಗೆ ಭೇಟಿ ನೀಡಿ ಪರಿಶೀಲಿಸಬೇಕೆಂದು ಹೇಳಿದರು. ಅದಕ್ಕಾಗಿ, ನಾವು ಅವರಿಗೆ ಹೆಲಿಕ್ಯಾಪ್ಟರ್‌ನ್ನು ಸಹ ಒದಗಿಸಿದ್ದು, ಅವರು ಮೂರು ದಿವಸ ಕಾಲ ನಮ್ಮ ರಾಜ್ಯದಲ್ಲಿ ಅಧ್ಯಯನ ಮಾಡಿ ಹೋಗಿರುತ್ತಾರೆ. ನಾವು 7,600 ಕೋಟಿ ರೂಪಾಯಿ ಪರಿಹಾರ ಹಣ ಕೇಳಿದ್ದೇವೆ. ಆದರೆ, ಪರಿಹಾರವನ್ನು ಮೊದಲು ನಾವು ದಾಖಲು ಮಾಡಬೇಕಾಗುತ್ತದೆ. ಆ ನಂತರ, ಅವರು ಹಣ ಬಿಡುಗಡೆ ಮಾಡುತ್ತಾರೆ. ಅದರ ಬಗ್ಗೆ ಯಾವುದೇ ಸಂಶಯ ಬೇಡ. ಕೇಂದ್ರ ಸರ್ಕಾರದಿಂದ ಸರಿಯಾದ ಪರಿಹಾರ ನಮಗೆ ಸಿಗುತ್ತದೆ. ಇದರ ಜೊತೆಗೆ, ಮಾನ್ಯ ಸದಸ್ಯರು ಎಷ್ಟು ರೈತರಿಗೆ ಪರಿಹಾರ ಹಣ ಬಿಡುಗಡೆ ಮಾಡಲಾಗಿದೆ ಎಂಬ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಅದರಂತೆ, ಕಲಬುರಗಿ ಜಿಲ್ಲೆಯಲ್ಲಿ 33,487 ರೈತರಿಗೆ ಪರಿಹಾರ ಕೊಟ್ಟಿದ್ದೇವೆ. ಅಂದರೆ, 30 ಲಕ್ಷದ 79 ಸಾವಿರ ಪರಿಹಾರ ಹಣ ಕೊಟ್ಟಿದ್ದೇವೆ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು 33 ಸಾವಿರ ಎಂದು ಒಂದು ಬಾರಿ, 3 ಲಕ್ಷ ಎಂದು ಮತ್ತೊಂದು ಬಾರಿ ಹೇಳುತ್ತಿದ್ದಾರೆ. ಹಾಗಾದರೆ, ಒಬ್ಬ ರೈತರಿಗೆ ಎಷ್ಟು ಪರಿಹಾರ ನೀಡಿರುತ್ತಾರೆ?

**ಸಭಾಪತಿಯವರು:-** ಮಾನ್ಯ ಸಚಿವರು ಪೂರ್ಣ ಉತ್ತರ ಹೇಳಲಿ.

**ಶ್ರೀ ಬಿ.ಸಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, 30 ಲಕ್ಷದ 79 ಸಾವಿರ ಪರಿಹಾರ ಹಣ ನೀಡಿದ್ದೇವೆ. ಒಂದು ಹೆಕ್ಟೇರ್ ಪ್ರದೇಶಕ್ಕೆ 13,600 ರೂಪಾಯಿ ಪರಿಹಾರ ಹಣ ಬರುತ್ತದೆ. ಅದರಲ್ಲಿ ತೋಟಗಾರಿಕೆ ಇಲಾಖೆಗೆ ಪ್ರತ್ಯೇಕವಾಗಿರುತ್ತದೆ. ಅದು ಅವರಿಗೆ ಗೊತ್ತಿರುತ್ತದೆ.

**ಸಭಾಪತಿಯವರು:-** ಮಾನ್ಯ ಸಚಿವರು ಕೃಷಿ ಇಲಾಖೆಗೆ ಸಂಬಂಧಪಟ್ಟ ಮಾಹಿತಿಯನ್ನು ಮಾತ್ರ ಹೇಳುತ್ತಿದ್ದಾರೆ.

**ಶ್ರೀ ಬಿ.ಸಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಹೌದು. ನಾನು ಕೃಷಿ ಇಲಾಖೆಯ ಮಾಹಿತಿ ಮಾತ್ರ ಹೇಳುತ್ತೇನೆ. ನೀರಾವರಿ ಭೂಮಿಗೆ 25 ಸಾವಿರ ರೂಪಾಯಿ ಮತ್ತು ತೋಟಗಾರಿಕೆ ಬೆಳೆಗಳಿಗೆ 28 ಸಾವಿರ ರೂಪಾಯಿ ಪ್ರತಿ ಹೆಕ್ಟೇರ್‌ಗೆ ಪರಿಹಾರ ಬರುತ್ತದೆ. ಈ ವಿಷಯದಲ್ಲಿ ಆತುರ ಪಡುವಂಥದ್ದು, ಸಂಶಯ ಪಡುವಂಥದ್ದು ಅಥವಾ ಕಾತುರ ಮಾಡುವಂತಹ ಅವಶ್ಯಕತೆ ಇರುವುದಿಲ್ಲ. ಉದಾಹರಣೆಗೆ, ಬೆಳಗಾವಿ ಜಿಲ್ಲೆಯಲ್ಲಿ 11,234 ರೈತರಿಗೆ ಪರಿಹಾರ ಕೊಟ್ಟಿದ್ದೇವೆ. ಗದಗ ಜಿಲ್ಲೆಯಲ್ಲಿ 11,716 ರೈತರಿಗೆ ಪರಿಹಾರ ನೀಡಿರುತ್ತೇವೆ. ಈ ಬಗ್ಗೆ ನನ್ನ ಬಳಿ ಪಟ್ಟಿ ಇದೆ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಅದನ್ನು ನಾನು ಅನುಬಂಧದಲ್ಲಿ ನೋಡಿರುತ್ತೇನೆ.

**ಶ್ರೀ ಬಿ.ಸಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಮಾಹಿತಿ ಉತ್ತರದಲ್ಲಿ ಬಂದಿರುವುದಿಲ್ಲ. ತದನಂತರ, ಇದನ್ನು ಟೈಪ್ ಮಾಡಿಸಿ ಮಾನ್ಯ ಸದಸ್ಯರಿಗೆ ನೀಡುತ್ತೇನೆ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಚಿವರೇ, ಆಯಿತು ನಮಗೆ ಒಂದು ಪ್ರತಿ ನೀಡಿ.

**ಶ್ರೀ ಕೆ. ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೇ, ಇಷ್ಟೆಲ್ಲಾ ಅನಾಹುತ ಆದರೂ ಸಹ ಕೇಂದ್ರ ಸರ್ಕಾರ ನಮ್ಮ ನೆರವಿಗೆ ಬರುವುದಿಲ್ಲವೆನ್ನುವುದು ಬಹಳ ದುಃಖದ ವಿಷಯವಾಗಿದೆ. ಏಕೆಂದರೆ, ಇಷ್ಟೊತ್ತಿಗೆ ರೈತರಿಗೆ ಪರಿಹಾರ ನೀಡಬೇಕಾಗಿತ್ತು. ಈ ವರ್ಷ ಬಹಳ ದೊಡ್ಡ ಮಟ್ಟದ ಮಳೆಯಾಗಿರುವುದರಿಂದ, ರೈತರಿಗೆ ಬಹಳ ಅನ್ಯಾಯ ಆಗಿರುತ್ತದೆ. ಹಾಗಾಗಿ, ಕೇಂದ್ರ ಸರ್ಕಾರ ನಮ್ಮ ನೆರವಿಗೆ ಬರಬೇಕಾಗಿತ್ತು.

**ಶ್ರೀ ಬಿ.ಸಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದೇ ತಿಂಗಳು 9, 10 ಮತ್ತು 11 ನೇ ತಾರೀಖಿನಂದು ಕೇಂದ್ರ ಅಧ್ಯಯನ ಸಮಿತಿ ನಮ್ಮ ರಾಜ್ಯಕ್ಕೆ ಬಂದು ಸರ್ವೆ ಮಾಡಿಕೊಂಡು ಹೋಗಿರುತ್ತಾರೆ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಕೇಂದ್ರ ಅಧ್ಯಯನ ಸಮಿತಿ ಸರ್ವೆ ಮಾಡಿಕೊಂಡು ಹೋಗಿದ್ದಾರೆನ್ನುವುದು ಸರಿ. ಆದರೆ, ಇಷ್ಟೊಂದು ದೊಡ್ಡ ಮಟ್ಟದ ಪರಿಹಾರ ಹಣವನ್ನು ಬಿಡುಗಡೆ ಮಾಡುವುದಕ್ಕೆ ನಮ್ಮ ರಾಜ್ಯದಿಂದ ನಿಯೋಗ ಕರೆದುಕೊಂಡು ಹೋಗುತ್ತಾರೆಯೇ ಅಥವಾ ಯಾವ ರೀತಿ ಹಣ ಬಿಡುಗಡೆ ಮಾಡುತ್ತಾರೆಂಬ ಬಗ್ಗೆ ಒಂದು ಯೋಜನೆ ಹಾಕಿಕೊಳ್ಳಲಿ.

**ಶ್ರೀ ಬಿ.ಸಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಕೇಂದ್ರ ಅಧ್ಯಯನ ಸಮಿತಿ ನಮ್ಮ ರಾಜ್ಯಕ್ಕೆ ಬಂದು ಸರ್ವೆ ಮಾಡಿಕೊಂಡು ಹೋಗಿರುತ್ತಾರೆ. ಅವರು ತಮ್ಮ ವರದಿಯನ್ನು ಕೇಂದ್ರ ಸರ್ಕಾರಕ್ಕೆ ನೀಡಿದಾಗ, ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯಕ್ಕೆ ಪರಿಹಾರ ಹಣ ಬಿಡುಗಡೆಯಾಗುತ್ತದೆ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಸದರಿ ಪರಿಹಾರ ಹಣ ದೊಡ್ಡ ಮಟ್ಟದಲ್ಲಿ ಬರಬೇಕು. ಆ ನಿಟ್ಟಿನಲ್ಲಿ ಮಾನ್ಯ ಸಚಿವರು ಪ್ರಯತ್ನ ಮಾಡಬೇಕು.

**ಶ್ರೀ ಬಿ.ಸಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಖಂಡಿತವಾಗಿ ಅದು ಆಗುತ್ತದೆ.

**ಪ್ರಶ್ನೆ ಸಂಖ್ಯೆ: ೨೦೪**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ರೈತರಿಗೆ ಅವಶ್ಯಕವಾಗಿ ಬೇಕಾದಂತಹ ಉಗ್ರಾಣ, ಶೀತಲ ಕೇಂದ್ರ ಮತ್ತು ಸಂಸ್ಕರಣಾ ಘಟಕಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ನಾನು ಪ್ರಶ್ನೆ ಕೇಳಿದ್ದೆನು. ಅದಕ್ಕೆ, "ಗಮನಕ್ಕೆ ಬಂದಿದೆ" ಎಂದು ಉತ್ತರ ನೀಡಿರುತ್ತಾರೆ. ಉಗ್ರಾಣ ಕೇಂದ್ರಗಳು ರಾಜ್ಯವ್ಯಾಪಿ ಬೇರೆ ಬೇರೆ ಯೋಜನೆಯಲ್ಲಿ ಅಂದರೆ, ಕರ್ನಾಟಕ ರಾಜ್ಯ ಉಗ್ರಾಣ ನಿಗಮ ಆಗಬಹುದು ಅಥವಾ ಗ್ರಾಮೀಣ ಭಂಡಾರ ಯೋಜನೆ ಇರಬಹುದು. ಇದರಲ್ಲಿ ಸಾಕಷ್ಟು ಉಗ್ರಾಣಗಳನ್ನು ಮಾಡಿದ್ದಾರೆ. ಅದರಲ್ಲಿ ಉಗ್ರಾಣ ನಿಗಮದಿಂದ ದಾವಣಗೆರೆ ಜಿಲ್ಲೆಯಲ್ಲಿ ಅತಿ ಹೆಚ್ಚು ಅಂದರೆ, ಸುಮಾರು 74,285 ಮೆಟ್ರಿಕ್ ಟನ್ ಸಾಮರ್ಥ್ಯದ ಉಗ್ರಾಣವನ್ನು ನಿರ್ಮಾಣ ಮಾಡಿದ್ದಾರೆ. ಅದೇ ರೀತಿ, ಚಿತ್ರದುರ್ಗ ಜಿಲ್ಲೆಯಲ್ಲಿ, ಹಾವೇರಿ ಜಿಲ್ಲೆಯಲ್ಲಿ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಉಗ್ರಾಣಗಳನ್ನು ನಿರ್ಮಾಣ ಮಾಡಿದ್ದಾರೆ. ನಾನು ಏತಕ್ಕೆ ಈ ಜಿಲ್ಲೆಗಳನ್ನು ಮಾತ್ರ ಹೇಳುತ್ತಿದ್ದೇನೆಂದರೆ, ಮಾನ್ಯ ಕೃಷಿ ಮಂತ್ರಿಗಳಿಗೆ ಈ ಬಗ್ಗೆ ಗೊತ್ತು. ಅದೇನೆಂದರೆ, ಈ ಐದು ಜಿಲ್ಲೆಗಳಲ್ಲಿ ಮೆಕ್ಕೆಜೋಳ ಅತಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಾರೆ. ಕಳೆದ ವರ್ಷ ಏನಾಗಿರುತ್ತದೆಯೆಂದರೆ, ಮೆಕ್ಕೆಜೋಳ ಬೆಳೆ ಬೆಳೆಯುವಂತಹ ಸಂದರ್ಭದಲ್ಲಿ ಪ್ರತಿ ಕೆ.ಜಿ. ಗೆ 13 ರಿಂದ 14 ರೂಪಾಯಿ ಏನು ಬೆಲೆ ಇತ್ತು, ಆಗ ವ್ಯಾಪಾರಸ್ಥರೆಲ್ಲರೂ ಒಗ್ಗೂಡಿ ರೈತರಿಂದ ನೇರವಾಗಿ ಖರೀದಿ ಮಾಡಿ, ಅವರು ತಮ್ಮ ಸ್ವಂತ ಉಗ್ರಾಣಗಳಲ್ಲಿ ಶೇಖರಣೆ ಮಾಡಿಕೊಂಡು ಪ್ರತಿ ಕೆ.ಜಿ. ಗೆ 26-27 ರೂಪಾಯಿ ಆಗಿರುವಂತಹ ಸಂದರ್ಭದಲ್ಲಿ ಮಾರಾಟ ಮಾಡಿರುತ್ತಾರೆ. ಪಾಪ! 6 ರಿಂದ 8 ತಿಂಗಳು ಮೆಕ್ಕೆಜೋಳ ಬೆಳೆದಂತಹ ರೈತರಿಗೆ ಯಾವುದೇ ಲಾಭ ಸಿಗದೇ, ಅದು ವ್ಯಾಪಾರಸ್ಥರ ಪಾಲಾಗಿರುತ್ತದೆ. ಮಾನ್ಯ ಕೃಷಿ ಮಂತ್ರಿಗಳ ಕ್ಷೇತ್ರದಲ್ಲಿಯೂ ಸಹ ಮೆಕ್ಕೆಜೋಳವನ್ನು ಹೆಚ್ಚಿಗೆ ಬೆಳೆಯುತ್ತಾರೆ. ಆದುದರಿಂದ, ಈ ಉಗ್ರಾಣಗಳನ್ನು ಹೆಚ್ಚಿಗೆ ಮಾಡಬೇಕು.

ಅದೇ ರೀತಿ, ಗ್ರಾಮೀಣ ಭಂಡಾರ ಯೋಜನೆಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ 317 ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದಾರೆ. ಅತಿ ಹೆಚ್ಚು ಅಂದರೆ, ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಎಷ್ಟು ಉಗ್ರಾಣಗಳನ್ನು

ಮಾಡಿದ್ದಾರೆ, ಶಿವಮೊಗ್ಗ ಜಿಲ್ಲೆ ಒಂದರಲ್ಲಿಯೇ ಅಷ್ಟು ಉಗ್ರಾಣಗಳನ್ನು ನಿರ್ಮಾಣ ಮಾಡಿದ್ದಾರೆ. ಇದರಿಂದಾಗಿ, ನಮಗೆ ಬಹಳ ನೋವಾಗುತ್ತದೆ. ಏಕೆಂದರೆ, ಕೃಷಿ ಮಂತ್ರಿಗಳ ಕ್ಷೇತ್ರವಾದ ಹಾವೇರಿ ಜಿಲ್ಲೆಯಲ್ಲಿ ಕೇವಲ 6 ಉಗ್ರಾಣಗಳು ಮಾತ್ರ ಇರುತ್ತವೆ. ಆ ಕ್ಷೇತ್ರದ ರೈತರ ಪರವಾಗಿ ನಾನು ಒತ್ತಾಯ ಮಾಡುವುದೇನೆಂದರೆ, ಹಾವೇರಿ ಜಿಲ್ಲೆಯಲ್ಲಿ ಎಷ್ಟು ಉಗ್ರಾಣಗಳನ್ನು ನಿರ್ಮಾಣ ಮಾಡುತ್ತಾರೆ, ಅಷ್ಟು ರೈತರಿಗೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಅದನ್ನು ಹೊರತುಪಡಿಸಿ,...

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಉತ್ತರ ನೀಡಿ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ನಾನು ಎಲ್ಲವನ್ನೂ ಒಟ್ಟಿಗೆ ಕೇಳುತ್ತೇನೆ. ಏಕೆಂದರೆ, ನಾನು ಪ್ರಶ್ನೆ ಕೇಳುತ್ತಿಲ್ಲ. ಬದಲಾಗಿ, ನಾನು ಸಲಹೆ ನೀಡುತ್ತಿದ್ದು, ಎಲ್ಲದಕ್ಕೂ ಮಾನ್ಯ ಸಚಿವರು ಒಟ್ಟಿಗೆ ಉತ್ತರ ನೀಡಲಿ. ಅದಲ್ಲದೇ, "ಭೂ ಚೇತನ ಯೋಜನೆ" ಯಾವ ವರ್ಷದಲ್ಲಿ ಜಾರಿಗೆ ಬಂದಿದೆ ಎಂದು ಪ್ರಶ್ನೆ ಕೇಳಿದ್ದು, ಅದಕ್ಕೆ ಮಾನ್ಯ ಸಚಿವರು ಉತ್ತರ ನೀಡಿರುತ್ತಾರೆ. ಇದು ಬಹಳ ಒಳ್ಳೆಯ ಯೋಜನೆಯಾಗಿದ್ದು, 2009-10 ರಿಂದ 2017ನೇ ಇಸವಿಯವರೆಗೆ ಮಾತ್ರ ಭೂ ಚೇತನ ಯೋಜನೆಯನ್ನು ಜಾರಿಯಲ್ಲಿಟ್ಟಿರುತ್ತಾರೆ. ಆದರೆ, ಈಗ ಈ ಯೋಜನೆಯನ್ನು ಯಾವ ಕಾರಣಕ್ಕಾಗಿ ನಿಲ್ಲಿಸಲಾಗಿದೆ ಮತ್ತು ಸದರಿ ಯೋಜನೆಯನ್ನು ಪುನಃ ಯಾವಾಗ ಪ್ರಾರಂಭ ಮಾಡುತ್ತಾರೆಂದು ಮಾನ್ಯ ಸಚಿವರನ್ನು ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಬಿ.ಸಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಗೋವಿಂದ ರಾಜುರವರ ಕಳಕಳಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಉಗ್ರಾಣಗಳ ಬಗ್ಗೆ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ, ಆ ಉಗ್ರಾಣಗಳನ್ನು ಕೃಷಿ ಇಲಾಖೆಯಿಂದ ಮಾಡುವುದಿಲ್ಲ. ಬದಲಾಗಿ, ಅವುಗಳನ್ನು ಎ.ಪಿ.ಎಂ.ಸಿ.ಯವರು ಮಾಡುತ್ತಾರೆ. ಆದರೆ, ನಾವು ಕಳೆದ ವರ್ಷ ವಿಶೇಷವಾದ ಕಾಳಜಿ ತೆಗೆದುಕೊಂಡು ಆರ್.ಎಲ್.ಡಿ.ಎಫ್. ಅಡಿಯಲ್ಲಿ ರಾಜ್ಯಾದ್ಯಂತ 13 ಕೋಲ್ಡ್ ಸ್ಟೋರೇಜ್(ಶೀತಲ ಕೇಂದ್ರಗಳನ್ನು) ಅನ್ನು ನಿರ್ಮಾಣ ಮಾಡುತ್ತಿದ್ದೇವೆ. ಒಂದೊಂದು ಕೋಲ್ಡ್ ಸ್ಟೋರೇಜ್ 2,500 ಮೆಟ್ರಿಕ್ ಟನ್ ಸಾಮರ್ಥ್ಯದ್ದಾಗಿದ್ದು, ಇಂತಹ 13 ಕೋಲ್ಡ್ ಸ್ಟೋರೇಜ್ ನಿರ್ಮಾಣಕ್ಕೆ ಟೆಂಡರ್ ಪ್ರಕ್ರಿಯೆ

ಪೂರ್ಣಗೊಂಡಿದ್ದು, ಅಡಿಗಲ್ಲು ಸಮಾರಂಭಗಳನ್ನು ಸಹ ನಾವು ಮಾಡುತ್ತಿದ್ದೇವೆ. ಸದರಿ 13 ಕೋಲ್ಡ್ ಸ್ಟೋರೇಜ್‌ಗಳನ್ನು ಸಹ ನಾವು ಬೇರೆ ಬೇರೆ ಜಿಲ್ಲೆಗಳಲ್ಲಿ ನಿರ್ಮಾಣ ಮಾಡುತ್ತಿದ್ದೇವೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಒಂದು ಕೋಲ್ಡ್ ಸ್ಟೋರೇಜ್ ನ್ನು ನಾವು ಕೊಟ್ಟಿದ್ದು, ಈಗಾಗಲೇ ಆ ಕೆಲಸ ಪ್ರಾರಂಭ ಆಗುತ್ತಿದೆ.

"ಭೂ ಚೇತನ ಯೋಜನೆ" ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಅದು 2018ನೇ ಇಸವಿಯಲ್ಲಿ ಕ್ಲೋಸ್ ಆಗಿರುತ್ತದೆ. ಕೇಂದ್ರದಿಂದ ಬಂದಂತಹ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕೆ ಅಥವಾ ಯಾವ ಕಾರಣಕ್ಕಾಗಿ ನಿಲ್ಲಿಸಲಾಗಿದೆ ಎಂದು ಕೇಳುವುದಕ್ಕೆ ನಮಗೆ ಅವಕಾಶವಿರುವುದಿಲ್ಲ. ಚಿಕ್ಕಬಳ್ಳಾಪುರ ಜಿಲ್ಲೆಯ ಚೆಲುವ ತಿಮ್ಮನಹಳ್ಳಿ ಕೋಲ್ಡ್ ಸ್ಟೋರೇಜ್ ನಿರ್ಮಾಣ ಮಾಡಲಾಗುತ್ತಿದೆ.

(ಮುಂದು...)

(876) 16.09.2022 11.20 ವೈಎಲ್-ಜಿಆರ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ಬಹಳ ಮುಖ್ಯವಾಗಿ ನನ್ನ ಜಿಲ್ಲೆ ಅಂದರೆ, ಕೋಲಾರ ಜಿಲ್ಲೆ ಸಂಪೂರ್ಣವಾಗಿ ಕೃಷಿ ಜಿಲ್ಲೆಯಾಗಿರುವುದರಿಂದ ಅಲ್ಲಿ ಸಂಸ್ಕರಣಾ ಘಟಕ ಅಥವಾ ಶೀತಲ ಕೇಂದ್ರವನ್ನು ಪ್ರಾರಂಭಿಸಲಾಗಿದೆಯೇ ಎನ್ನುವಂಥ ಪ್ರಶ್ನೆಯನ್ನು ಕೇಳಿದೆನು. ಅದಕ್ಕೆ ಮಾನ್ಯ ಸಚಿವರು "ಮಾಲೂರು ಭಾಗದಲ್ಲಿ ಒಂದು ಶೀತಲ ಕೇಂದ್ರ ಪ್ರಾರಂಭವಾಗುತ್ತಿದೆ" ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ.ಕುಮಾರಸ್ವಾಮಿಯವರ ಸರ್ಕಾರ ಅಧಿಕಾರ ಇದ್ದ ಸಂದರ್ಭದಲ್ಲಿ ಕೋಲಾರ ಜಿಲ್ಲೆಯಲ್ಲಿ ರೂ.20.00 ಕೋಟಿ ವೆಚ್ಚದಲ್ಲಿ ಟೊಮ್ಯಾಟೋ ಸಂಸ್ಕರಣಾ ಘಟಕ ತೆರೆಯಲು ಬಜೆಟ್‌ನಲ್ಲಿ ಪ್ರಕಟಿಸಲಾಗಿತ್ತು. ಅದೊಂದು ಯೋಜನೆಯನ್ನು ಮಾತ್ರ ಕೋಲಾರ ಜಿಲ್ಲೆಗೆ ನೀಡಲಾಗಿತ್ತು. ಆ ಯೋಜನೆಯನ್ನು ಸರ್ಕಾರದವರು ಏತಕ್ಕೆ ಇನ್ನು ಶುರು ಮಾಡಿಲ್ಲ? ಏಕೆಂದರೆ, ಬೆಲೆ ಬಿದ್ದು ಹೋದ ಸಂದರ್ಭದಲ್ಲಿ ಟೊಮ್ಯಾಟೋ, ತರಕಾರಿಗಳನ್ನು ನೂರಾರು, ಸಾವಿರಾರು ಲೋಡ್‌ಗಳಷ್ಟು ತಂದು ರಸ್ತೆಗೆ ಸುರಿಯುತ್ತಾರೆ. ಅದಕ್ಕಾಗಿ ಅತೀ ಶೀಘ್ರವಾಗಿ ತರಕಾರಿ

ಮತ್ತು ಹಣ್ಣುಗಳ ಶೇಖರಣೆಗಾಗಿ ಶೀತಲಕೇಂದ್ರವನ್ನು ಮಾಡಿಕೊಡಬೇಕು. ಅದೇ ರೀತಿ ಟೊಮ್ಯಾಟೋ ಅಥವಾ ಮಾವು ಸಂಸ್ಕರಣಾ ಘಟಕಗಳಿಗೆ ಆದಷ್ಟು ಬೇಗ ಒತ್ತು ಕೊಟ್ಟು 2018-19ನೇ ಸಾಲಿನ ಬಜೆಟ್‌ನಲ್ಲಿ ಒತ್ತು ನೀಡಲಾಗಿತ್ತು, ಅದರ ಮುಂದಕ್ಕೆ ಶ್ರಮವಹಿಸಿ, ಕೋಲಾರ ಜಿಲ್ಲೆ ರೈತರ ಬಗ್ಗೆ ಹೆಚ್ಚಿನ ಕಾಳಜಿಯನ್ನಿಟ್ಟು ಸಂಸ್ಕರಣಾ ಘಟಕ ಹಾಗೂ ಶೀತಲಕೇಂದ್ರವನ್ನು ಹೆಚ್ಚಿನ ರೀತಿಯಲ್ಲಿ ಮಾಡಿಕೊಟ್ಟರೆ ರೈತರಿಗೆ ಬಹಳ ಅನುಕೂಲವಾಗುತ್ತದೆ.

**ಶ್ರೀ ವೈ.ಎ.ನಾರಾಯಣಸ್ವಾಮಿ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಗೋವಿಂದರಾಜುರವರು ತಂದಿರುವಂಥ ಪ್ರಸ್ತಾಪ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸಂಸ್ಕರಣಾ ಘಟಕ ಇಲ್ಲವೆಂದು ಈ ಸದನದಲ್ಲಿ ಕಳೆದ 20 ವರ್ಷಗಳಿಂದ ಚರ್ಚೆ ನಡೆಸಲಾಗುತ್ತಿದೆ. ಚಿಕ್ಕಬಳ್ಳಾಪುರದಲ್ಲಿ ಒಂದು ಸಂಸ್ಕರಣಾ ಘಟಕ ಮಾಡುತ್ತೇವೆ ಎನ್ನುವಂಥ ಮಾತನ್ನು ತಿಳಿಸಲಾಗಿದೆ. ಮಾಲೂರಿನಲ್ಲಿ ಇನ್ನೋವಾ ಆಹಾರ ಪಾರ್ಕ್ ಎಂದು ಖಾಸಗಿಯವರು ಮಾಡಿಕೊಂಡಿದ್ದಾರೆ.

**ಸಭಾಪತಿಯವರು:-** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೆ, ತಾವು ಕೃಷಿ ಇಲಾಖೆಗೆ ಸಂಬಂಧಿಸಿದಂತೆ ಹೇಳಿ. ಉಗ್ರಾಣ ಇಲಾಖೆಗೆ ಸಂಬಂಧಿಸಿದಂತೆ ಹೇಳುವುದಕ್ಕೆ ಹೋಗಬೇಡಿ.

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಕೃಷಿ ಇಲಾಖೆಗೆ ಸಂಬಂಧಿಸಿದಂತೆ ಹೇಳುತ್ತಿರುವುದು. ನನ್ನ ಮನವಿಯೇನೆಂದರೆ, ಕೋಲಾರ ಜಿಲ್ಲೆಯಲ್ಲಿ ಟೊಮ್ಯಾಟೊ ಮತ್ತು ತರಕಾರಿ ಬೆಳೆಗಾರರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಸರ್ಕಾರದ ವತಿಯಿಂದ ಸಂಸ್ಕರಣಾ ಮತ್ತು ಶೀತಲಕೇಂದ್ರ ಎರಡನ್ನೂ ಮಾಡಬೇಕಾಗಿದ್ದು, ಅದಕ್ಕೆ ಮಾನ್ಯ ಸಚಿವರು ಆಶ್ವಾಸನೆ ನೀಡಬೇಕೆಂದು ತಮ್ಮ ಮೂಲಕ ಅವರಿಗೆ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಬಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಕೋಲಾರ ಜಿಲ್ಲೆಯ ರೈತರು ಬಹಳ ಪ್ರಗತಿಪರ ರೈತರು ಎಂದು ಹೇಳುವುದರಲ್ಲಿ ಯಾವುದೇ ಸಂಶಯವಿಲ್ಲ. ನಾನು ಎಲ್ಲಾ ಕಡೆಗೂ ಸಂಬಂಧಿಸಿದಂತೆ ಉದಾಹರಣೆಗೆ ಹೇಳವುದೇನೆಂದರೆ, ಕೋಲಾರ ಜಿಲ್ಲೆ ರೈತರು ಇಸ್ರೇಲ್ ಮಾದರಿಯಂತೆ ಬೆಳೆಯನ್ನು ಬೆಳೆಯುತ್ತಿರುವುದರಿಂದ ಸುಮಾರು 50 ಬಸ್ಸುಗಳನ್ನು ಮಾಡಿ, ನಮ್ಮ

ತಾಲ್ಲೂಕಿನಿಂದ ಕೋಲಾರಕ್ಕೆ ರೈತರನ್ನು ಕಳುಹಿಸಿಕೊಟ್ಟಿದ್ದೆನು. ಏಕೆಂದರೆ, ಅಲ್ಲಿ ಮಳೆಯಂತೂ ಆಗುತ್ತಿರಲಿಲ್ಲ. ಬೋರ್‌ವೆಲ್ ಕೊರೆದರೆ ಒಂದು ಸಾವಿರ ಅಥವಾ ಒಂದೂವರೆ ಸಾವಿರ ಅಡಿಗೆ ಒಂದು ಇಂಚ್ ನೀರು ಬರುತ್ತದೆ. ನಾನು ಕೋಲಾರ ಜಿಲ್ಲೆಗೆ ಎರಡು–ಮೂರು ಸಲ ಭೇಟಿ ನೀಡಿದ್ದೇನೆ. ಅಂತಹದರಲ್ಲಿ ಇವತ್ತು ಅತ್ಯಂತ ಪ್ರಗತಿಪರ ಮತ್ತು ಸಮಗ್ರ ಕೃಷಿ ನೀತಿಯನ್ನು ಅಳವಡಿಸಿಕೊಂಡಿರುವಂಥವರು ಕೋಲಾರ ಜಿಲ್ಲೆಯ ರೈತರು. ಹಾಗಾಗಿ ಕೋಲಾರ ಮತ್ತು ಚಿಕ್ಕಮಗಳೂರು ಹಳೆಯ ಜಿಲ್ಲೆ ಎಂದು ಶೀತಲ ಘಟಕಕ್ಕೆ ಅನುಮೋದನೆ ಕೊಟ್ಟಿದ್ದೇವೆ. ಹಾಗೆಯೇ ಮಾಲೂರಿನಲ್ಲಿ ಇನ್ನೋವಾ ಆಹಾರ ಪಾರ್ಕ್ ಕೂಡಾ ಇದ್ದು, ಮಾವಿನ ಸಂಸ್ಕರಣಾ ಘಟಕ ಸಹ ಇದೆ. ಹಾಗಾಗಿ ಇನ್ನು ಮುಂದೆ ಹೆಚ್ಚಿನ ಪ್ರಯತ್ನ ಪಟ್ಟು ಆರ್ಥಿಕ ಲಭ್ಯತೆ ಮೇರೆಗೆ ಚರ್ಚೆ ಮಾಡಿ, ನೀಡುವಂಥ ಪ್ರಯತ್ನ ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ 552**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ವೈ.ಎಂ.ಸತೀಶ್:-** ಮಾನ್ಯ ಸಭಾಪತಿಯವರೇ, increase in accident due to high brightness of head light ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆನು. ಅದಕ್ಕೆ ಮಾನ್ಯ ಸಚಿವರು because of high brightness of head lights accidents increase ಆಗಿದೆ ಎಂದು ಉತ್ತರ ನೀಡಿದ್ದಾರೆ. ಎರಡು ಕಾರಣಗಳಿಂದ high brightness ಆಗುತ್ತದೆ. ಮೊದಲನೆಯದಾಗಿ, ಎಲ್.ಇ.ಡಿ., ಲೈಟ್ ಉಪಯೋಗದಿಂದ ಮತ್ತೊಂದು ಹೈ ಬೀಮ್ ಮಾಡುವುದರಿಂದ high brightness ಆಗುತ್ತದೆ. ನನ್ನ ಎರಡನೇ ಪ್ರಶ್ನೆಯೇನೆಂದರೆ, ಎಲ್.ಇ.ಡಿ., ಲೈಟ್ ಉಪಯೋಗಿಸಲು ಅನುಮತಿ ಇದೆಯೇ ಎನ್ನುವಂಥ ಪ್ರಶ್ನೆಯನ್ನು ಮಾನ್ಯ ಸಚಿವರಿಗೆ ಕೇಳಿದ್ದು, ಅದಕ್ಕೆ "ಅನುಮತಿ ಇರುವುದಿಲ್ಲ" ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ, ಎಲ್ಲಾ ವಾಹನಗಳಲ್ಲಿ O.E.M., ಆಗಿ ಎಲ್ಲದರಲ್ಲಿಯೂ ಎಲ್.ಇ.ಡಿ., ಲೈಟ್‌ಗಳನ್ನು ಅಳವಡಿಸಲಾಗುತ್ತಿದೆ. ಎಲ್.ಇ.ಡಿ., ಲೈಟ್‌ಗಳನ್ನು ದೂರುವುದು ತಪ್ಪು. High beam lights ಇರುವಂಥ ವಾಹನಗಳನ್ನು ಓಡಿಸುವವರನ್ನು ದೂರಬೇಕಾಗಿದೆ. ವಿಶೇಷವಾಗಿ ಗೂಡ್ಸ್ ಮತ್ತು ಟ್ರಕ್ಸ್ ವಾಹನಗಳಾಗಿವೆ. ಈ ಮೊದಲು ವಾಹನಗಳ ಹೆಡ್ ಲೈಟ್ ಮೇಲೆ black stipe ಹಾಕಲಾಗುತ್ತಿತ್ತು. ಏಕೆಂದರೆ, ಹೈ ಬೀಮ್ ಲೈಟ್ ಮಾಡಿದರೆ, ಎದುರುಗಡೆ ಇರುವ ವ್ಯಕ್ತಿಯ ಕಣ್ಣಿಗೆ ಲೈಟ್ ಬೆಳಕು ತಗಲುಬಾರದೆಂದು ಹೆಡ್ ಲೈಟ್ ಮೇಲೆ black stipe ಹಾಕಲಾಗುತ್ತಿತ್ತು. ಅದನ್ನು ಈಗ ಯಾವುದೇ ವಾಹನಗಳಿಗೆ ಅಳವಡಿಸುತ್ತಿಲ್ಲ. ಹಾಗಾಗಿ black stipe ಹಾಕುವುದನ್ನು ಜಾರಿಗೊಳಿಸಬೇಕು ಎನ್ನುವುದು ನನ್ನ ಮನವಿಯಾಗಿದೆ. ಹಾಗೆಯೇ ಸಿಟಿ ಲಿಮಿಟ್ಸ್‌ನಲ್ಲಿ ಯಾರಾದರೂ ಹೈ ಬೀಮ್ ಲೈಟ್ ಹಾಕಿಕೊಂಡು ವಾಹನ ಸವಾರಿ ಮಾಡಿದರೆ, ಅವರಿಗೆ ದಂಡ ವಿಧಿಸುವಂಥ ನಿಯಮವನ್ನು ಜಾರಿಗೆ ತರಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಬಿ.ಶ್ರೀರಾಮುಲು:-** ಮಾನ್ಯ ಸಭಾಪತಿಯವರೇ, ವಾಹನಗಳಿಗೆ ಹೈ ಬೀಮ್ ಲೈಟ್ ಅಳವಡಿಕೆಯಿಂದ ಹೆಚ್ಚು ಅಪಘಾತವಾಗುತ್ತಿದೆ ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ಅಂತಹ ಯಾವುದೇ ಪ್ರಕರಣವು ನಮ್ಮ ಗಮನಕ್ಕೆ ಬಂದಿಲ್ಲ. ಏಕೆಂದರೆ, ಇವತ್ತು ಹೈ ಬೀಮ್ ಲೈಟ್ ಉಪಯೋಗಿಸುವ ಮೊದಲು ಸಾಕಷ್ಟು ಜನರಿಗೆ ಜಾಗೃತಿ ಮೂಡಿಸುವಂಥ ಕೆಲಸ ಮಾಡಿದ್ದೇವೆ. ರಸ್ತೆ ಸುರಕ್ಷತಾ ವಿಚಾರ ಬಂದ ಸಮಯದಲ್ಲಿ ಸುಮಾರು ರೂ.295.00 ಕೋಟಿಗಳಷ್ಟು ಅನುದಾನ ಮೀಸಲಿರಿಸಿಲಾಗಿದೆ. ಏಕೆಂದರೆ, ಹೈವೆ ರಸ್ತೆ, ಪಟ್ಟಣ ಪ್ರದೇಶಗಳಲ್ಲಿ ಓಡಾಡುವಂಥ ಸಂದರ್ಭದಲ್ಲಿ ಹೈ ಬೀಮ್ ಲೈಟ್ ವಾಹನವನ್ನು ಉಪಯೋಗಿಸುವಂಥ ಅಂದರೆ, ಟ್ರಕ್ ಡ್ರೈವರ್ ಆಗಿರಬಹುದು, ಬೈಕ್ ಸವಾರರಾಗಿರಬಹುದು ಅಂಥವರಿಗೆ ಸುಮಾರು ರೂ.500.00 ವರೆಗೂ ದಂಡ ಸಹ ವಿಧಿಸಲಾಗಿದೆ. ಇತ್ತೀಚೆಗೆ ಅನೇಕ ರೀತಿಯಲ್ಲಿ ಜಾಗೃತಿ ಮೂಡಿಸುವಂಥ ಕೆಲಸ ಮಾಡುತ್ತಿದ್ದೇವೆ. ಉದಾಹರಣೆಗೆ ಹೇಳುವುದಾದರೆ, ಇಡೀ ರಾಜ್ಯದಲ್ಲಿ ಕೆಲವು ಕಡೆ ಬ್ಲಾಕ್ ಸ್ಪಾಟ್ ಎಂದು ಸಹ ಹಿಡಿದುಕೊಂಡಿದ್ದೇವೆ. ಅಪಘಾತವಾದಂಥ ಬ್ಲಾಕ್ ಸ್ಪಾಟ್‌ಗಳು ಏನಿವೆ, ಅವು ಇದಕ್ಕೂ ಮೊದಲು ಸುಮಾರು 942 ಇತ್ತು. ಈಗ ratification ಎಷ್ಟಾಗಿದೆ ಎಂದರೆ, ಸುಮಾರು 600 ಬ್ಲಾಕ್ ಸ್ಪಾಟ್‌ಗಳನ್ನು ತೆಗೆದು, ಉಳಿದ ಸುಮಾರು 342 ಬ್ಲಾಕ್ ಸ್ಪಾಟ್‌ಗಳನ್ನು ಸಹ ತೆಗೆಯುವಂಥ ಪ್ರಯತ್ನ ಸಹ ಮಾಡಲಾಗುತ್ತಿದೆ. ಮಾನ್ಯ ಸದಸ್ಯರು ಕೇಳಿದಂತೆ "ಹೈ ಬೀಮ್ ಮತ್ತು ಹೈ ವೋಲ್ಟೇಜ್ ಲೈಟ್ ಅಳವಡಿಸಿಕೊಂಡು ಯಾರು ರಸ್ತೆ ಮೇಲೆ ಸವಾರಿ ಮಾಡುತ್ತಾರೆ, ಅಂಥವರಿಗೆ ರೂ.500 ರವರೆಗೆ ದಂಡ ಸಹ ವಿಧಿಸಲಾಗಿದೆ." ಅದರ ಜೊತೆಗೆ ಆ ವ್ಯಕ್ತಿಯ ಮೇಲೆ ಆರ್.ಟಿ.ಓ. ರವರು ಅಥವಾ ಪೋಲೀಸ್‌ನವರು Section 177 of the Motor Vehicles Act ಅಡಿ ಪ್ರಕಾರ ಪ್ರಕರಣ ದಾಖಲಿಸಬಹುದೆಂಬ ನಿರ್ಧಾರವನ್ನು ಸಹ ಕೈಗೊಳ್ಳಲಾಗಿದೆ. ಜೊತೆಗೆ 2019 ರಿಂದ ಇಲ್ಲಿಯವರೆಗೂ ನೋಡಿದಾಗ ಇಂತಹ ಕೇಸ್‌ಗಳು ಸುಮಾರು 8000 ಗಳಷ್ಟು ಇತ್ತು. 2022 ರಲ್ಲಿ ನೋಡಿದರೆ ಬಹಳಷ್ಟು ಜಾಗೃತಿ ಹಾಗೂ ಅರಿವು ಮೂಡಿಸುವಂಥ ಕೆಲಸ ಮಾಡಿರುವುದರಿಂದ ಸದ್ಯಕ್ಕೆ ಕೇವಲ 703 ಕೇಸ್ ಮಾತ್ರ ಇದೆ. ಅದನ್ನು ಸಹ ಆದಷ್ಟು ಶೀಘ್ರವಾಗಿ ಸರಿಪಡಿಸುವಂಥ ಮತ್ತು ಜನರಿಗೆ ಜಾಗೃತಿ ಮೂಡಿಸುವಂಥ ಕೆಲಸ ಮಾಡಲಾಗುತ್ತದೆ. ಎಲ್ಲೆಲ್ಲಿ ಅಪಘಾತವಾಗುತ್ತಿದೆ ಹಾಗೂ ಹೈ ಬೀಮ್ ಲೈಟ್ ಹಾಕಿಕೊಂಡು

ಹೋಗುತ್ತಾರೆ, ಅಂಥವರಿಗೆ ಅರಿವು ಮೂಡಿಸುವಂಥ ಕೆಲಸ ಮಾಡಲಾಗುತ್ತಿದ್ದು, ತಪ್ಪಿತಸ್ಥರಿಗೆ ದಂಡ ಸಹ ವಿಧಿಸಲಾಗುತ್ತಿದೆ.

**ಸಭಾಪತಿಯವರು:-** ಮಾನ್ಯ ವೈ.ಎಂ.ಸತೀಶ್‌ರವರು ಈ ಹಿಂದೆ ವಾಹನದ ಲೈಟ್‌ಗಳಿಗೆ black stipe ಹಚ್ಚಲಾಗುತ್ತಿದ್ದು, ಈಗ ಅದನ್ನು ನಿಲ್ಲಿಸಲಾಗಿದೆ. ಅದರಿಂದ ಹೈ ಬೀಮ್ ಎಫೆಕ್ಟ್ ಜಾಸ್ತಿಯಾಗುತ್ತಿದೆ ಎಂದು ಕೇಳಿದರು. ಹಾಗಾಗಿ black stipe ಹಚ್ಚುವುದು ಕಡ್ಡಾಯವೇ ಅಥವಾ ಕಡ್ಡಾಯ ಇಲ್ಲವೇ ಎನ್ನುವುದನ್ನು ತಿಳಿಸಬೇಕು.

**ಶ್ರೀ ಬಿ.ಶ್ರೀರಾಮುಲು:-** ಈ ಹಿಂದೆ ಬಹಳಷ್ಟು ಕಡೆ ವಾಹನಗಳಿಗೆ ಅರ್ಧ ಗ್ಲ್ಯಾಸ್‌ಗೆ ಕಪ್ಪು ಬಣ್ಣ ಹಚ್ಚಲಾಗುತ್ತಿತ್ತು. ಆದರೆ, ಈಗ ಏನಾಗಿದೆ ಎಂದರೆ, manufacturers ನಲ್ಲಿಯೇ ಎಲ್ಲಿ focus ಬರಬೇಕು, ಎಲ್ಲಿ dull ಇರಬೇಕು ಎಂಬುದನ್ನು ಗ್ಲಾಸ್‌ನಲ್ಲಿಯೇ ಸೆಟ್ ಮಾಡಿಕೊಡಲಾಗುತ್ತಿದೆ.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 488**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ನಾನು ಮೂಲತಃ ರಾಜಧಾನಿಯಾದ ಬೆಂಗಳೂರು ನಗರದಿಂದ ಸುಮಾರು 50 ಕಿ.ಮೀ. ದೂರದಲ್ಲಿರುವ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನಲ್ಲಿರುವ ಇರುಳಿಗರ ವಿಚಾರವಾಗಿ ಪ್ರಶ್ನೆಯನ್ನು ಕೇಳಿದೆನು. ಎಷ್ಟು ಇರುಳಿಗರು ಮಾಗಡಿ ತಾಲ್ಲೂಕಿನಲ್ಲಿ ವಾಸಿಸುತ್ತಿದ್ದಾರೆ; ಎಷ್ಟು ಕಾಲೋನಿಗಳಿವೆ; ಅವರಿಗೆ ಒದಗಿಸಿರುವಂಥ ಸೌಲಭ್ಯಗಳೇನು; ಎಂದು ಪ್ರಶ್ನೆ ಕೇಳಿದ್ದು, "11 ಇರುಳಿಗರ ಕಾಲೋನಿ ಇದೆ" ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಹಾಗೆಯೇ ಮತ್ತೊಂದು ಉಪ ಪ್ರಶ್ನೆ ಏನೆಂದರೆ, ಕಳೆದ 3 ವರ್ಷಗಳಲ್ಲಿ ಇರುಳಿಗರ ಅಭಿವೃದ್ಧಿಗಾಗಿ ಸರ್ಕಾರ ವೆಚ್ಚ ಮಾಡಿರುವ ಅನುದಾನ ಎಷ್ಟು; ಈ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳು ಯಾವುವು ಹಾಗೂ ಪೂರ್ಣಗೊಂಡಿರುವ ಕಾಮಗಾರಿ ಯಾವುವು; ಎಂದು ಪ್ರಶ್ನೆ ಕೇಳಿದ್ದೆನು. ನನ್ನ ಪ್ರಶ್ನೆಯೂ ಸ್ಪಷ್ಟವಾಗಿದ್ದು, ಕಳೆದ 3 ವರ್ಷಗಳಿಗೆ ಅಂದರೆ ಇವತ್ತಿನಿಂದ ಕಳೆದ 3 ವರ್ಷಗಳಿಗೆ ಸಂಬಂಧಿಸಿದಂತೆ ಪ್ರಶ್ನೆಯನ್ನು ಕೇಳಿದರೆ ನಮ್ಮ ಬುದ್ಧಿವಂತ ಅಧಿಕಾರಿಗಳು ಮಾನ್ಯ ಸಚಿವರ ಕೈಯಲ್ಲಿ ಎಂತಹ ಉತ್ತರವನ್ನು ಒದಗಿಸಿದ್ದಾರೆ ಎಂಬುದನ್ನು ಅವರೇ ನೋಡಬೇಕು. ಏಕೆಂದರೆ, ಮಾನ್ಯ ಸಚಿವರು ಸಹ ಉತ್ತರವನ್ನು ಒದಗಿಸಿದ್ದೇನೆ ಎಂದು ತಮ್ಮ ಮೂಲಕ ಈ ಸದನಕ್ಕೆ ಹೇಳುತ್ತಿದ್ದಾರೆ. ಈ ಉತ್ತರವನ್ನು ನೋಡಿ ನಾನು ಅಧಿಕಾರಿಗಳಿಗೆ ಬುದ್ಧಿವಂತರು ಎಂದು ಹೇಳಬೇಕೇ ಅಥವಾ ಮಾನ್ಯ ಸಚಿವರಿಗೆ ಹೇಳಬೇಕೇ ಎಂಬುದು ಗೊತ್ತಾಗುತ್ತಿಲ್ಲ.

(ಮುಂದು)

(877) 16.09.2022/11.30/ಎಸ್‌ಕೆ-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್. ರವಿ (ಮುಂದು):-**

ಮಾನ್ಯ ಸಚಿವರು ಹೇಳುವುದೇನೆಂದರೆ, 2017-18ನೇ ಸಾಲಿನಲ್ಲಿ ರೂ. 305 ಲಕ್ಷಗಳು ಮತ್ತು 2018-19ನೇ ಸಾಲಿನಲ್ಲಿ ರೂ. 25 ಲಕ್ಷಗಳು ಸೇರಿ ಒಟ್ಟು ರೂ. 330 ಲಕ್ಷಗಳನ್ನು ಮಾಗಡಿ ತಾಲ್ಲೂಕಿನಲ್ಲಿ ಕಾಮಗಾರಿ ಮಾಡಿದ್ದೇವೆಂದು ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ನಾನು ಕೇಳುತ್ತಿರುವುದೇನೆಂದರೆ, ಪ್ರಸ್ತುತ ಅಂದರೆ ಇವತ್ತಿನಿಂದ ಮೂರು ವರ್ಷಗಳ ಬಗ್ಗೆ ಕೇಳುತ್ತಿರುವಂತಹದ್ದು. ಕಳೆದ 2017-18, 2018-19, 2019-20ನೇ ಸಾಲಿನ ಬಗ್ಗೆ ಉತ್ತರ ನೀಡಿದ್ದಾರೆ. ಆದರೆ ಈ ಉತ್ತರ ಯಾರಿಗೆ ಬೇಕಾಗಿದೆ? ನಾನೇನಾದರೂ ಐದು ವರ್ಷಗಳ ಹಿಂದಿನ ಉತ್ತರವೇನಾದರೂ ಕೇಳಿದ್ದೇನೆಯೇ? ಮೂರು ವರ್ಷಗಳಿಂದ ಐದು ರೂಪಾಯಿ ಅನುದಾನವನ್ನು ಒದಗಿಸಿಲ್ಲ ಮತ್ತು ಖರ್ಚು ಮಾಡಿಲ್ಲ ಎಂಬುದರ ಬಗ್ಗೆ ಹೇಳಬೇಕಲ್ಲವೇ? 2017-18 ಸಾಲಿನ ಬಗ್ಗೆ ಉತ್ತರದಲ್ಲಿ ಏತಕ್ಕೆ ಕೊಟ್ಟಿದ್ದಾರೆ?

**ಸಭಾಪತಿಯವರು:-** ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ ಕಳೆದ ಮೂರು ವರ್ಷಗಳಿಗೆ ಸಂಬಂಧಪಟ್ಟಿದ್ದು ಇದೆಯಲ್ಲವೇ.

**ಶ್ರೀ ಎಸ್. ರವಿ:-** ಮಾನ್ಯ ಸಭಾಪತಿಯವರೇ, ಮೂರು ವರ್ಷಗಳಿಂದ ಒಂದು ರೂಪಾಯಿ ಅನುದಾನ ಕೊಟ್ಟಿಲ್ಲ. ಈ ಪ್ರಶ್ನೆಗೆ ಬುದ್ಧಿವಂತ ಅಧಿಕಾರಿಗಳು ಈ ರೀತಿಯ ಒಂದು ಉತರವನ್ನು ಮಾನ್ಯ ಸಚಿವರಿಗೆ ಕೊಟ್ಟು, ಅವರಿಂದ ಹೇಳಿಸುತ್ತಾರೆಂದರೆ ಹೇಗೆ?

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಮಾತನಾಡಿ.

**ಶ್ರೀ ಎಸ್. ರವಿ:-** ಮಾನ್ಯ ಸಭಾಪತಿಯವರೇ, ನಾನು ಇದರ ಬಗ್ಗೆ ಬಹಳಷ್ಟು ಹೇಳುವುದು ಇರುವುದರಿಂದ ನನ್ನ ಮಾತನ್ನು ಹೇಳಿ ಮುಗಿಸುತ್ತೇನೆ. ಹಿಂದಿನ ಐದು ವರ್ಷಗಳಲ್ಲಿ ಆಗಿರುವ ಕಾಮಗಾರಿಯ ಬಗ್ಗೆ ಈ ರೀತಿಯ ಒಂದು ಉತರವನ್ನು ಮಾನ್ಯ ಸಚಿವರಿಗೆ ಕೊಟ್ಟು, ಅವರಿಂದ

ಹೇಳಿಸುತ್ತಾರೆ. ನಾನು ಯಾರನ್ನು ದಡ್ಡರು ಎಂದು ಹೇಳಬೇಕು. ಮಂತ್ರಿಗಳನ್ನು ಅಥವಾ ಅಧಿಕಾರಿಗಳನ್ನು ಎನ್ನಬೇಕಾ. ಮಾನ್ಯ ಸಚಿವರು ಇಂತಹ ಅಧಿಕಾರಿಗಳನ್ನು ಇಟ್ಟುಕೊಂಡು, ಆಡಳಿತ ಮತ್ತು ಸರ್ಕಾರವನ್ನು ಹೇಗೆ ನಡೆಸುತ್ತಿದ್ದಾರೆ? ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡಲಿ. ಇದನ್ನು ತಾವೇ observe ಮಾಡಿಕೊಳ್ಳಿ. ನಾನು ಮತ್ತೊಂದು ವಿಷಯ ಹೇಳುವುದೇನೆಂದರೆ, ಐದು ವರ್ಷದ ಹಿಂದೆ ಅಂದಿನ ಸಚಿವರು ಮಾಗಡಿ ತಾಲ್ಲೂಕಿನ ಮಾಡಬಾಳ್ ಹೋಬಳಿಯ ಜೇನುಕಲ್ಲುಪಾಳ್ಯದಲ್ಲಿ ಗ್ರಾಮ ವಾಸ್ತವ್ಯ ಮಾಡಿದ್ದರು. ಅಲ್ಲಿ 11 ಕಾಲೋನಿಗಳಿವೆ. ಆ ಜೇನುಕಲ್ಲುಪಾಳ್ಯದಲ್ಲಿ ಸುಮಾರು 200 ಜನರು ವಾಸ ಮಾಡುತ್ತಿದ್ದಾರೆ. ಅಲ್ಲಿ 27 ಮನೆಗಳಿದ್ದಾವೆ. ಒಬ್ಬ ಕಂದಾಯ ಸಚಿವ... ಯಾವುದೇ ಆಡಳಿತ ಪಕ್ಷವಿರಲಿ, ಇವತ್ತು ಬಿ.ಜೆ.ಪಿ. ಪಕ್ಷ ಆಡಳಿತದಲ್ಲಿದೆ. ನಾಳೆ ಜೆ.ಡಿ.(ಎಸ್) ಪಕ್ಷ ಆಡಳಿತಕ್ಕೆ ಬರಬಹುದು, ಮತ್ತೊಂದು ದಿನ ಕಾಂಗ್ರೆಸ್ ಪಕ್ಷವು ಕೂಡ ಆಡಳಿತಕ್ಕೆ ಬರುತ್ತದೆ. ಅದು ಇರಲಿ, ಮಂತ್ರಿ, ಮಂತ್ರಿನೇ. ಮಂತ್ರಿಗಳ ಜೊತೆ ಅಧಿಕಾರಗಳು ಬರುತ್ತಾರಾ. ಇರುಳಿಗರಿಗೆ ಧ್ವನಿ ಇಲ್ಲ ಮತ್ತು ತಿಳುವಳಿಕೆ ಇಲ್ಲ, ಕಾಡಿನ ಮಧ್ಯೆದಲ್ಲಿ ವಾಸ ಮಾಡತಕ್ಕಂಥವರು. ಅವರು ವಾಸ ಮಾಡುವಂತಹ ಮನೆಗಳ ಫೋಟೋಗಳನ್ನು ನೋಡಬೇಕು. ಕೇವಲ 27 ಮನೆಗಳು ಮಾತ್ರ ಇವೆ. ಇನ್ನುಳಿದ ಮನೆಗಳು ಬರಿ ಹುಲ್ಲಿನ ತೇಪೆಯಿಂದ ಕೂಡಿದೆ. ಅಲ್ಲಿಗೆ ಅಂದಿನ ಮಾನ್ಯ ಸಚಿವರು ಭೇಟಿ ನೀಡಿದ್ದರೂ ಕೂಡ ಒಂದು ರೂಪಾಯಿ ಭಾಗದಷ್ಟು ಸುಧಾರಣೆಯಾಗಿಲ್ಲ. ಸುಮಾರು 27 ಕುಟುಂಬಗಳ ಪೈಕಿ 17 ಕುಟುಂಬಗಳಿಗೆ ಮಾತ್ರ ಮನೆಗಳನ್ನು ಕೊಟ್ಟಿರುವಂತಹದ್ದು. ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ ಇಡೀ ಮಾಗಡಿ ತಾಲ್ಲೂಕಿಗೆ ನಾಲ್ಕು ಜನರಿಗೆ ಮಾತ್ರ ಹಕ್ಕು ಪತ್ರವನ್ನು ಕೊಟ್ಟಿದ್ದಾರೆ. 31 ಗುಂಟೆಗೆ ಮಾತ್ರ ಹಕ್ಕು ಪತ್ರವನ್ನು ಕೊಟ್ಟಿರುವಂತಹದ್ದು. ಮೂವತ್ತು ವರ್ಷಗಳ ಹಿಂದೆ ಸುಮಾರು 11 ಕಾಲೋನಿಗಳ ಪೈಕಿ ನಾಲ್ಕು ಜನರಿಗೆ ಮಾತ್ರ 31 ಗುಂಟೆಗೆ ಹಕ್ಕು ಪತ್ರವನ್ನು ಕೊಟ್ಟಿದ್ದಾರೆ. ಸುಮಾರು 50 ಕಿಲೋ ಮೀಟರ್ ದೂರವಿರುವ ರಾಮನಗರ ತಾಲ್ಲೂಕಿನ ಅವೇರಹಳ್ಳಿ ಹತ್ತಿರ ಕೊಟ್ಟಿದ್ದಾರೆ. ಇವತ್ತಿನವರೆಗೂ ಅದನ್ನು ಸರಿಪಡಿಸಿಲ್ಲ. ಮೂರು ವರ್ಷಗಳಲ್ಲಿ ಅನುದಾನ ಏನು ಕೊಟ್ಟಿದ್ದಾರೆ ಎಂಬ ಬಗ್ಗೆ ಮಾನ್ಯ ಸಚಿವರು ಹೇಳಲಿ. ಮಾನ್ಯ ಸಚಿವರು ಅಧಿಕಾರಿಗಳ ಮೇಲೆ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು. ನಾನು ಕೇಳಿರುವ ಪ್ರಶ್ನೆಗೆ ಸ್ಪಷ್ಟವಾದಂತಹ ಉತ್ತರವನ್ನು ಮಾನ್ಯ

ಸಚಿವರು ಕೊಡಬೇಕು. ಮೂರು ವರ್ಷಗಳಿಂದ ಕೊಟ್ಟಿಲ್ಲ ಎಂಬುದರ ಬಗ್ಗೆ ಮಾನ್ಯ ಸಚಿವರು ಹೇಳಲಿ. ಅದನ್ನು ಬಿಟ್ಟುಬಿಟ್ಟು, ಸುತ್ತಿ ಬಳಸಿ ಹೇಳಿದರೆ ಹೇಗೆ?

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಮಾತನಾಡಿ.

**ಶ್ರೀ ಬಿ. ಶ್ರೀರಾಮುಲು:-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್. ರವಿಯವರು ಕೇಳಿರುವಂತಹ ಪ್ರಶ್ನೆ ಏನೆಂದರೆ 2019-20, 2020-21, 2021-22 ನೇ ಸಾಲಿನ ಅನುದಾನದ ಬಗ್ಗೆ ಕೇಳಿದ್ದಾರೆ.

**ಶ್ರೀ ಎಸ್. ರವಿ:-** ಮೂರು ವರ್ಷದ ಅನುದಾನದ ಬಗ್ಗೆ ನಾನು ಕೇಳಿರುವಂತಹದ್ದು.

**ಶ್ರೀ ಬಿ. ಶ್ರೀರಾಮುಲು:-** ಮಾನ್ಯ ಸದಸ್ಯರು ಇಂದಿನ ಮೂರು ವರ್ಷಗಳ ಅನುದಾನದ ಬಗ್ಗೆ ಮಾತ್ರ ಪ್ರಶ್ನೆಯನ್ನು ಕೇಳಿದ್ದಾರೆ. 2017-18 ನೇ ಸಾಲಿನ ಅನುದಾನದ ಬಗ್ಗೆ ಮಾತ್ರ ಉತ್ತರವನ್ನು ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಕೇಳಲಿಲ್ಲವೆಂದರೂ ಕೂಡ ಬಹುಶಃ ಉತ್ತರ ಕೊಟ್ಟಿದ್ದಾರೆಂದರೆ, ಅಲ್ಲಿ ಏನು ಕೆಲಸವಾಗಿಲ್ಲ ಎಂದು ತಾವು ತಿಳಿದುಕೊಳ್ಳಬೇಕೆಂದು ನಾನು ತಿಳಿದುಕೊಂಡಿದ್ದೇನೆ. ಅಷ್ಟೆ ಅಲ್ಲವೇ, ಬೇರೇನೂ ಇಲ್ಲ.

**ಶ್ರೀ ಎಸ್. ರವಿ:-** ಮೂರು ವರ್ಷಗಳಿಂದ ಅನುದಾನವನ್ನೇ ಕೊಟ್ಟಿಲ್ಲ.

**ಶ್ರೀ ಬಿ. ಶ್ರೀರಾಮುಲು:-** ಅನುದಾನ ಕೊಟ್ಟಿಲ್ಲವೆಂದು ಹೇಳಿ, ಅದನ್ನೇ 2017-18ರಲ್ಲಿ ಕೊಟ್ಟಿದ್ದಾರೆಂದರೆ, ಇನ್ನು ಅದಕ್ಕಿಂತ ಮುಂಚೆ ಯಾವುದು ಆಗಿಲ್ಲ ಎಂದು ಹೇಳಿ ಕೊಟ್ಟಿರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಇವತ್ತು ಇರುಳಿಗರ ಸಮುದಾಯ ಬಹಳಷ್ಟು ಕಡಿಮೆ ಇದೆ. ಇಡೀ ರಾಜ್ಯದಲ್ಲಿ ಸುಮಾರು 11,000 ರಿಂದ 15,000 ಗಳವರೆಗೆ ಇರುಳಿಗರ ಸಮುದಾಯಗಳಿರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ರಾಮನಗರ, ಕನಕಪುರ, ಮತ್ತು ಮಾಗಡಿ ತಾಲ್ಲೂಕಿನಲ್ಲಿ ಈ ಸಮುದಾಯದವರು ಬಹಳಷ್ಟು ಜನರಿದ್ದಾರೆ. ಜೋಡಿಘಟ್ಟ ಗ್ರಾಮದಲ್ಲಿ ಮಹರ್ಷಿ ವಾಲ್ಮೀಕಿ ಆಶ್ರಮ ಶಾಲೆಯನ್ನು ಪ್ರಾರಂಭ ಮಾಡಿದ್ದು, ಸುಮಾರು 18 ಮಂದಿ ಬಾಲಕರು

ಮತ್ತು 7 ಮಂದಿ ಬಾಲಕಿಯರಿಗೆ ವಿದ್ಯಾಭ್ಯಾಸವನ್ನು ಕೊಡಿಸುವಂತಹದ್ದನ್ನು ಮಾಡಿದ್ದೇವೆ. ಒಟ್ಟಾರೆಯಾಗಿ 25 ಮಂದಿ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಕೊಡಿಸುವಂತಹ ಕೆಲಸವಾಗುತ್ತಿದೆ. ಜೇನುಕಲ್ಲುಪಾಳ್ಯ ಗ್ರಾಮ ಮತ್ತು ರಾಮಕಲ್ ಪಾಳ್ಯದ ವಿಚಾರದಲ್ಲಿ ನಿವೇಶನ ಬಹಳ ಕಡಿಮೆ ಕೊಟ್ಟಿದ್ದರೂ ಕೂಡ ಅದನ್ನು ಬೇರೆ ಕಡೆ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ.

**ಶ್ರೀ ಎಸ್. ರವಿ:–** ಹಿಂದಿನ ಸಚಿವರು ಜೇನುಕಲ್ಲುಪಾಳ್ಯದಲ್ಲಿ ಗ್ರಾಮ ವಾಸ್ತವ್ಯ ಮಾಡಿದ್ದರು. ಅವೊತ್ತಿನ ದಿನ ಮಾನ್ಯ ಸಚಿವರು ಅಧಿಕಾರಿಗಳಿಗೆ ಏನೇನು ಸೂಚನೆ ನೀಡಿದ್ದರೋ, ಅದು ಸೂಚನೆಯಾಗಿಯೇ ಉಳಿದಿದೆ. ಇವತ್ತಿನವರೆಗೆ ಆ ಗ್ರಾಮಕ್ಕೆ ಯಾವುದೇ ಸೌಲಭ್ಯ ಒದಗಿಸಿಲ್ಲ.

**ಸಭಾಪತಿಯವರು:–**ಮಾನ್ಯ ಎಸ್. ರವಿಯವರೇ, ದಯವಿಟ್ಟು, ಇದು ಪ್ರಶ್ನೋತ್ತರ ವೇಳೆ.

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:–** ಮಾನ್ಯ ರವಿಯವರೇ, ಇಷ್ಟೊಂದು details ಕೊಡುವುದಕ್ಕಾಗುವುದಿಲ್ಲ.

**ಶ್ರೀ ಎಸ್. ರವಿ:–** ಇದರ ಬಗ್ಗೆ clariffications ಕೇಳುತ್ತಿದ್ದೇನೆ.

**ಶ್ರೀ ಬಿ. ಶ್ರೀರಾಮುಲು:–** ಮಾನ್ಯ ರವಿಯವರೇ, ತಮ್ಮ ಕಳಕಳಿ ನನಗೆ ಅರ್ಥವಾಗುತ್ತದೆ. ತಮ್ಮ ಸಮಸ್ಯೆಗೆ ಶೇಕಡ ನೂರರಷ್ಟು ಸ್ಪಂದಿಸುತ್ತೇನೆ. ನಾನು ಯಾವುದು ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರೇ, ತಾವು ಈ ಉತ್ತರ ನೋಡಿದಂತಹ ಸಮಯದಲ್ಲಿ ತಮಗೆ ಹೇಗಾಯಿತೋ, ಅದೇ ರೀತಿ ನನಗೂ ಕೂಡ ಇದರ ಬಗ್ಗೆ ಸ್ವಲ್ಪ ಮುಜುಗರವಾಯಿತು. ಇದರ ಬಗ್ಗೆ ಸುಧಾರಣೆಯಾಗಿಲ್ಲ ಎಂದು ಗೊತ್ತಾಗುತ್ತಿದೆ. ಇಲ್ಲಿ ಅಭಿವೃದ್ಧಿ ಏನೇನು ಮಾಡಬೇಕೆಂಬುದರ ಬಗ್ಗೆ ಮಾನ್ಯ ಎಸ್. ರವಿಯವರ ಹತ್ತಿರ ಮಾತನಾಡುತ್ತೇನೆ. ಈ ಹಿಂದೆ ನಿವೇಶನ ಕೊಟ್ಟಿರುವಂತಹದ್ದು ಇದೆ. ನಮ್ಮ ಸರ್ಕಾರ ಬಂದ ಮೇಲೆ ಯಾವುದು ಕೊಟ್ಟಿಲ್ಲ. ಇಲ್ಲಿ ಏನೇನು ಸೌಲಭ್ಯ ಕೊಡಬೇಕೆಂಬುದರ ಬಗ್ಗೆ ಮಾನ್ಯ ಸದಸ್ಯರು ಪಟ್ಟಿ ಮಾಡಿಕೊಟ್ಟರೆ, ಅದನ್ನು ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇನೆ.

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:–** ಮಾನ್ಯ ಎಸ್. ರವಿಯವರೇ, ಒಂದು ನಿಮಿಷ. ಮಾನ್ಯ ಸಚಿವರೇ, ದಯವಿಟ್ಟು, ಒಂದು ವಾರದೊಳಗಡೆ ಇದಕ್ಕೆ ಸಂಬಂಧಪಟ್ಟಂತಹ ಅಧಿಕಾರಿಗಳನ್ನು ಮತ್ತು ಮಾನ್ಯ ಎಸ್. ರವಿಯವರನ್ನು ಕರೆಸಿ, ಅವರಿಗೆ ಸಹಾಯ ಮಾಡುವುದಕ್ಕೆ ಏನು ಸಾಧ್ಯವಾಗುತ್ತದೆಯೋ, ಅದನ್ನು ತಾವು ಮಾಡಿ.

**ಶ್ರೀ ಬಿ. ಶ್ರೀರಾಮುಲು:–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್. ರವಿಯವರಿಗೆ ಮಾಡಿಕೊಡುತ್ತೇನೆಂದು ನಾನು ಮಾತು ಕೊಡುತ್ತೇನೆ.

**ಸಭಾಪತಿಯವರು:–** ಮಾನ್ಯ ಸಲೀಂ ಅಹಮದ್‌ರವರ ಪರವಾಗಿ ಡಾ. ಗೋವಿಂದರಾಜ್‌ರವರೇ ಪ್ರಶ್ನೆ ಕೇಳಿ.

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ರಾಮನಗರ ಜಿಲ್ಲೆಯಲ್ಲಿ ಇರುಳಿಗರ ಸಮುದಾಯಕ್ಕೆ ಸಂಬಂಧಪಟ್ಟಂತೆ ಒಂದು ಸಭೆಯನ್ನು ಕರೆಯಲಿ. ಆ ಸಭೆಗೆ ನಾನು ಹೋಗುತ್ತೇವೆ.

**ಸಭಾಪತಿಯವರು:–** ಮಾನ್ಯ ಸಚಿವರಾದರೂ ರಾಮನಗರ ಜಿಲ್ಲೆಗೆ ಹೋಗುತ್ತಾರೋ ಅಥವಾ ಮಾನ್ಯ ರವಿಯವರೇ, ಮಾನ್ಯ ಸಚಿವರ ಛೇಂಬರ್‌ಗಾದರೂ ಹೋಗಿ.

**ಶ್ರೀ ಎಸ್. ರವಿ:–** ಅವರು ಸಕರಾತ್ಮಕವಾಗಿ ಸ್ಪಂದಿಸಿದ್ದಾರೆ. ಮಾನ್ಯ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ಇಡೀ ರಾಮನಗರ ಜಿಲ್ಲೆಯಲ್ಲಿ ಇರುಳಿಗರ ಸಮುದಾಯದ ಪರವಾಗಿ ಸುದೀರ್ಘವಾದ ಕಾರ್ಯಕ್ರಮವನ್ನು ಮಾಡಲಿ.

**ಶ್ರೀ ಬಿ. ಶ್ರೀರಾಮುಲು:–** ನಾನು ಸಮುದಾಯದ ಬಗ್ಗೆ ಮಾತನಾಡುತ್ತೇನೆ.

**ಶ್ರೀ ಎಸ್. ರವಿ:–** ರಾಮನಗರ ಜಿಲ್ಲೆಯ ಜಿಲ್ಲಾಧಿಕಾರಿ ಕಛೇರಿಗೆ ಬಂದು, ಒಂದು ಸಭೆ ಕರೆದು ಮಾಡಲಿ.

**ಡಾ॥ ಕೆ. ಗೋವಿಂದರಾಜ್:–** ಮಾನ್ಯ ರವಿಯರವೇ, ಮಾನ್ಯ ಸಚಿವರು ಬಂದಾಗ, ಅವರಿಗೊಂದು ಸನ್ಮಾನ ಮಾಡಿ.

**ಶ್ರೀ ಎಸ್. ರವಿ:–** ಆಯಿತು.

**ಪ್ರಶ್ನೆ ಸಂಖ್ಯೆ ೫೦೩**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ॥ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) (ಶ್ರೀ ಸಲೀಂ ಅಹಮದ್‌ರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಎಲ್ಲಾ ಪ್ರಶ್ನೆಗಳಿಗೂ ಸಮರ್ಪಕವಾದ ಉತ್ತರವನ್ನು ಒದಗಿಸಿದ್ದಾರೆ. ನಾನು ಕೇಳುವ ಮೂರೇ ಮೂರು supplementary questions ಕೇಳವಂತಹದ್ದಕ್ಕೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ ಎಂದು ಭಾವಿಸುತ್ತೇನೆ. ರಾಜ್ಯದಲ್ಲಿರುವ ಕಾರ್ಮಿಕರಲ್ಲಿ ಬಹುತೇಕವಾಗಿ ವಲಸೆ ಕಾರ್ಮಿಕರೇ ಹೆಚ್ಚು, ಇಂತಹ ಕಾರ್ಮಿಕರನ್ನು ಸರ್ಕಾರ ಯಾವ ರೀತಿ ಗುರುತಿಸಿದೆ. ಇಂತಹ ಕಾರ್ಮಿಕರಿಗೆ ಆಧಾರ್ ಕಾರ್ಡ್, ಪಡಿತರ ಕಾರ್ಡ್‌ಗಳನ್ನು ನೀಡಲಾಗಿದೆಯೇ, ಒಂದು ವೇಳೆ ನೀಡಿದ್ದರೇ, ಯಾವ ಆಧಾರದ ಮೇಲೆ ನೀಡಲಾಗಿದೆ. ರಾಜ್ಯದಲ್ಲಿ ಬಹುತೇಕವಾಗಿ ಬಾಂಗ್ಲಾದೇಶದಿಂದ ವಲಸಿಗರು ರಾಜ್ಯಕ್ಕೆ ಬಂದು ಕಟ್ಟಡ ಕಾರ್ಮಿಕರಾಗಿ ಹಾಗೂ ವಿವಿಧ ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಇಂತಹವರಿಗೆ ಸರ್ಕಾರ ಯಾವ ರೀತಿ ಗುರುತಿಸಿ, ಅವರಿಗೆ ಪರಿಹಾರ ಹಾಗೂ ಇನ್ನಿತರ ಸೌಲಭ್ಯಗಳನ್ನು ಒದಗಿಸಿದೆ ಎಂಬುದನ್ನು ಸರ್ಕಾರ ತಿಳಿಸಬೇಕಾಗಿದೆ. ಕಾರ್ಮಿಕರಲ್ಲಿ ಬಹಳಷ್ಟು ಕಾರ್ಮಿಕರು ಕೋವಿಡ್‌ಗೆ ತುತ್ತಾಗಿ, ಮರಣ ಹೊಂದಿರುತ್ತಾರೆ. ಇಂತಹ ಪ್ರಕರಣಗಳೆಷ್ಟು ಎಂಬುದರ ಬಗ್ಗೆ ಕೇಳುತ್ತೇನೆ. ರಾಜ್ಯ ಕಾರ್ಮಿಕ ವಿಮಾ ಇಲಾಖೆಯಿಂದ ಕೋವಿಡ್‌ನಿಂದ ಮೃತ ಪಟ್ಟ ಕಾರ್ಮಿಕರನ್ನು ಗುರುತಿಸಿ, ಅವರನ್ನು ಅವಲಂಬಿತವಾಗಿರುವ ಪತ್ನಿ-ಪತಿ ಅಥವಾ ಮಕ್ಕಳಿಗೆ ಸರ್ಕಾರ ಯಾವ ಸೌಲಭ್ಯ ನೀಡಿದೆ. ಕೋವಿಡ್ ಸಂದರ್ಭದಲ್ಲಿ ಹಲವಾರು ಕಾರ್ಮಿಕರು, ತಮ್ಮ ಕೆಲಸವನ್ನು ಕಳೆದುಕೊಂಡಿರುವ ಪ್ರಸಂಗಗಳು ಇವೆ. ಇಂತಹ ಕಾರ್ಮಿಕರನ್ನು ಗುರುತಿಸಿ, ಮರಳಿ ಉದ್ಯೋಗ ನೀಡುವ ಯೋಚನೆ ಸರ್ಕಾರದ ಮುಂದಿದೆಯೇ ಎಂಬ ಬಗ್ಗೆ ಇಷ್ಟು supplementary questions ಗೆ ಮಾನ್ಯ ಸಚಿವರು ಉತ್ತರವನ್ನು ಹೇಳಲಿ.

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಯ ಜೊತೆಗೆ ನಮ್ಮ ಕಾರ್ಮಿಕ ಇಲಾಖೆ ಉತ್ತರ ನೀಡುವುದರ ಮೂಲಕ ಅನೇಕ ವಿಚಾರಗಳನ್ನು ಸದನದ ಸದಸ್ಯರ ಗಮನಕ್ಕೆ ತಂದಿದೆ.

**ಡಾ॥ ಕೆ. ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಬಹಳ ಸಮರ್ಪಕವಾಗಿ ಒದಗಿಸಿದ್ದಾರೆ.

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಎರಡ್ಮೂರು ಸಂಗತಿಗಳನ್ನು ಪ್ರಶ್ನೋತ್ತರದಲ್ಲಿ ಕೇಳಿದ್ದಾರೆ. ಅದಕ್ಕೆ ಸಮರ್ಪಕವಾದಂತಹ ಉತ್ತರವನ್ನು ಒದಗಿಸಿದ್ದೇವೆ. 2013-14ನೇ ಸಾಲಿನಲ್ಲಿ ಪ್ರೋತ್ಸಾಹ ಧನವಾಗಿ 2,27,489 ವಿದ್ಯಾರ್ಥಿಗಳಿಗೆ ರೂ.103 ಕೋಟಿ ಹಣವನ್ನು ನಮ್ಮ ಸರ್ಕಾರ ನೀಡಿದೆ.

ಮಾನ್ಯ ಸಭಾಪತಿಯವರೇ, 2019-20, 2020-21, 2021-22, 2022-23ನೇ ಸಾಲಿನವರೆಗೆ ಸುಮಾರು 6,63,398 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು DBT (Direct Benefit Transfer) ಆಧಾರದ ಮೇಲೆ ರೂ. 861 ಕೋಟಿ ಹಣವನ್ನು ನಮ್ಮ ಸರ್ಕಾರ ಕೊಟ್ಟಿದೆ. ಇದನ್ನು ಯಾರು ನಂಬುವುದಕ್ಕೆ ಸಾಧ್ಯವಿಲ್ಲ. ಇವತ್ತು ಎಲ್ಲವನ್ನು ಮೂರು ಪಟ್ಟು ಹೆಚ್ಚು ಮಾಡಿದ್ದೇವೆ. ಒಂದು ಕಾಲಕ್ಕೆ ಕಾರ್ಮಿಕರ ಮಕ್ಕಳಿಗೆ ಕೆಲವೇ ಕೆಲವು ವಿದ್ಯಾಭ್ಯಾಸ ಮಾತ್ರ ವಿದ್ಯಾರ್ಥಿವೇತನ ಕೊಡುವಂತಹ ಪದ್ಧತಿ ಇತ್ತು. ನಾವು ಅದನ್ನು ಬದಲಾವಣೆ ಮಾಡಿ, ಅದನ್ನು ಹೆಚ್ಚು ಮಾಡಿದ್ದೇವೆ. 1 ರಿಂದ 4ನೇ ತರಗತಿಗೆ ರೂ.3,000/- ವಿದ್ಯಾರ್ಥಿ ವೇತನವಿತ್ತು. ಅದನ್ನು ರೂ.5,000/-ಗೆ ಹೆಚ್ಚಿಸಿದ್ದೇವೆ. 5 ರಿಂದ 8ನೇ ತರಗತಿಗೆ ರೂ.3,000/- ವಿದ್ಯಾರ್ಥಿ ವೇತನವಿತ್ತು. ಅದನ್ನು ರೂ.8,000/-ಗೆ ಹೆಚ್ಚಿಸಿದ್ದೇವೆ. 9 ರಿಂದ 10ನೇ ತರಗತಿಗೆ ರೂ.6,000/- ವಿದ್ಯಾರ್ಥಿ ವೇತನವಿತ್ತು. ಅದನ್ನು ರೂ.12,000/-ಗೆ ಹೆಚ್ಚಿಸಿದ್ದೇವೆ. ದ್ವಿತೀಯ ಪಿ.ಯು.ಸಿ. ರೂ. 7,000/- ವಿದ್ಯಾರ್ಥಿ ವೇತನವಿತ್ತು. ಅದನ್ನು ರೂ. 20,000/-ಗೆ ಹೆಚ್ಚಿಸಿದ್ದೇವೆ. ಪದವಿಗಳಿಗೆ ರೂ. 10,000/- ವಿದ್ಯಾರ್ಥಿ ವೇತನವಿತ್ತು. ಅದನ್ನು 25,000/-ಗೆ ಹೆಚ್ಚಿಸಿದ್ದೇವೆ.

**(878) 16-09-2022, 11.40, ಟಿಸಿಹೆಚ್-ಎಂಡಿ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್ (ಮುಂದು):-**

ಸ್ನಾತಕೋತ್ತರ ಪದವಿಯಲ್ಲಿ ರೂ.20,000ಗಳು ಇತ್ತು, ಅದನ್ನು ರೂ.35,000ಗಳಿಗೆ ಹೆಚ್ಚಿಸಿದ್ದೇವೆ. ಇಂಜಿನಿಯರಿಂಗ್‌ಗೆ ರೂ.25,000ಗಳು ಇತ್ತು, ಅದನ್ನು ರೂ.50,000ಗಳಿಗೆ ಹೆಚ್ಚಿಸಿದ್ದೇವೆ. ವೈದ್ಯಕೀಯ ಕೋರ್ಸ್‌ಗಳಿಗೆ ರೂ.30,000ಗಳು ಇತ್ತು, ಅದನ್ನು ರೂ.60,000ಗಳಿಗೆ ಹೆಚ್ಚಿಸಿದ್ದೇವೆ. ನರ್ಸಿಂಗ್, ಎಂ.ಡಿ., ಪಿ.ಹೆಚ್.ಡಿ., ಇಂತಹ ಯಾವುದೇ ಕೋರ್ಸ್‌ಗಳಿಗೆ ವಿದ್ಯಾರ್ಥಿ ವೇತನ ಇರಲಿಲ್ಲ. ಆದರೆ ಇವತ್ತಿನ ದಿವಸ ಯಾವುದೇ ಕಾರ್ಮಿಕರ ಮಕ್ಕಳು ಯಾವುದೇ ವಿದ್ಯಾಭ್ಯಾಸ ಮಾಡಲಿ, ಆ ಎಲ್ಲಾ ಖರ್ಚುಗಳನ್ನು ಕೂಡ ನಾವೇ ಭರಿಸತಕ್ಕಂಥ ಒಂದು ಪದ್ಧತಿಯನ್ನು ಜಾರಿಗೆ ತಂದಿದ್ದೇವೆ. ಯಾರು ರಾಷ್ಟ್ರೀಕೃತ ವಿದ್ಯಾಭ್ಯಾಸಗಳನ್ನು ಮಾಡುತ್ತಾರೆ, ಅದು LL.M (Master of Law), IIT (Indian Institute of Technology), IIM (Indian Institute of Management), NIT (National Institute of Technology), IAS (Indian Administrative Service) ಇರಬಹುದು. ಯಾರಾದರು ಕಾರ್ಮಿಕರ ಮಕ್ಕಳು selection ಆದಲ್ಲಿ, ಅದರ ಸಂಪೂರ್ಣ ವೆಚ್ಚವನ್ನು ಕಾರ್ಮಿಕ ಇಲಾಖೆಯಿಂದ ಭರಿಸತಕ್ಕಂಥ ಒಂದು ಪದ್ಧತಿಯನ್ನು ಇವತ್ತಿನ ದಿವಸ ನಾವು ಜಾರಿಗೆ ತಂದಿದ್ದೇವೆ. ಎರಡನೆಯದಾಗಿ, ವಲಸೆ ಕಾರ್ಮಿಕರ ಬಗ್ಗೆ ಹೇಳುವುದಾದರೆ, ಇವತ್ತಿನ ದಿವಸ ವಲಸೆ ಕಾರ್ಮಿಕರು ಎಷ್ಟು ಜನ ಬಂದಿದ್ದಾರೆ? ನಾವು ಕೋವಿಡ್-19 ಸಂದರ್ಭದಲ್ಲಿ ನಾವು ಬಹಳ ಕಷ್ಟ ಅನುಭವಿಸಿದ್ದೇವೆ. ಸುಮಾರು 4.5 ಲಕ್ಷ ವಲಸೆ ಕಾರ್ಮಿಕರು ಇದ್ದಾರೆಂದು ನಮಗೆ ಗೊತ್ತಾಯಿತು. ಅವರನ್ನು ಮನೆಗೆ ಮುಟ್ಟಿಸುವವರೆಗೂ ನಾವೇ train book ಮಾಡಿ, ಮನೆಮುಟ್ಟಿಸುವಂಥ ಕೆಲಸವನ್ನು ನಾವು ಮಾಡಿದ್ದೇವೆ. ಇವತ್ತಿನ ದಿವಸ ಎಷ್ಟು ಜನ ವಲಸೆ ಕಾರ್ಮಿಕರು ಬಂದಿದ್ದಾರೆಂದು ನಮಗೆ ಲೆಕ್ಕ ಸಿಗುತ್ತಿಲ್ಲ. ಆದರೆ ವಲಸೆ ಕಾರ್ಮಿಕರು ಯಾವುದೇ ಸೌಲತ್ತನ್ನು ಕೇಳಿದರೆ, ನಾವು ಅದಕ್ಕೆ helpline ಮಾಡಿದ್ದೇವೆ. ದಿನದ 24 ಗಂಟೆಗಳ ಕಾಲ ಆ helpline ಇದೆ, ಆ helpline ಗೆ ಫೋನ್ ಮಾಡಬಹುದು. ಯಾವುದೇ ವಲಸೆ ಕಾರ್ಮಿಕರು ಆ helpline ಗೆ ಫೋನ್ ಮಾಡಿದರೆ, ಅವರಿಗೆ ಬೇಕಾದಂತಹ ಎಲ್ಲಾ ಸೌಲತ್ತುಗಳಾದ ration card

ಇರಬಹುದು ಅಥವಾ ಇನ್ಯಾವುದೇ ಸೌಲತ್ತುಗಳು ಕೊಡತಕ್ಕಂಥದ್ದನ್ನು ಮಾಡಿದ್ದೇವೆ. ಇಡೀ ದೇಶದಲ್ಲಿ ಮೊದಲಬಾರಿಗೆ ಮಹಾರಾಷ್ಟ್ರದಲ್ಲಿ ಮಾಡಿದ್ದಾರೆ. ಅದು ಬಿಟ್ಟರೆ ನಮ್ಮ ಕರ್ನಾಟಕದಲ್ಲಿ ಮಾಡಿದ್ದೇವೆ. ವಲಸೆ ಕಾರ್ಮಿಕರಿಗೆ transit homes ಕಟ್ಟತಕ್ಕಂಥ ಕೆಲಸ ಮಾಡಿದ್ದೇವೆ. ಅವರು ಬಂದಾಗ ಉಳಿಯುವುದಕ್ಕೆ ಬೇಕಾದಂಥ ಮನೆಯನ್ನು ಕಟ್ಟತಕ್ಕಂಥದ್ದನ್ನು ಇವತ್ತಿನ ದಿವಸ ಶಿವಮೊಗ್ಗ, ಬೆಂಗಳೂರು, ಬೆಳಗಾವಿ ಚಾಮರಾಜನಗರ ಮತ್ತು ಇತರೆ 7 ಜಿಲ್ಲೆಗಳಲ್ಲಿ transit homes ಕಟ್ಟಿ, ಅವರಿಗೆ ಪುಕ್ಕಟೆ ವಸತಿ ಸೌಲಭ್ಯವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ.

**ಸಭಾಪತಿಯವರು:-** ಮಾನ್ಯ ಅರಬೈಲ್ ಶಿವರಾಂ ಹೆಬ್ಬಾರ್ ರವರೇ, ಧನ್ಯವಾದಗಳು.

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:-** ಮಾನ್ಯ ಸಭಾಪತಿಯವರೇ, ನನಗೆ ಇನ್ನು ಎರಡು ನಿಮಿಷ ಸಮಯ ಕೊಡಿ.

**ಶ್ರೀ ಕೆ.ಗೋವಿಂದರಾಜ್ (ಮಾನ್ಯ ಸಲೀಂ ಅಹಮದ್ ರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಾನು ಕೇಳಿರುವುದಕ್ಕಿಂತ ಹೆಚ್ಚಿಗೆ ಉತ್ತರವನ್ನು ಕೊಡುತ್ತಿದ್ದಾರೆ.

**ಸಭಾಪತಿಯವರು:-** ನಾನು ಅದಕ್ಕೆ ಹೇಳುತ್ತಿರುವುದು.

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:-** ಮಾನ್ಯ ಸಭಾಪತಿಯವರೇ, ನಾನು ಬೇಕೆಂತಲೇ ಸ್ವಲ್ಪ ಗೊತ್ತಾಗಲಿ ಎಂದು ಹೆಚ್ಚಿಗೆ ಮಾಹಿತಿ ಕೊಡುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಅರಬೈಲ್ ಶಿವರಾಂ ಹೆಬ್ಬಾರ್ ರವರೇ, ಇದು ಪ್ರಶ್ನೋತ್ತರ ಅವಧಿ. ದಯವಿಟ್ಟು ನಾನು ಸದನ ನಡೆಸಬೇಕು. ನೀವು ನಿಮ್ಮ ಇಲಾಖೆಯಲ್ಲಿ ತುಂಬಾ ಚೆನ್ನಾಗಿ ಕೆಲಸ ಮಾಡುತ್ತಿದ್ದೀರಿ, ಎನ್ನುವುದು ನಮಗೆ ಗೊತ್ತಿದೆ.

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:-** ಮಾನ್ಯ ಸಭಾಪತಿಯವರೇ, ನನಗೆ ಇನ್ನು ಎರಡು ನಿಮಿಷ ಸಮಯಾವಕಾಶ ಕೊಡಿ. ರಾಜ್ಯಕ್ಕೂ ಗೊತ್ತಾಗಲಿ ಎಂದು ಹೇಳುತ್ತಿದ್ದೇನೆ.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಚೆನ್ನಾಗಿ ಕೊಟ್ಟಿದ್ದಾರೆಂದು ನಾನು ಹೇಳಿದ್ದೇನೆ.

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಒಟ್ಟು 750 ಜನ ಕಾರ್ಮಿಕರ ಮಕ್ಕಳಿಗೆ IAS and KAS coaching ಪೂರ್ಣವಾಗಿ ಪುಕ್ಕಟೆ ಕೊಡುವುದರ ಜೊತೆಗೆ, ತಿಂಗಳಿಗೆ ರೂ. 6,000ಗಳು stipend ಕೊಡುತ್ತಿದ್ದೇವೆ. ಬೆಂಗಳೂರು ಮತ್ತು ಧಾರವಾಡದಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಆಯ್ಕೆ ಮಾಡಿ, ಇವತ್ತಿನ ದಿವಸ ಸುಮಾರು 750 ಮಕ್ಕಳಿಗೆ ಪುಕ್ಕಟೆಯಾಗಿ IAS and KAS coaching ಗೆ ವ್ಯವಸ್ಥೆ ಮಾಡುತ್ತಿದ್ದೇವೆ. ಅದರ ಜೊತೆಗೆ ದೇಶದಲ್ಲಿ ವಿಶೇಷವಾಗಿ ಕರ್ನಾಟಕದಲ್ಲಿ ಮೊಲದನೆಯ ಬಾರಿಗೆ 35 ವಿದ್ಯಾರ್ಥಿಗಳಿಗೆ pilot training ಕೊಡತಕ್ಕಂಥ ಒಂದು ವಿನೂತನ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದೇವೆ.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, Election speech ಮುಂಚಿತವಾಗಿಯೇ ಇದೆ.

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:-** ಮಾನ್ಯ ಸಭಾಪತಿಯವರೇ, ಒಬ್ಬ ವಿದ್ಯಾರ್ಥಿಗೆ ಸುಮಾರು ರೂ.38.00 ಲಕ್ಷಗಳು ಖರ್ಚು ಮಾಡಿ, 35 ವಿದ್ಯಾರ್ಥಿಗಳಿಗೆ pilot training ನ್ನು ಕೊಟ್ಟು, ಪ್ರತಿ ಜಿಲ್ಲೆಗೊಬ್ಬ ವಿದ್ಯಾರ್ಥಿ pilot ಆಗಬೇಕು ಎನ್ನತಕ್ಕಂಥ ವಿನೂತನ ಯೋಜನೆಯನ್ನು ಇವತ್ತಿನ ದಿವಸ ಜಾರಿಗೆ ತಂದಿದ್ದೇವೆ. ಈ ರೀತಿ ಅನೇಕ ಹೊಸ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದೇವೆ.

**Mr. CHAIRMAN:-** Thank you.

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:-** ಮಾನ್ಯ ಸಭಾಪತಿಯವರೇ, ಕೊನೆಯದಾಗಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಲಾಖೆಯಲ್ಲಿ 3,34,000 ಅರ್ಜಿಗಳು ಬಾಕಿ ಇತ್ತು, 2016ನೇ ಇಸವಿಯಿಂದ ಇವತ್ತಿನವರೆಗೆ ಕಾರ್ಮಿಕರ ಅದಾಲತ್‌ನ್ನು ಮಾಡಿ, ಒಂದು ತಿಂಗಳಿನಲ್ಲಿ 2,98,000 ಕಾರ್ಮಿಕರ ಅರ್ಜಿಗಳನ್ನು ವಿಲೇವಾರಿ ಮಾಡಿ; ರೂ.98 ಕೋಟಿಗಳನ್ನು ಕಾರ್ಮಿಕರ

ಅಕೌಂಟ್‌ಗೆ ಹಾಕುವುದರಲ್ಲಿ ನಾವು ಯಶಸ್ವಿಯಾಗಿದ್ದೇವೆ. ಈ ರೀತಿ ಕಾರ್ಮಿಕರಿಗೆ ಬೇಕಾದಂತಹ ವಿನೂತನ ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ.

**Mr. CHAIRMAN:-** Thank you Sir, Thank you.

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:-** ಮಾನ್ಯ ಸಭಾಪತಿಯವರೇ, 2013-14ನೇ ಸಾಲಿನಿಂದ 2017-18ರವರೆಗೆ ಒಟ್ಟು 2,68,475 ಜನಕ್ಕೆ ರೂ.275 ಕೋಟಿಗಳು ಪರಿಹಾರ ಕೊಟ್ಟಿದ್ದೇವೆ.

**ಸಭಾಪತಿಯವರು:-** ಮಾನ್ಯ ಅರಬೈಲ್ ಶಿವರಾಂ ಹೆಬ್ಬಾರ್ ರವರೇ, ಮಾನ್ಯ ಸದಸ್ಯರು ನಾನು ಏಕಪ್ಪಾ, ಪ್ರಶ್ನೆ ಕೇಳಿದೆ ಎನ್ನುತ್ತಿದ್ದಾರೆ.

**(ಗೊಂದಲ)**

**ಡಾ.ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಕೆ.ಗೋವಿಂದರಾಜ್‌ರವರು ಕಾರ್ಮಿಕ ಇಲಾಖೆಗೆ ಇನ್ನೊಂದು ಬಾರಿ ಪ್ರಶ್ನೆ ಕೇಳಬಾರದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಪ್ರಶ್ನೆ ಕೇಳಿದರೆ, ಕಾರ್ಮಿಕ ಇಲಾಖೆಗೆ ಪ್ರಶ್ನೆ ಹಾಕುವುದಿಲ್ಲ.

**(ಗೊಂದಲ)**

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:-** ಮಾನ್ಯ ಸಭಾಪತಿಯವರೇ, ಇಡೀ ಕರ್ನಾಟಕ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ 1/3 ಭಾಗ ಕಾರ್ಮಿಕರು ಇದ್ದಾರೆ. ಕಾರ್ಮಿಕರನ್ನು ಹಗುರವಾಗಿ ಯೋಚನೆ ಮಾಡಬೇಡಿ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇನ್ಯಾರೂ ಈ ಸದನದಲ್ಲಿ ಕಾರ್ಮಿಕ ಸಚಿವರಿಗೆ ಪ್ರಶ್ನೆಯನ್ನೇ ಕೇಳಬಾರದು.

**ಸಭಾಪತಿಯವರು:-** ಮಾನ್ಯ ಅರಬೈಲ್ ಶಿವರಾಂ ಹೆಬ್ಬಾರ್ ರವರಗೆ ಧನ್ಯವಾದಗಳು.

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:-** ಮಾನ್ಯ ಸಭಾಪತಿಯವರೇ, ಇಡೀ ಕರ್ನಾಟಕ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ 1/3 ಭಾಗ ಕಾರ್ಮಿಕರು ಇದ್ದಾರೆ. ಇವತ್ತಿನ ದಿವಸ ಅಷ್ಟರಮಟ್ಟಿಗೆ ಕಾರ್ಮಿಕ ಇಲಾಖೆಯಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ತಂದಿದ್ದೇವೆ. ಎಲ್ಲರಿಗೂ ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ.535**

**(ಉತ್ತರ ಲಗತ್ತಿಸಿದೆ)**

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಾನು ಕೇಳಿರತಕ್ಕಂಥ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಸಾರಿಗೆ ಸಂಸ್ಥೆಗಳ ನೌಕರರಿಗೆ 2020ನೇ ಸಾಲಿಗೆ ವೇತನ ಪರಿಷ್ಕರಣೆ ಮಾಡಲು due ಇತ್ತು. ಪ್ರತಿ 4 ವರ್ಷಕ್ಕೊಮ್ಮೆ ಸಾರಿಗೆ ಸಂಸ್ಥೆಗಳ ನೌಕರರಿಗೆ ವೇತನ ಪರಿಷ್ಕರಣೆ ಆಗುವಂಥದ್ದು ಇದೆ. 2016ನೇ ಇಸವಿಯಿಂದ ಇಲ್ಲಿಯವರೆಗೂ ಸಾರಿಗೆ ಸಂಸ್ಥೆಗಳ ನೌಕರರಿಗೆ ವೇತನ ಪರಿಷ್ಕರಣೆ ಆಗಲಿಲ್ಲ. ಹಿಂದಿನ ಸಾರಿಗೆ ಸಚಿವರಾಗಿದ್ದ ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿಯವರು, ಅವರಿಗೆ 6ನೇ ವೇತನ ಆಯೋಗವನ್ನು ಜಾರಿಗೊಳಿಸುತ್ತೇವೆ ಎನ್ನುತಕ್ಕಂಥ ಭರವಸೆಯನ್ನೂ ಕೂಡ ಕೊಟ್ಟಿದ್ದರು. ಆದರೆ ನಮ್ಮ ಸಚಿವರ speed ಗೆ ಅವರೇನು ಸಮಿತಿ ರಚನೆ ಮಾಡಿದ್ದಾರೆ, ಅವರು speed ಇಲ್ಲವೆನಿಸುತ್ತಿದೆ. ಏಕೆಂದರೆ ನಮ್ಮ ಸಚಿವರು ಪ್ರಾಮಾಣಿಕರು. ಅತ್ಯಂತ ವೇಗವಾಗಿ ಇಡೀ ಇಲಾಖೆಯನ್ನು ತೆಗೆದುಕೊಂಡು ಹೋಗುವಂಥದ್ದನ್ನು ಮಾಡುತ್ತಿದ್ದಾರೆ. ಈಗ ನಾನು ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ಈ ಸಾರಿಗೆ ಸಂಸ್ಥೆಗಳ ನೌಕರರು ಹಲವಾರು ಸಿಬ್ಬಂದಿಗಳು ಆತ್ಮಹತ್ಯೆ ಮಾಡಿಕೊಂಡಿರುವುದನ್ನೂ ಕೂಡ ನಾವು ನೋಡಿದ್ದೇವೆ. ಕೋವಿಡ್-19 ಸಂದರ್ಭದಲ್ಲಿ ಸರ್ಕಾರಿ ನೌಕರರು ಮೃತರಾದರೆ ರೂ.30.00 ಲಕ್ಷಗಳ ಪರಿಹಾರ ಕೊಡುವುದು ಇದೆ. ಸಾರಿಗೆ ಸಂಸ್ಥೆಗಳ ನೌಕರರಿಗೆ ಆ ರೀತಿ ಕೊಟ್ಟಿರತಕ್ಕಂಥದ್ದು ಇದೆಯೇ ಎನ್ನುವಂಥದ್ದನ್ನು ಗಮನಿಸಬೇಕು. ಪ್ರಮುಖವಾಗಿ ಇವತ್ತಿನ ದಿವಸ ಸಾರಿಗೆ ಸಂಸ್ಥೆಗಳವರು, IOCL (Indian Oil Corporation Limited), BPCL (Bharat Petroleum Corporation Limited) and HPCL (Hindustan Petroleum Corporation Limited), ನಲ್ಲಿ ಡೀಸೆಲ್ ತೆಗೆದುಕೊಳ್ಳಬೇಕಾದರೆ ರೂ.100 ಗಳಿಗಿಂತ ಹೆಚ್ಚು ದುಡ್ಡು ಕೊಟ್ಟು ತೆಗೆದುಕೊಳ್ಳಬೇಕಾಗಿದೆ. ಅಂದರೆ ಒಬ್ಬ ಗ್ರಾಹಕನಿಗೆ ಏನು subsidized ಸಿಗುತ್ತಿದೆ ಅಥವಾ tax portion ಇದೆ, ಆ tax portion ನ್ನು ಸರ್ಕಾರ ಭರಿಸುತ್ತದೆ. ಅದು ಆ ಇಲಾಖೆ ಕೊಡುವುದರೊಳಗೆ ಇಲ್ಲ. ಇವತ್ತಿನ ದಿವಸ ಏನಾಗಿದೆಯೆಂದರೆ, ಆ ಎಲ್ಲಾ ಸಾರಿಗೆ ಸಂಸ್ಥೆಗಳು ಒಂದು

private Petrol Pumps ನಿಂದ ತೆಗೆದುಕೊಳ್ಳುವಂಥದ್ದು ಆಗುತ್ತಿದೆ. ಆದ್ದರಿಂದ ಸರ್ಕಾರ ಏನಾದರು ಆ tax rate ನ್ನು ಕಡಿಮೆ ಮಾಡಿದರೆ, ಆ ಸಾರಿಗೆ ಸಂಸ್ಥೆಯವರಿಗೆ ಅಷ್ಟು ಹೊರೆ ಕಡಿಮೆಯಾಗುತ್ತದೆ. ಕೋವಿಡ್-19 ಗಿಂತ ಮುಂಚೆ ಸಾರಿಗೆ ಸಂಸ್ಥೆಗಳಲ್ಲಿ ತುಂಬಾ ಸಮಸ್ಯೆಗಳಿತ್ತು. ಸಾಕಷ್ಟು ಸಮಸ್ಯೆಗಳನ್ನು ಮಾನ್ಯ ಸಾರಿಗೆ ಸಚಿವರು ಬಗೆಹರಿಸಿದ್ದಾರೆ. ದಯಮಾಡಿ ಇದರ ಬಗ್ಗೆ ಗಮನಹರಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಬಯಸುತ್ತಿದ್ದೇನೆ.

**ಶ್ರೀ ಬಿ.ಶ್ರೀರಾಮುಲು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಿ.ಎಸ್.ಅರುಣ್‌ರವರು ಸಾರಿಗೆ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ವೇತನ ಪರಿಷ್ಕರಣೆ ಆಗಬೇಕಾಗಿತ್ತು. ಕಳೆದ 4 ವರ್ಷಗಳಿಂದ ಇಲ್ಲಿಯವರೆಗೆ ವೇತನ ಪರಿಷ್ಕರಣೆ ಆಗಿಲ್ಲ ಎನ್ನತಕ್ಕಂಥ ಪ್ರಶ್ನೆಯನ್ನು ಕೇಳಿದ್ದಾರೆ. ವೇತನ ಪರಿಷ್ಕರಣೆ ವಿಚಾರದಲ್ಲಿ ಈಗಾಗಲೇ ಸರ್ಕಾರ ಬದ್ಧವಾಗಿದೆ. ಜೊತೆಗೆ ನಮ್ಮ ನಾಲ್ಕು ಮಂದಿ Managing Director ಗಳ ಹತ್ತಿರ ನಾವು ಚರ್ಚೆ ಮಾಡಿ, ವೇತನ ಪರಿಷ್ಕರಣೆ ವಿಚಾರದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದ್ದು, ಆ ಸಮಿತಿಯ ವರದಿಯನ್ನೂ ಕೂಡ ಸರ್ಕಾರಕ್ಕೆ ಒಪ್ಪಿಸುವಂತಹ ಕೆಲಸವನ್ನೂ ಕೂಡ ಮಾಡಿದ್ದಾರೆ. ಬಹುಶಃ ಪ್ರತಿ 4 ವರ್ಷಕ್ಕೊಮ್ಮೆ ವೇತನ ಪರಿಷ್ಕರಣೆ ಮಾಡಬೇಕಾಗಿತ್ತು. 2016ರಲ್ಲಿ ಒಂದು ಬಾರಿ ವೇತನ ಪರಿಷ್ಕರಣೆ ಆಗಿತ್ತು. ಅಲ್ಲಿಂದ ಇಲ್ಲಿಯವರೆಗೂ ವೇತನ ಪರಿಷ್ಕರಣೆ ಆಗಿಲ್ಲ. ಇದು ನನ್ನ ಗಮನಕ್ಕೂ ಕೂಡ ಬಂದಿದೆ. ಏಕೆಂದರೆ ಕಳೆದ 4 ವರ್ಷಗಳಿಂದ ವೇತನ ಪರಿಷ್ಕರಣೆ ವಿಚಾರದಲ್ಲಿ ನಾವು 2020-21ನೇ ಇಸವಿಯ ಏಪ್ರಿಲ್ ತಿಂಗಳಿನಲ್ಲಿ ಮುಖ್ಯವಾಗಿ ವೇತನ ಪರಿಷ್ಕರಣೆ ಮತ್ತು ಬೇರೆ ಬೇರೆ demand ಗಳನ್ನು ಹಿಡಿದುಕೊಂಡು ಬಹಳಷ್ಟು ಮಂದಿ ನೌಕರಸ್ಥರು ಮುಷ್ಕರ ಮಾಡಿದ್ದರು. ಅವರು ಮುಖ್ಯವಾಗಿ ವೇತನ ಪರಿಷ್ಕರಣೆ ಆಗಬೇಕು ಎಂದು ಬಹಳಷ್ಟು ದೊಡ್ಡ demand ನ್ನು ಇಟ್ಟುಕೊಂಡು ಸುಮಾರು 2000 ಕ್ಕೂ ಹೆಚ್ಚು ಮಂದಿ ಬೀದಿಗಿಳಿದು ಹೋರಾಟವನ್ನು ಮಾಡುವಂಥ ಕೆಲಸವನ್ನೂ ಕೂಡ ಮಾಡಿದ್ದರು. ಅವೊತ್ತು ಬಹಳಷ್ಟು ಗೊಂದಲ ಇತ್ತು. ನನ್ನ ಸ್ನೇಹಿತರಾದ ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿಯವರು ಅವೊತ್ತಿನ ದಿವಸ ಸಾರಿಗೆ ಸಚಿವರಾಗಿದ್ದರು. ಅವೊತ್ತು ನಾನು, ಸನ್ಮಾನ್ಯ ಮುಖ್ಯಮಂತ್ರಿಯವರು ಮತ್ತು ಇತರೆಯವರೆಲ್ಲಾ ಕುಳಿತು ಅದನ್ನು ಯಾವ ರೀತಿ ಬಗೆಹರಿಸಬೇಕು ಎನ್ನತಕ್ಕಂಥ ವಿಚಾರ ಬಂದತಹ

ಸಂದರ್ಭದಲ್ಲಿ, ಅವರೆಲ್ಲರನ್ನೂ ಕರೆದು ಮಾತನಾಡಿ; ಬಗೆಹರಿಸುವಂತಹ ಕೆಲಸವನ್ನು ಕೂಡ ಮಾಡಿದ್ದೇವೆ.

**(ಮುಂದು...)**

(೮79)16.9.2022/11.50/ಎಂ.ಎಂ-ಎ.ಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ. ಶ್ರೀರಾಮುಲು (ಮುಂದು):-**

ಏಕೆಂದರೆ ಕಳೆದ ವರ್ಷಕ್ಕಿಂತ ಈ ವರ್ಷ ನೋಡಿದರೆ ನಮ್ಮ ಇಲಾಖೆಯಲ್ಲಿ ಸಾಕಷ್ಟು ತೊಂದರೆಗಳಿವೆ. ಅದರ ಬಗ್ಗೆ ನಾನು ಉಲ್ಲೇಖ ಮಾಡುವುದಿಲ್ಲ. ಏಕೆಂದರೆ 'ಕೋವಿಡ್' ಬಂದಿದೆ. ಕೋವಿಡ್ ಬಂದ ನಂತರ ಪ್ರಯಾಣಿಕರ ದರವನ್ನು ಹೆಚ್ಚಳ ಮಾಡಬೇಕಾಗಿತ್ತು ಆದರೆ ಮಾಡುವುದಕ್ಕಾಗಲಿಲ್ಲ. ಜೊತೆಗೆ ಡೀಸೆಲ್ ದರ ತುಂಬಾ ಜಾಸ್ತಿ ಆಯಿತು. ನಾವು ಪ್ರತಿ ದಿನ ನಾಲ್ಕು ನಿಗಮಗಳಿಗಾಗಿ ಸುಮಾರು 15 ಕೋಟಿ ರೂಪಾಯಿಗಳಷ್ಟು ಡೀಸೆಲ್ ಅನ್ನು ಖರೀದಿ ಮಾಡುತ್ತೇವೆ. ಇದರಿಂದ ಸುಮಾರು 90 ಲಕ್ಷ ಪ್ರಯಾಣಿಕರಿಗೆ ಸೌಲಭ್ಯ ಒದಗಿಸುವ ಕೆಲಸವಾಗುತ್ತಿದೆ. ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿದ ಸಮಯದಲ್ಲಿ ಅವರು ವೇತನ ಪರಿಷ್ಕರಣೆ ಮಾಡಬೇಕು, ಆರ್ಥಿಕ ಇಲಾಖೆಯ ಜೊತೆ ಸಮಾಲೋಚನೆ ಮಾಡಿ ಇದನ್ನು ಇತ್ಯರ್ಥ ಮಾಡಬೇಕೆಂದು ಮುಖ್ಯಮಂತ್ರಿಯವರು ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವ ಕಾರಣ ಇದರ ಬಗ್ಗೆ ನಮ್ಮ ಸರ್ಕಾರಕ್ಕೆ ಬಹಳಷ್ಟು commitment ಇದೆ. ನಾಲ್ಕು ವರ್ಷಗಳಿಂದ ವೇತನ ಪರಿಷ್ಕರಣೆಯಾಗಿಲ್ಲ. ಆದಷ್ಟು ಶೀಘ್ರದಲ್ಲಿ ಇದನ್ನು ಇತ್ಯರ್ಥ ಮಾಡುವ ಕೆಲಸವನ್ನು ಮಾಡುತ್ತೇವೆ. ಜೊತೆಗೆ ನಾಲ್ಕು ನಿಗಮಗಳಲ್ಲಿ ಮುಂದಿನ ದಿನಗಳಲ್ಲಿ ಇದು ಹೀಗೆ ಆಗಬಾರದು. ನಾಲ್ಕು ನಿಗಮಗಳೂ ಲಾಭದಾಯಕವಾಗಿ ನಡೆಯಬೇಕೆನ್ನುವ ಕಾರಣದಿಂದ ನಿವೃತ್ತ ಐ.ಎ.ಎಸ್. ಅಧಿಕಾರಿಯವರಾದ ಶ್ರೀ ಶ್ರೀನಿವಾಸ ಮೂರ್ತಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿಕೊಂಡು ಸರ್ಕಾರಕ್ಕೆ ವರದಿ ಕೊಡುವ ಕೆಲಸ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಎಲ್ಲಾ ವಿಚಾರಗಳನ್ನೂ ಗಮನದಲ್ಲಿಟ್ಟುಕೊಂಡು ಸರ್ಕಾರವು ನಾಲ್ಕು ನಿಗಮಗಳಿಗೆ ಸುಮಾರು 12,000 ಕೋಟಿಯಷ್ಟು ಸಹಾಯ ಮಾಡಿದೆ. ಜೊತೆಗೆ ಇಂಧನ ವೆಚ್ಚವನ್ನು ಭರಿಸುವ ಕೆಲಸ ಮಾಡಿದೆ.

Taxation ವಿಚಾರಗಳು ಬಂದ ಸಮಯದಲ್ಲಿ ಕೂಡ ಷೇರು ಬಂಡವಾಳವಾಗಿ ಬದಲಾವಣೆ ಮಾಡುವ ಕೆಲಸ ಮಾಡಿದೆ. ಮುಂದಿನ ದಿನಗಳಲ್ಲಿ ಮಾನ್ಯ ಸದಸ್ಯರಾದ ಡಿ.ಎಸ್. ಅರುಣ್‌ರವರು ಕೇಳಿರುವ ವೇತನ ಪರಿಷ್ಕರಣೆ ಮಾಡುವ ವಿಚಾರದಲ್ಲಿ ಸರ್ಕಾರ ಬದ್ಧವಾಗಿದೆ. ಅದರ ಬಗ್ಗೆ ಮುಖ್ಯಮಂತ್ರಿಯವರ ಜೊತೆ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

**ಚುಕ್ಕೆ ಪ್ರಶ್ನೆ ಸಂಖ್ಯೆ: 546**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವಿವರವಾದ ಉತ್ತರವನ್ನು ಕೊಟ್ಟಿದ್ದಾರೆ. ತಮಗೂ ಕೂಡ ಗಂಗಾ ಕಲ್ಯಾಣ ಯೋಜನೆ ಬಗ್ಗೆ ಸಾಕಷ್ಟು ಮಾಹಿತಿ ಇದೆಯೆಂದು ಭಾವಿಸುತ್ತೇನೆ. ಕಳೆದ ಮೂರು ವರ್ಷಗಳಿಂದ ಹೈಕೋರ್ಟ್‌ನಲ್ಲಿ ಇದ್ದಂತಹ ವ್ಯಾಜ್ಯದಿಂದ 11 ನಿಗಮಗಳಲ್ಲಿ ಈ ಗಂಗಾ ಕಲ್ಯಾಣ ಯೋಜನೆಯನ್ನು ಜಾರಿಗೆ ತರುವುದಕ್ಕೆ ಆಗಿಲ್ಲ. ಈಗ ಹೈಕೋರ್ಟ್‌ನಿಂದ ತೀರ್ಮಾನವಾಗಿದೆ. ಅದು ಒಂದೆರಡು ನಿಗಮಕ್ಕೆ ಅನ್ವಯವಾಗುತ್ತದೆಯೇ ಅಥವಾ ತಮ್ಮ ಇಲಾಖೆಯಲ್ಲಿ ಬರುವ 11 ನಿಗಮಗಳಿಗೆ ಅನ್ವಯವಾಗುತ್ತದೆಯೇ ಎಂಬ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣ ಕೊಡಬೇಕೆಂದು ಕೇಳುತ್ತೇನೆ. ಇನ್ನೊಂದು ಪ್ರವರ್ಗವಾರು ಮಾಹಿತಿ ಕೇಳಿದ್ದೆ. ಮಾಹಿತಿ ಕೊಟ್ಟಿದ್ದಾರೆ ಆದರೆ ಪ್ರವರ್ಗವಾರು ಮಾಹಿತಿ ಕೊಟ್ಟಿಲ್ಲ. ಅಂದರೆ ಪ್ರವರ್ಗ 1, 1ಎ, 2ಎ, 2ಬಿ, 3ಎ, 3ಬಿ ಈ ರೀತಿ ಮಾಹಿತಿ ಕೊಟ್ಟಿಲ್ಲ, ಹಾಗೆ ಕೊಟ್ಟರೆ ಅನುಕೂಲವಾಗುತ್ತದೆ. ದಯಮಾಡಿ ಆ ಮಾಹಿತಿಯನ್ನು ಕೊಡಿಸಿ ಎಂದು ಕೇಳಿಕೊಳ್ಳುತ್ತೇನೆ. ಈ ರೀತಿ ಆಗಿರುವ ಗೊಂದಲಕ್ಕೆ ಇಲಾಖೆ ಮಾಡಿರುವ ಟರ್ನ್ ಕೀ ಆಧಾರದ ಮೇಲೆ ಕರೆದಿರುವ ಟೆಂಡರ್‌ಗಳೇ ಕಾರಣ. ಈ ಟೆಂಡರ್‌ನಲ್ಲಿ ಏನಾಗಿದೆ ಎಂದರೆ ಗುತ್ತಿಗೆ ಪಡೆಯುವ ಗುತ್ತಿಗೆದಾರ ಆತ ಬೋರ್‌ವೆಲ್ ಕೊರೆಯಬೇಕು, ಮೋಟಾರ್ ಪಂಪನ್ನು ಅಳವಡಿಸಬೇಕು, ವಿದ್ಯುದೀಕರಣ ಮಾಡಿ ನೀರೆತ್ತುವುದಕ್ಕೆ panel board ಹಾಕಿ;

**ಸಭಾಪತಿಯವರು:-** ಮಾನ್ಯ ತಿಪ್ಪೇಸ್ವಾಮಿಯವರೇ, ಮಾನ್ಯ ಸಚಿವರು ಉತ್ತರ ಕೊಡಲಿ ನೀವು ಪ್ರಶ್ನೆ ಕೇಳಿ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಕಾರಣವೇನೆಂದು ಹೇಳುತ್ತಿದ್ದೇನೆ. ಏಕೆಂದರೆ ಪ್ರತಿಯೊಂದು ಕೆ.ಡಿ.ಪಿ. ಮೀಟಿಂಗ್‌ನಲ್ಲಿಯೂ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ರಿವ್ಯೂ ಮಾಡುತ್ತಾರೆ. ಆನಂತರ ಅವರಿಗೆ ಬೀಗದ ಕೈ ಕೊಡಬೇಕಾಗುತ್ತದೆ. ವಾಸ್ತವವಾಗಿ ಆ ರೀತಿ ಆಗುತ್ತಿಲ್ಲ. ಏನಾಗುತ್ತದೆ ಎಂದರೆ, ಬೋರ್‌ವೆಲ್ ಕೊರೆಯುತ್ತಾರೆ, ಪಂಪ್ ಅಳವಡಿಸುತ್ತಾರೆ.

ಆದರೆ ವಿದ್ಯುದೀಕರಣ ಮಾಡುವುದಕ್ಕೆ ಸಾಧ್ಯವಿಲ್ಲ. ವಿದ್ಯುದೀಕರಣಕ್ಕೆ ಫಲಾನುಭವಿಗಳು ಎಸ್ಕಾಂಗೆ ಅರ್ಜಿ ಹಾಕಬೇಕಾಗುತ್ತದೆ. ಫಾರಂ ಭರ್ತಿ ಮಾಡಬೇಕು ಹಾಗೂ ಹಣ ಕಟ್ಟಬೇಕು. ಅದು ಆಗುತ್ತಿಲ್ಲ. ಬೋರ್‌ವೆಲ್ ಕೊರೆದು ಸುಮಾರು 2-3 ವರ್ಷವಾದರೂ ವಿದ್ಯುದೀಕರಣವಾಗುವುದಿಲ್ಲ. ಅಷ್ಟರೊಳಗೆ silt up ಆಗುತ್ತದೆ. ಇದನ್ನು ಬಗೆಹರಿಸುವುದಕ್ಕೋಸ್ಕರವಾಗಿ ಎಸ್ಕಾಂನಲ್ಲಿ ಸಾಕಷ್ಟು ಅರ್ಜಿಗಳು ಪೆಂಡಿಂಗ್ ಇವೆ. ಫಲಾನುಭವಿಗಳಿಗೆ ಯಾವ ರೀತಿಯಲ್ಲಿಯೂ ಅನುಕೂಲವಾಗುತ್ತಿಲ್ಲ. ಇದನ್ನು ಬಗೆಹರಿಸುವುದಕ್ಕೆ ತಾವು ಯಾವ ರೀತಿಯ ಕ್ರಮ ಜರುಗಿಸಿದ್ದೀರಿ ಎಂಬುದನ್ನು ಸಚಿವರು ಹೇಳಲಿ ನಂತರ ಉಪ ಪ್ರಶ್ನೆ ಕೇಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ತಿಪ್ಪೇಸ್ವಾಮಿಯವರು ತಮ್ಮ ಅನುಭವದ ಆಧಾರದ ಮೇಲೆ ಸಾಕಷ್ಟು ಪ್ರಶ್ನೆಗಳನ್ನು ಕೇಳಿದ್ದಾರೆ. ಎಲ್ಲದಕ್ಕೂ ಇಲಾಖೆ ವತಿಯಿಂದ ಉತ್ತರ ಕೊಟ್ಟಿದ್ದೇವೆ. ಅವರು ಹೇಳಿರುವ ವಿಚಾರಗಳೇನೆಂದರೆ, 2019-20 ಮತ್ತು 2020-21ರಲ್ಲಿ ಟರ್ನ್ ಕೀ ಸಿಸ್ಟಂ ಎಂದು ಇಲಾಖೆ ಜಾರಿಗೆ ತಂದಿತು. ಅದರಲ್ಲಿ 13,742 ಕೊಳವೆಬಾವಿಗಳನ್ನು ತೆರೆಯಬೇಕಾಗಿತ್ತು. ಮೊದಲು ಏನಾಗಿತ್ತು ಎಂದರೆ ಬೋರ್‌ವೆಲ್ ಕೊರೆಯುವುದಕ್ಕೆ ಬೇರೆ ಒಂದು ಟೆಂಡರ್ ಇತ್ತು ಮತ್ತು ಮೋಟರ್‌ಗೆ ಬೇರೆ ಟೆಂಡರ್ ಹಾಗೂ ವಿದ್ಯುತ್ ಸಂಪರ್ಕಕ್ಕೆ ಬೇರೆ ಟೆಂಡರ್ ಇತ್ತು. ಈ ಟರ್ನ್ ಕೀ ಸಿಸ್ಟಂ ಮಾಡಿ ಯಾರು ಬೋರ್‌ವೆಲ್ ಕೊರೆದಿದ್ದಾರೋ ಅವರೇ ಮೋಟರನ್ನು ಫಿಕ್ಸ್ ಮಾಡಬೇಕು, ಅವರೇ ವಿದ್ಯುತ್ ಸಂಪರ್ಕ ಕೊಟ್ಟು ಏಕ ಕಿಂಡಿ ವ್ಯವಸ್ಥೆಯಡಿ ಇದನ್ನು ಮಾಡಬೇಕೆಂಬ ಯೋಚನೆಯಡಿ ಇದನ್ನು ತರಲಾಗಿತ್ತು. ಈ ಟರ್ನ್ ಕೀ ಸಿಸ್ಟಂ ಅಡಿಯಲ್ಲಿ 30 ಪ್ಯಾಕೇಜುಗಳಲ್ಲಿ ಟೆಂಡರನ್ನು ಕರೆಯಲಾಗಿತ್ತು. ಅದರಲ್ಲಿ 42 ಗುತ್ತಿಗೆದಾರರು ಭಾಗವಹಿಸಿದ್ದರು. 22 ಗುತ್ತಿಗೆದಾರರು ಟರ್ನ್ ಕೀ ಯಲ್ಲಿ ಗುತ್ತಿಗೆ ತೆಗೆದುಕೊಂಡಿದ್ದರು. ಈ ಮಧ್ಯೆ ಟರ್ನ್ ಕೀ ಸಿಸ್ಟಂ ಸರಿಯಿಲ್ಲವೆಂದು ಒಂದಷ್ಟು ಜನ ಗುತ್ತಿಗೆದಾರರು ಹೈಕೋರ್ಟ್‌ಗೆ ಹೋಗಿದ್ದರು. ನಮ್ಮ ಇಲಾಖೆ ವಕಾಲತ್ತು ಹಾಕಿದ ನಂತರ ಆ ಪ್ರಕರಣ ನಮಗೆ ಕ್ಲಿಯರ್ ಆಗುತ್ತದೆ. ಟರ್ನ್ ಕೀ ಸಿಸ್ಟಂ ಮಾಡುವುದಕ್ಕೆ ಅವಕಾಶಗಳಾಗುತ್ತದೆ. ಅದರ ಹಿನ್ನೆಲೆಯಲ್ಲಿ ನಾವು ಟೆಂಡರ್ ಕರೆದು ಟರ್ನ್ ಕೀ ಸಿಸ್ಟಂ ಮಾಡಿ 13,742 ಕೊಳವೆ ಬಾವಿಗಳನ್ನು ಕೊರೆಯುವುದಕ್ಕೆ

ಅಧಿಕೃತವಾಗಿ ಆದೇಶ ಕೊಡಲಾಯಿತು. ಈ ಮಧ್ಯೆ ಇದು ಕೆಳಮನೆಯಲ್ಲಿ ಚರ್ಚೆಯಾಗಿ ಅಲ್ಲಿನ ಗೌರವಾನ್ವಿತ ಸದಸ್ಯರಾದ ಪ್ರಿಯಾಂಕ್ ಖರ್ಗೆಯವರು ಇದರಲ್ಲಿ ಲೋಪವಾಗಿದೆ ಅದನ್ನು ಪುನರ್ ತನಿಖೆ ಮಾಡಬೇಕು ಎಂದು ಹೇಳಿದರು. ಆ ತನಿಖೆಯ ಆಧಾರದಲ್ಲಿ ನಮ್ಮ ಇಲಾಖೆಯ ಕಾರ್ಯದರ್ಶಿಯವರು ಗ್ರಾಮೀಣಾಭಿವೃದ್ಧಿ ಇಲಾಖೆಯ ಸಹಯೋಗದಲ್ಲಿ ತನಿಖೆ ಮಾಡಿ ಒಂದಷ್ಟು ಲೋಪದೋಷಗಳನ್ನು ಸರಿಪಡಿಸಿ 16 ಟೆಂಡರ್‌ಗಳಿಗೆ ಅವಕಾಶಗಳನ್ನು ಮಾಡಿಕೊಟ್ಟು ಉಳಿದ ಸುಮಾರು 14 ಪ್ಯಾಕೇಜ್‌ಗಳನ್ನು D.B.T. (Direct Benefit Transfer) ಮೂಲಕ ನೇರವಾಗಿ ಹಣ ಪಾವತಿ ಮಾಡುವುದಕ್ಕೆ ಬೇಕಾದ ಅವಕಾಶಗಳನ್ನು ಮಾಡಿಕೊಡಲಾಯಿತು. ನೇರವಾಗಿ ಖಾತೆಗೆ ಜಮಾ ಮಾಡುವಂತಹ ಡಿ.ಬಿ.ಟಿ ಯೋಜನೆ 2021-22ನೇ ಸಾಲಿನಲ್ಲಿ ಸುಮಾರು 17,920 ಅಂದರೆ 2021-22 ಮತ್ತು 2022-23ನೇ ಸಾಲಿನಲ್ಲಿ ಯಾವ ಟೆಂಡರ್ ಪ್ರಕ್ರಿಯೆಗಳಲ್ಲಿ ನೇರವಾಗಿ ಡಿ.ಬಿ.ಟಿ ಮೂಲಕ ರೈತರ ಖಾತೆಗೆ ಹಣ ಹಾಕುವಂತಹ ಪ್ರಕ್ರಿಯೆಗಳನ್ನು ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದಾರೆ. 2021-22 ಮತ್ತು 2022-23ನೇ ಸಾಲಿನಲ್ಲಿ 17,920 ಕೊಳವೆಬಾವಿಗಳನ್ನು ಈ ಮೂಲಕ ಕೊರೆಯುವುದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ. ಯಾವ ಸಂಸ್ಥೆಯಿಂದ ಅವರು ಕೊಳವೆಬಾವಿಗಳನ್ನು ತೆರೆದ ತಕ್ಷಣ third party inspection ಮಾಡುತ್ತದೆ ನಂತರ ಅವರ ಖಾತೆಗೆ ನೇರವಾಗಿ ಹಣವನ್ನು ಜಮಾ ಮಾಡುವ ಕೆಲಸ ಮಾಡುತ್ತಿರುವುದರಿಂದ ಟೆಂಡರ್ ಪ್ರಕ್ರಿಯೆ ಎನ್ನುವ ಶಬ್ಧ 2021-22 ಮತ್ತು 2022-23ಕ್ಕೆ ಮುಗಿದಿದೆ. ತಾವು ಕೇಳುತ್ತಿರುವುದು 2019-20ನೇ ಸಾಲಿನಲ್ಲಿ ಈ ಎಲ್ಲಾ ಪ್ರಕ್ರಿಯೆಗಳನ್ನು ಮಾಡಿದ ನಂತರ ಈಗ 16 ಪ್ಯಾಕೇಜುಗಳಲ್ಲಿ ಕೆಲಸವನ್ನು ಮುಂದುವರೆಸುತ್ತಿದ್ದೇವೆಂದು ಹೇಳಿದೆವು. ಅದರಲ್ಲಿ 9,555 ಕೊಳವೆಬಾವಿಗಳನ್ನು ಕೊರೆಯಬೇಕಾಗಿದೆ. ಈಗಾಗಲೇ 4438 ಕೊಳವೆ ಬಾವಿಗಳನ್ನು ತೆರೆದಿದ್ದಾರೆ. ಅಂದರೆ, ಎರಡೂವರೆ ತಿಂಗಳಿನಿಂದೀಚೆಗೆ ಶೇ.40ರಷ್ಟು ಕೆಲಸ ಮಾಡಿದ್ದಾರೆ. ಪಂಪ್ ಹಾಕಿದ್ದು ಸುಮಾರು 719 ಕೊಳವೆಬಾವಿಗಳಿಗೆ ಅಂದರೆ ಶೇ.7ರಷ್ಟು ಪಂಪ್ ಹಾಕಿದ್ದಾರೆ. ಮತ್ತು 372 ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಕೊಟ್ಟಿದ್ದು ಅಂದರೆ ಶೇ.3½ ರಷ್ಟು ಕೊಟ್ಟಿದ್ದಾರೆ. ಈ ಎಲ್ಲಾ ಪ್ರಕ್ರಿಯೆಗಳು ಅತ್ಯಂತ ಪಾರದರ್ಶಕವಾಗಿ ನಡೆಯುತ್ತಿವೆ. ಎಲ್ಲೆಲ್ಲಿ ತಪ್ಪು ಮಾಡಿದ್ದಾರೆ ಅವರಿಗೆಲ್ಲಾ ಶಿಕ್ಷೆ

ಕೊಡುವ ಕೆಲಸ ಮಾಡಿದ್ದೇವೆ. ನಾನು ತಮ್ಮ ಮೂಲಕ ಮಾನ್ಯ ತಿಪ್ಪೇಸ್ವಾಮಿಯವರಿಗೆ ತಿಳಿಸುವುದೇನೆಂದರೆ, ಇದನ್ನು ಮಾರ್ಚ್ ತಿಂಗಳನೊಳಗೆ ಮುಗಿಸುವುದಕ್ಕೆ ಬೇಕಾದ ಎಲ್ಲಾ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಕೇಳುವುದೇನೆಂದರೆ, ಹೈಕೋರ್ಟ್ ಆದೇಶವು 2-3 ನಿಗಮಗಳಿಗನ್ವಯವಾಗುತ್ತದೆಯೇ ಅಥವಾ ಪೂರ್ತಿ 11 ನಿಗಮಗಳಿಗೆ ಅನ್ವಯವಾಗುತ್ತದೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಟರ್ನ್ ಕೀಯಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಎಲ್ಲಾ ನಿಗಮಗಳಿಗೂ ಅನ್ವಯಿಸುತ್ತದೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** 11 ನಿಗಮಗಳಿಗೂ ಕ್ಲಿಯರ್ ಮಾಡುತ್ತೀರಾ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸಮಾಜ ಕಲ್ಯಾಣ ಇಲಾಖೆಯಲ್ಲಿರುವ ಎಲ್ಲಾ 11 ನಿಗಮಗಳಲ್ಲಿ 13,742 ಕೊಳವೆಬಾವಿಗಳನ್ನು ಕೊರೆಯುವುದಕ್ಕೆ ಮಾಡಿರುವ ಟರ್ನ್ ಕೀ ಟೆಂಡರ್ ಪ್ರಕ್ರಿಯೆಗಳಿಗೆ ಹೈಕೋರ್ಟ್‌ನ ಕಾರ್ಯಕ್ರಮಗಳು ಅನ್ವಯವಾಗುತ್ತವೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದನ್ನು ಗಂಗಾ ಕಲ್ಯಾಣ ಯೋಜನೆಯವರೇ ಡಿ.ಬಿ.ಟಿ. ಯಲ್ಲಿ ಕುಳಿತುಕೊಂಡು ಮಾಡಬೇಕೋ ಅಥವಾ. . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನೇರವಾಗಿ ಮಾಡುವ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುತ್ತಿದ್ದೇವೆ. ಹಿಂದೆ 2019-20ನೇ ಸಾಲಿನಲ್ಲಿ ಟರ್ನ್ ಕೀ ಸಿಸ್ಟಂ ಎಂದು ಏನಿದೆ ಅದಕ್ಕೆ ಸೀಮಿತವಾಗಿ ಮಾತ್ರ ಟೆಂಡರ್ ಮೂಲಕ ಕಾರ್ಯಕ್ರಮವನ್ನು ಮಾಡಲಾಗುತ್ತದೆ. ಅದರ ಮಧ್ಯದಲ್ಲಿಯೂ ಕೂಡ 14 ಪ್ಯಾಕೇಜ್‌ಗಳನ್ನು ಡಿ.ಬಿ.ಟಿ., ಗೆ ತಂದಿದ್ದೇವೆ. ಎಲ್ಲಾ ಮಾಹಿತಿಗಳನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇವೆ.

**ಚುಕ್ಕೆ ಪ್ರಶ್ನೆ ಸಂಖ್ಯೆ: 571**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಅ. ದೇವೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತುಂಬಾ ವಿವರವಾದ ಉತ್ತರಗಳನ್ನು ಕೊಟ್ಟಿದ್ದಾರೆ ಅವರಿಗೆ ಧನ್ಯವಾದಗಳು. ಜೊತೆಗೆ ಅವರು ಸಚಿವರಾದ ಮೇಲೆ ಸಭೆಯನ್ನು ನಡೆಸಿ Task Force ಮುಖಾಂತರ ಅವರನ್ನೆಲ್ಲಾ ಅರೆಸ್ಟ್ ಮಾಡುವ ಕೆಲಸ ಮಾಡಿದ್ದಾರೆ. ಜೊತೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಿದ್ದಾರೆ. ಇತ್ತೀಚೆಗೆ ಮಂಗಳಮುಖಿ ಕಾರ್ಯಕರ್ತರು ಸಭೆ, ಸಮಾರಂಭಗಳಲ್ಲಿ, ಮದುವೆ, ನಾಮಕರಣ, ಗೃಹ ಪ್ರವೇಶಗಳಲ್ಲಿ ತುಂಬಾ ಮುಜುಗರ ಉಂಟು ಮಾಡುವುದನ್ನು ತಾವು ನೋಡುತ್ತಿದ್ದೀರಿ.

(ಮುಂದು)

(880) 16-09-2022 KH-AK 12-00 (ಸಭಾಪತಿಯವರ ಉಪಸ್ಥಿತಿ)

**ಶ್ರೀ ಅ.ದೇವೇಗೌಡ (ಮುಂದು):-**

ವಯಸ್ಸಾದ ಮಕ್ಕಳು, ಹೆಂಗಸರು ಸಿಗ್ನಲ್‌ಗಳಲ್ಲಿ ಮತ್ತು ಮುಖ್ಯವಾದ ಸ್ಥಳಗಳಲ್ಲಿ ಮುಜುಗರ ಉಂಟು ಮಾಡುವುದನ್ನು ತಾವು ನೋಡುತ್ತಿರುತ್ತೀರಿ. ಇದರ ಬಗ್ಗೆ ತಾವು ಏನು ಕ್ರಮ ಕೈಗೊಂಡಿದ್ದೀರಿ? ಹಾಗೆಯೇ ಇವರು ಕೊಟ್ಟಿರುವ ಉತ್ತರದಲ್ಲಿ "16 ವರ್ಷ ಮೇಲ್ಪಟ್ಟ ಪುರುಷರು ಹಾಗೂ 18 ವರ್ಷ ಮೇಲ್ಪಟ್ಟ ಮಹಿಳೆಯರು ಭಿಕ್ಷಾಟನೆಯಲ್ಲಿ ತೊಡಗಿದ್ದಲ್ಲಿ ಅಂತಹ ಭಿಕ್ಷುಕರನ್ನು ಬಂಧಿಸಲಾಗುವುದು" ಎಂದು ಹೇಳಿದ್ದಾರೆ. ಹಾಗೆಯೇ ಅದೇ ಉತ್ತರದಲ್ಲಿ "16 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಗಂಡು ಮಕ್ಕಳನ್ನು ಹಾಗೂ 18 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಹೆಣ್ಣು ಮಕ್ಕಳನ್ನು ಬಂಧಿಸಲು ಅವಕಾಶ ಇಲ್ಲ" ಎಂದು ಹೇಳಿದ್ದಾರೆ. ಇವರುಗಳೇ ಹೆಚ್ಚಾಗಿ ಸಿಗ್ನಲ್‌ಗಳಲ್ಲಿ ತೊಂದರೆ ಕೊಡುತ್ತಿರುತ್ತಾರೆ. ಭಿಕ್ಷೆಯನ್ನು ಕೊಡದೇ ಇದ್ದರೂ ಸಹ ಬೈಯ್ದು ಮುಜುಗರವನ್ನುಂಟು ಮಾಡುತ್ತಿರುತ್ತಾರೆ. ಇದಕ್ಕೆ ಏನಾದರೂ ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಅ.ದೇವೇಗೌಡರವರು ಕೇಳದಂತಹ ಪ್ರಶ್ನೆಯ ಬಗ್ಗೆ ಈ ಹಿಂದೆ ಸದನದಲ್ಲಿ ಚರ್ಚೆಯಾಗಿತ್ತು. ಮಾನ್ಯ ಸದಸ್ಯರಾದ ಎಸ್.ಆರ್.ಪಾಟೀಲ್ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರಾದ ಬಿ.ಕೆ.ಹರಿಪ್ರಸಾದ್‌ರವರು ಇದಕ್ಕೆ ವಿಶೇಷವಾದ ಸಭೆ ಕರೆಯಬೇಕು. ಭಿಕ್ಷುಕರ ಹಾವಳಿ ಜಾಸ್ತಿಯಾಗಿದೆ ಎನ್ನುವಂತಹ ವಾದವನ್ನು ಮುಂದಿಟ್ಟಿದ್ದರು. ಆ ಹಿನ್ನೆಲೆಯಲ್ಲಿ ನಾನು 3 ಬಾರಿ ಸಭೆಗಳನ್ನು ಕರೆದೆ. ಎರಡು ಬಾರಿ ಅಧಿಕಾರಿಗಳ ಮಟ್ಟದಲ್ಲಿ ಸಭೆಯನ್ನು ಕರೆದೆ. ಮೂರನೆಯ ಬಾರಿ ತಾಂತ್ರಿಕವಾಗಿ ತೊಂದರೆಯಾಯಿತು. ಕಾರ್ಮಿಕ ಇಲಾಖೆಯ ಒಂದಿಷ್ಟು ಅಧಿಕಾರಿಗಳು ತಮ್ಮ ಇತಿ-ಮಿತಿಗಳನ್ನು ಹೇಳಿದರು. ಮಹಿಳಾ ಕಲ್ಯಾಣ ಇಲಾಖೆಯ ಒಂದಿಷ್ಟು ಅಧಿಕಾರಿಗಳು ತಮ್ಮ ಇತಿ-ಮಿತಿಗಳನ್ನು ಹೇಳಿದರು. ಆ ಹಿನ್ನೆಲೆಯಲ್ಲಿ ಕಾರ್ಮಿಕ ಇಲಾಖೆಯ ಮಂತ್ರಿಗಳನ್ನು ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಂತ್ರಿಗಳನ್ನು ಹಾಗೂ ಮಾನ್ಯ ಗೃಹ ಮಂತ್ರಿಗಳನ್ನು ಹಾಗೆಯೇ ನನ್ನನ್ನು ಸೇರಿ 4 ಜನ ಮಂತ್ರಿಗಳು ಸಭೆ ಸೇರಿದಾಗ ಒಂದು ಅಂತಿಮ ಸ್ವರೂಪ ಬಂದಿತು. ಭಿಕ್ಷುಕರಲ್ಲಿ ನಾವು ಒಂದು ಮಾತನ್ನು ಒಪ್ಪಿಕೊಳ್ಳಲೇಬೇಕು. ಇಡೀ ಕರ್ನಾಟಕ ರಾಜ್ಯದಲ್ಲಿ ಯಾವುದೇ ಹಂತದಲ್ಲಿ ಭಿಕ್ಷಾಟನೆಯನ್ನು ನಿಯಂತ್ರಣಕ್ಕೆ ತರುವಂತಹ ಅನಿವಾರ್ಯತೆ ಇದೆ. ಇದರಲ್ಲಿ 2-3 ರೀತಿಯ ಭಿಕ್ಷುಕರು ಮೇಲ್ನೋಟಕ್ಕೆ ಕಂಡು ಬರುತ್ತಾರೆ. ಕೆಲವು ಕಡೆ ಸಿಗ್ನಲ್‌ಗಳಲ್ಲಿ ಮಗುವನ್ನು ಬೆನ್ನಿಗೆ ಕಟ್ಟಿಕೊಂಡು ಭಿಕ್ಷೆಯನ್ನು ಬೇಡುವವರು ಇದ್ದಾರೆ. ಇದರಲ್ಲಿ ಆಶ್ಚರ್ಯವೇನೆಂದರೆ, ಅವರು ಅವರ ಮಕ್ಕಳೇ ಅಲ್ಲ. ಯಾವುದೋ ಮಕ್ಕಳನ್ನು ಬಾಡಿಗೆಗೆ ತೆಗೆದುಕೊಂಡು ಮತ್ತು ಬರಿಸುವಂತಹ ಕೆಲವು ಔಷಧಿಗಳನ್ನು ಅವರಿಗೆ ಹಾಕಿ, ಆ ಮಗುವನ್ನು ಇಟ್ಟುಕೊಂಡು ಭಿಕ್ಷಾಟನೆ ಮಾಡಿ, ಆ ಮಗುವನ್ನು ವಾಪಸ್ಸು ಕೊಡುವಂತಹ ಕ್ರೂರವಾದ ಪರಿಸ್ಥಿತಿ ಇದೆ. ಅದಕ್ಕೋಸ್ಕರ ಪ್ರಥಮವಾಗಿ ಯಾರು ಮಗುವನ್ನು ಎತ್ತಿಕೊಂಡು ಈ ಸಿಗ್ನಲ್‌ಗಳಲ್ಲಿ ಭಿಕ್ಷೆ ಬೇಡುತ್ತಾರೋ, ಅವರನ್ನು ರಕ್ಷಣೆ ಮಾಡುವಂತಹ ಕೆಲಸವನ್ನು ಮಾಡುತ್ತೇವೆ. ಬಂಧನ ಎಂದರೆ ಸರಿಯಾಗುತ್ತದೋ, ಇಲ್ಲವೋ, ರಕ್ಷಣೆ ಮಾಡುವಂತಹ ಕೆಲಸವನ್ನು ಮಾಡುತ್ತೇವೆ. ಕಾನೂನು ಇತಿ-ಮಿತಿಗಳಲ್ಲಿ ತೊಡಗುಗಳು ಇತ್ತು. 3 ಜನ ಮಂತ್ರಿಗಳು ಬಂದು ನನಗೆ ಸಹಕಾರ ಕೊಟ್ಟು, ಅವರವರ ಸಿಬ್ಬಂದಿಗಳಿಗೆ ನಿರ್ದೇಶನ ಕೊಟ್ಟಿದ್ದರು. ತಾಯಿ ಮತ್ತು ಮಗುವಿನ ಹೆಸರಿನಲ್ಲಿ ಭಿಕ್ಷೆ

ಬೇಡುವವರನ್ನು ಒಂದು ರೀತಿಯಲ್ಲಿ ನಿಯಂತ್ರಣಕ್ಕೆ ತರಬೇಕೆಂದು ಹೇಳಿದರು. ಮೇಲ್ನೋಟಕ್ಕೆ ಬೆಂಗಳೂರು ನಗರದ ಬಿ.ಬಿ.ಎಂ.ಪಿ., ವ್ಯಾಪ್ತಿಯಲ್ಲಿ ತಾಯಿ ಮತ್ತು ಮಗು ಎಂದರೆ ಬೆನ್ನಿಗೆ ಮಕ್ಕಳನ್ನು ಕಟ್ಟಿಕೊಂಡು ಭಿಕ್ಷೆ ಬೇಡುವಂತಹವರ ಸಂಖ್ಯೆ ಸರಿಸುಮಾರು 600 ಇತ್ತು. ಈಗ ಪ್ರಥಮ ಹಂತದ ಕಾರ್ಯಕ್ರಮದಲ್ಲಿ ನಾವು ಅದನ್ನೇ ತೆಗೆದುಕೊಂಡಂತಹ ಹಿನ್ನೆಲೆಯಲ್ಲಿ ಶೇಕಡಾ 90 ರಷ್ಟು ನಿಯಂತ್ರಣಕ್ಕೆ ಬಂದಿದೆ ಎಂದು ನನಗನಿಸುತ್ತದೆ. ಇನ್ನು ಇರುವಂತಹ ತೃತೀಯ ಲಿಂಗಿಗಳು ಏನೇನು ಭಿಕ್ಷಾಟನೆಯಲ್ಲಿ ತೊಡಗಿಕೊಂಡು ಸಣ್ಣ-ಪುಟ್ಟ ಅನಾಹುತಗಳನ್ನು ಮಾಡುತ್ತಿರುವುದನ್ನು ಗಮನಿಸಲಾಗಿದೆ. ಒಂದಷ್ಟು ಜನ ಮಾನಸಿಕ ಅಸ್ವಸ್ಥರಾದವರು ಬೀದಿ ಬೀದಿಯಲ್ಲಿ ತಿರುಗುವಂತಹ ಪರಿಪಾಠಗಳು ಇವೆ. ಮತ್ತೆ ಕೆಲವು ವೃದ್ಧರು, ತಂದೆ-ತಾಯಿಗಳು, ಕೌಟುಂಬಿಕ ಸಮಸ್ಯೆಗಳಲ್ಲಿ ಸಿಕ್ಕಿಕೊಂಡಿರುವವರು ಸೇರಿದಂತೆ ಭಿಕ್ಷೆ ಬೇಡುವಂತಹ ಪರಿಪಾಠದಲ್ಲಿ ಇದ್ದಾರೆ. ಇವೆಲ್ಲವನ್ನೂ ನಿಯಂತ್ರಣಕ್ಕೆ ತರಬೇಕೆಂದು ಯೋಚನೆ ಮಾಡಿದ್ದೇವೆ. ನಮ್ಮ ಬಿ.ಬಿ.ಎಂ.ಪಿ., ವ್ಯಾಪ್ತಿಯಲ್ಲಿ ಡಿಸಿಪಿ., ಯವರ ನೇತೃತ್ವದಲ್ಲಿ 8 Task Force ಗಳನ್ನು ರಚನೆ ಮಾಡಿದ್ದೇವೆ. ಇವರೆಲ್ಲರೂ ಅವರವರ ವಿಭಾಗದಲ್ಲಿ ಕೆಲಸ ಮಾಡಿ ನಿಯಂತ್ರಣ ತರುವುದಕ್ಕೆ ಯೋಜನೆ ಮತ್ತು ಯೋಚನೆಯನ್ನು ಮಾಡುತ್ತಾರೆ. ಕೆಲವು ಸಂದರ್ಭಗಳಲ್ಲಿ ನಮ್ಮ ಕಾಯ್ದೆ ಪ್ರಕಾರ 16 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಕೆಲವರನ್ನು ಬಂಧಿಸುವುದಕ್ಕೆ ಕಾನೂನಿನ ಇತಿ-ಮಿತಿಗಳು ಇವೆ. ಅದಕ್ಕೋಸ್ಕರ ಕಾನೂನು ಮಂತ್ರಿಗಳ ಜೊತೆ ಮಾತನಾಡಿ ಅವರನ್ನು ರಕ್ಷಣೆ ಮಾಡುವುದು ಹೇಗೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಕೂಡ ಮಾಡುತ್ತಿದ್ದೇವೆ. ಒಟ್ಟಾರೆಯಾಗಿ ನಮ್ಮ ಮುಂದಿನ ಗುರಿ ಇರುವುದೇನೆಂದರೆ, ಇನ್ನು 2-3 ತಿಂಗಳಿನಲ್ಲಿ ಇಡೀ ಬಿ.ಬಿ.ಎಂ.ಪಿ., ವ್ಯಾಪ್ತಿಯಲ್ಲಿರುವ ಭಿಕ್ಷಾಟನೆಯನ್ನು ನಿಯಂತ್ರಣಕ್ಕೆ ತರಬೇಕೆನ್ನುವ ನಿಲುವು ಇದೆ. ಅದಕ್ಕೆ ಬೇಕಾದ ಎಲ್ಲಾ ಕಾರ್ಯಕ್ರಮಗಳನ್ನು ಜೋಡಿಸಿಕೊಳ್ಳುತ್ತೇವೆ. ಅಗತ್ಯ ಇದ್ದರೆ, ಮಾನ್ಯ ಶಾಸಕರಿಗೆ ಆಸಕ್ತಿ ಇದ್ದರೆ ಮುಂದಿನ ಸಭೆಯನ್ನು ಕರೆಯುವಾಗ ಮಾನ್ಯ ಶಾಸಕರನ್ನು ಕರೆಯುತ್ತೇವೆ.

**ಪ್ರಶ್ನೆ ಸಂಖ್ಯೆ: 501**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. It's not a completely satisfactory answer ಎನ್ನುವಂತಹದ್ದು ನನ್ನ ಭಾವನೆ. ಕಾರಣವೇನೆಂದರೆ, 1972 ರಿಂದ 2012 ರವರೆಗೆ ಪ್ರವರ್ಗ-1 ರಲ್ಲಿ ಬರುವಂತಹ ವಿದ್ಯಾರ್ಥಿಗಳಿಗೆ ಸಂಪೂರ್ಣವಾಗಿ ಶುಲ್ಕ ವಿನಾಯಿತಿಯನ್ನು ಕೊಟ್ಟಿರುವಂತಹದ್ದು ನಮ್ಮ ಸಮಾಜಕ್ಕೂ ಗೊತ್ತಿರುವಂತಹ ವಿಚಾರ ಮತ್ತು ಸರ್ಕಾರಕ್ಕೂ ಗೊತ್ತಿರುವಂತಹ ವಿಚಾರ. 2012ರ ನಂತರ ಅವರು ಒಂದು ಆದಾಯ ಮಿತಿಯನ್ನು ಹಾಕಿ ಶುಲ್ಕ ವಿನಾಯಿತಿಯನ್ನು ರದ್ದುಗೊಳಿಸಿರುತ್ತಾರೆ. ಇದು ಏಕೆ? ಇದನ್ನು ಮರು ಸ್ಥಾಪನೆಗೊಳಿಸುವುದಕ್ಕೆ ಸಾಧ್ಯವಾಗುತ್ತದೆಯೇ? ಇದಕ್ಕೆ ಕಾರಣವೇನೆಂದರೆ, ಕರ್ನಾಟಕ ರಾಜ್ಯದಲ್ಲಿ ಆರೂವರೆ ಕೋಟಿ ಕನ್ನಡಿಗರು ಇರುವಂತಹ ಜಾಗದಲ್ಲಿ ಪ್ರವರ್ಗ-1 ಕ್ಕೆ ಒಂದು ಕೋಟಿ ಜನರು ಬರುತ್ತಾರೆ. ಅವರು ಶೈಕ್ಷಣಿಕವಾಗಿ ಬಹಳ ಹಿಂದುಳಿದಿರುವಂತಹ ಜನ, ಹಲವಾರು ಸಮುದಾಯದಲ್ಲಿ ಬರುವಂತಹ ಗಂಗಮತಸ್ಥರು ಇರಬಹುದು, ಗೊಲ್ಲರು ಇರಬಹುದು, ಉಪ್ಪಾರರು ಇರಬಹುದು, ಬೆಸ್ತರು ಇರಬಹುದು, ಜೋಗಿ ಇರಬಹುದು, ದೊಂಬಿದಾಸರು ಇರಬಹುದು, ಇನ್ನು ಹಲವಾರು ಸಮುದಾಯಗಳಲ್ಲಿ ಸುಮಾರು 95 ಜಾತಿಗಳು, 376 ಉಪ ಜಾತಿಗಳು ಬರುವಂತಹ ವಿದ್ಯಾರ್ಥಿಗಳಿಗೆ ಇದರಿಂದ ಅನ್ಯಾಯವಾಗಿದೆ. ಅವರು ಕೊಟ್ಟಿರುವಂತಹ ಲಿಖಿತ ಉತ್ತರದಲ್ಲಿ ರೂ.2.50 ಲಕ್ಷಗಳ ಆದಾಯ ಮಿತಿಯನ್ನು ನಿಗದಿಪಡಿಸಲಾಗಿದ್ದು, ಇದನ್ನು ತೆರವುಗೊಳಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವಂತಹ ಮನವಿಯನ್ನು ಮಾಡುತ್ತಿದ್ದೇನೆ. ಹಾಗೆಯೇ, ಸಾಮಾಜಿಕ ದೃಷ್ಟಿಕೋನದಿಂದ ಕೇಳುತ್ತಿದ್ದೇನೆ. ಏಕೆಂದರೆ ಈ ಕಾಲದಲ್ಲಿ ಮೀಸಲಾತಿಗೋಸ್ಕರ ಎಲ್ಲಾ ಸಮುದಾಯಗಳು ಹೋರಾಟ ಮಾಡುತ್ತಿರುವಂತಹ ಸಂದರ್ಭದಲ್ಲಿ ಮುಂದಿನ ಜನಾಂಗದವರಿಗೆ ಶಿಕ್ಷಣವನ್ನು ಕೊಡಬೇಕೆಂದು ಎಲ್ಲರ ಉದ್ದೇಶ ಇರುವುದರಿಂದ, 2012ರ ಮೊದಲು ಏನು ಆದಾಯ ಮಿತಿಯನ್ನು ಹಾಕಿದ್ದರೋ, creamy layer ತೆಗೆದುಹಾಕಿ, ಪ್ರವರ್ಗ-1 ರಲ್ಲಿ ಬರುವಂತಹ ಎಲ್ಲಾ

ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ಶುಲ್ಕದಿಂದ ವಿನಾಯಿತಿಯನ್ನು ಕೊಡುವಂತಹದ್ದನ್ನು ಮಾನ್ಯ ಸಚಿವರು ಮಾಡುತ್ತಾರೆಯೇ ಎಂದು ಕೇಳುತ್ತಿದ್ದೇನೆ. ಅದರ ಜೊತೆಗೆ, ವಿದೇಶದಲ್ಲಿ ಓದುತ್ತಿರುವಂತಹ ಮಕ್ಕಳಿಗೂ ಕೂಡ ಎಂದರೆ, "ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡುವ ಪ್ರತಿಭಾವಂತ ಪ್ರವರ್ಗ-1 ರ ವಿದ್ಯಾರ್ಥಿಗಳಿಗೆ ಅವರ ವಿದ್ಯಾಭ್ಯಾಸ ಅವಧಿಯಲ್ಲಿ ಆಗುವಂತಹ ಖರ್ಚು-ವೆಚ್ಚಗಳನ್ನು ಸರ್ಕಾರ ಭರಿಸುವುದೇ?" ಎನ್ನುವಂತಹ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಹಾಗಾಗಿ ಇವರು ಕೊಟ್ಟಿರುವಂತಹ ಉತ್ತರದಲ್ಲಿ ಮೆಟ್ರಿಕ್ ನಂತರದ ವಿಚಾರಗಳಿಗೆ ವಿದ್ಯಾರ್ಥಿ ವೇತನದ ಬಗ್ಗೆ ಹೇಳಿದ್ದಾರೆ. ನಾನು ಮೆಟ್ರಿಕ್ ಮೊದಲು ಇರುವಂತಹ ವಿದ್ಯಾರ್ಥಿಗಳಿಗೆ ಯಾವ ರೀತಿಯ ಸೌಲಭ್ಯಗಳನ್ನು ಕೊಡುತ್ತಿದ್ದಾರೆ, ಈ ರೀತಿಯ ತಾತ್ಸಾರ ಮನೋಭಾವ ಏಕೆ ಇರುವಂತಹದ್ದು, ಎಲ್ಲವೂ ಕೂಡ ವ್ಯವಸ್ಥೆ ಮಾಡಿರುವಂತಹದ್ದು, ಈ ದೇಶವನ್ನು ಬದಲಾವಣೆ ಮಾಡಬೇಕೆಂದರೆ, ಶಿಕ್ಷಣದಲ್ಲಿ ಬದಲಾವಣೆ ತರಬೇಕು. ಶಿಕ್ಷಣವನ್ನು ಶೇಕಡಾ 100 ರಷ್ಟು ಎಲ್ಲರಿಗೂ ಕೊಡಬೇಕೆಂಬ ಆಶಯದೊಂದಿಗೆ ಈ ಕಾರ್ಯಕ್ರಮವನ್ನು ತಂದಿದ್ದರು. ಏಕೆಂದರೆ, ಇವತ್ತು ನಾವು ಮಾನ್ಯ ದೇವರಾಜ ಅರಸುರವರ ಬಗ್ಗೆ ತಿಳಿದುಕೊಳ್ಳಬೇಕಾಗುತ್ತದೆ. ಅವರು ತಂದಂತಹ ಈ ವಿಚಾರಗಳನ್ನು ಮರುಸ್ಥಾಪನೆಗೊಳಿಸುವುದಕ್ಕೆ ಸರ್ಕಾರಕ್ಕೆ ಏಕೆ ಸಾಧ್ಯವಾಗುತ್ತಿಲ್ಲ? ಕೇಂದ್ರ ಸರ್ಕಾರದಿಂದ ಬರುತ್ತಿರುವಂತಹ ಅನುದಾನಗಳನ್ನು ಈ ಯೋಜನೆಗಳಿಗೆ ಏಕೆ ಉಪಯೋಗ ಮಾಡಿಕೊಳ್ಳುತ್ತಿಲ್ಲ ಎಂದು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, 1972 ರಿಂದ 2012 ರವರೆಗೆ 40 ವರ್ಷಗಳ ಅವಧಿಯಲ್ಲಿ ಪರಿಶಿಷ್ಟ ಜಾತಿಗೆ ಮೀಸಲಿರಿಸುವಂತಹ ಅವಕಾಶಗಳು ಪ್ರವರ್ಗ-1 ಕ್ಕೂ ಇತ್ತು. ಅದನ್ನು ನಿಲುಗಡೆ ಮಾಡಿ, ಅದನ್ನು ತಾವು ಎಸ್.ಸಿ., ಎಸ್.ಟಿ., ಜನಾಂಗಕ್ಕೆ ರೂ.2.50 ಲಕ್ಷಗಳ ಮಿತಿಗೆ ಇದೆ. ಅದೇ ಮಿತಿಗೆ ಏರಿಸಿ ಎಂದು ಹೇಳಿರುತ್ತಾರೆ. ಈಗಲೂ ಕೂಡ ಆದಾಯದ ಪರಿಮಿತಿ ಎಸ್.ಸಿ., ಎಸ್.ಟಿ., ವಿದ್ಯಾರ್ಥಿಗಳಿಗೆ ರೂ.2.50 ಲಕ್ಷಗಳು ಇದೆ. ನಮ್ಮಲ್ಲಿ ಕೂಡ ರೂ.2.50 ಲಕ್ಷಗಳು ಇದೆ. ಇದರಲ್ಲಿ ಸಮಸ್ಯೆಗಳು ಏನಾಗಿದೆ ಎಂದರೆ, ಆ ಮಿತಿಯನ್ನು ಸಡಿಲಗೊಳಿಸಿ "2013ನೇ ಸಾಲಿನಿಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಕಾರ್ಯಕ್ರಮದಡಿ ಮಾರ್ಗಸೂಚಿಗಳನ್ನು ಪರಿಷ್ಕರಣೆ ಮಾಡಿದ್ದರು". ಮೊದಲು ಏನಾಗಿತ್ತು

ಎಂದರೆ, 2012 ರವರೆಗೆ ಸಾಧಾರಣವಾಗಿ 45 ಸಾವಿರ ಕೋಟಿ ರೂಪಾಯಿಗಳ ಬೇಡಿಕೆ ಬರುತ್ತಿತ್ತು. ಈಗ ನಮಗೆ 560 ಕೋಟಿ ರೂಪಾಯಿಗಳ ಬೇಡಿಕೆ ಇದೆ. ಈಗ 400 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಶುಲ್ಕ ವಿನಾಯಿತಿಗೋಸ್ಕರ 2012 ರವರೆಗೆ 40 ರಿಂದ 50 ಕೋಟಿ ರೂಪಾಯಿಗಳಿಗೆ ಸೀಮಿತವಾಗಿದ್ದಂತಹ ಮೊತ್ತ ಈಗ ಜಾಸ್ತಿಯಾಗಿ ಸುಮಾರು 580 ಕೋಟಿ ರೂಪಾಯಿಗಳಿಗೆ ಬೇಡಿಕೆ ಬರುತ್ತಿದೆ. ಇದರಲ್ಲಿ 400 ಕೋಟಿ ರೂಪಾಯಿಗಳನ್ನು ಒದಗಿಸುತ್ತಿದ್ದಾರೆ. ಇದರ ಇತಿ–ಮಿತಿಗಳನ್ನು ಕೆಲವೊಂದು ನಿಯಮಗಳನ್ನು ಸಡಿಲ ಮಾಡಿ, ಎಲ್ಲಾ ಮಕ್ಕಳಿಗೂ ವಿಸ್ತರಿಸುವಂತಹ ಕಾರ್ಯಕ್ರಮದಡಿ ಇದನ್ನು ತೆಗೆದುಕೊಂಡು ಬಂದಿದ್ದೇವೆ. ಮಾನ್ಯ ಸದಸ್ಯರು ಹೇಳಿರುವುದೇನೆಂದರೆ, ವಿದೇಶಿ ವ್ಯಾಸಂಗಗಳು ಸೇರಿದಂತೆ ಹಿಂದುಳಿದ ವರ್ಗಗಳಲ್ಲಿ ಕೆಲವೊಂದು ಕಾರ್ಯಕ್ರಮಗಳನ್ನು ಮೊಟಕು ಮಾಡಿದ್ದೀರಿ. ಇದನ್ನು ಪುನರ್ ವಿಸ್ತರಿಸಬೇಕೆಂದು ಹೇಳುವುದು ನ್ಯಾಯ ಇದೆ. ಆ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ದೇವರಾಜು ಅರಸುರವರ ಜನ್ಮ ದಿನಾಚರಣೆಯ ದಿವಸ ನಾವು ಏನೇನು ಕರೋನಾ–19 ಕಾರಣಕ್ಕೋಸ್ಕರ ಕಡಿತಗೊಳಿಸಿದ್ದೇವೆ. ಆ ಎಲ್ಲಾ ಸ್ಕೀಮ್‌ಗಳನ್ನು ಪುನರ್ ಸ್ಥಾಪನೆ ಮಾಡುವುದಕ್ಕೆ ಬೇಕಾದಂತಹ ಆದೇಶಗಳನ್ನು ಕೊಟ್ಟಿದ್ದಾರೆ. ಅದಕ್ಕೂ ಮೀರಿ ಮಾನ್ಯ ಎಂ.ನಾಗರಾಜುರವರು ಕೊಟ್ಟಿರುವಂತಹ ಸಲಹೆಗಳನ್ನು ಪುನರ್ ಪರಿಶೀಲನೆ ಮಾಡುತ್ತೇವೆ. ಹಿಂದುಳಿದ ವರ್ಗಗಳಿಗೆ ಏನೇನು ಸಹಾಯ ಮಾಡಬೇಕೋ ಅದೆಲ್ಲವನ್ನೂ ಮಾಡುತ್ತೇವೆ. ಆ ರೀತಿ ಮಾಡುವಾಗ ಮಾನ್ಯ ಎಂ.ನಾಗರಾಜುರವರ ಸಲಹೆಗಳನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೇ, ಪ್ರವರ್ಗ–1 ಅನ್ನು ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ, ಪ್ರವರ್ಗ–3ಬಿ ಗೆ ಸೇರಿಸಿಕೊಂಡಿರುವುದರಿಂದ, ಅಲ್ಲಿ ಮೀಸಲಾತಿ ಕೊಡುತ್ತಿರುವುದರಿಂದ, ಪ್ರವರ್ಗ–1 ಕ್ಕೆ ಪ್ರತ್ಯೇಕವಾಗಿ ವ್ಯವಸ್ಥೆ ಮಾಡಬೇಕಾಗಿರುವುದು ಅನಿವಾರ್ಯ. ಏಕೆಂದರೆ, 46 ಜಾತಿಗಳು ಅಲೆಮಾರಿ ಮತ್ತು ಅರೆ ಅಲೆಮಾರಿ ಇರುವುದರಿಂದ, ಅವರ ಶೈಕ್ಷಣಿಕ ವಿಚಾರಗಳನ್ನು ನೋಡಿದಾಗ ಬಹಳ ದುಸ್ಥಿತಿಯಲ್ಲಿರುವಂತಹ ಕಾರಣಕ್ಕೋಸ್ಕರ ಪ್ರವರ್ಗ–1 ಕ್ಕೆ ವಿಶೇಷ ಕಾಳಜಿಯನ್ನು ಕೊಡಬೇಕೆನ್ನುವ ಮನವಿಯನ್ನು ಮಾಡುತ್ತಿದ್ದೇನೆ. ವಿಶೇಷವಾಗಿ ಹೇಳಬೇಕೆಂದರೆ, ಶಿಕ್ಷಣ ಮಾತ್ರವಲ್ಲ. ಗೊಲ್ಲರ ಹಟ್ಟಿಗಳಲ್ಲಿರುವಂತಹ ಪರಿಸ್ಥಿತಿಗಳನ್ನು ನೋಡಿದಾಗ ಅಲ್ಲಿ

ಖಂಡಿತವಾಗಿಯೂ ಸ್ಕೂಲ್ ವ್ಯವಸ್ಥೆ ಇಲ್ಲ. ಸ್ಕೂಲ್ ವ್ಯವಸ್ಥೆ ಇದ್ದರೆ ಟೀಚರ್‌ಗಳ ವ್ಯವಸ್ಥೆ ಇಲ್ಲ. ಟೀಚರ್‌ಗಳ ವ್ಯವಸ್ಥೆ ಇದ್ದರೆ ಮೂಲಭೂತ ಸೌಲಭ್ಯಗಳು ಇಲ್ಲ. ಆದ್ದರಿಂದ, ವಿಶೇಷವಾದ ಅನುದಾನವನ್ನು ಪ್ರವರ್ಗ-1 ಕ್ಕೆ ಕೊಡುವಂತಹ ವ್ಯವಸ್ಥೆ ಮಾಡಬೇಕೆನ್ನುವ ಮನವಿಯನ್ನು ಮಾಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಎಂ.ನಾಗರಾಜುರವರ ಮನವಿ ಸರಿ ಇದೆ. ಶುಲ್ಕ ವಿನಾಯಿತಿಯನ್ನು ಪ್ರವರ್ಗ-1 ಕ್ಕೆ ಹೊರತುಪಡಿಸಿ, ಪ್ರವರ್ಗ-2ಎ, ಇತರೆ ವರ್ಗಗಳಿಗೆ 1.00 ಲಕ್ಷದವರೆಗೆ ಮಿತಿ ಇದೆ. ಪ್ರವರ್ಗ-1 ಕ್ಕೆ ರೂ.2.50 ಲಕ್ಷಗಳ ಮಿತಿ ಏನಿದೆ, ಅದು ಹಾಗೆಯೇ ಇದೆ. ಇದರಲ್ಲಿ ಏನು ಲೋಪವಾಗಿದೆ. ಇದಕ್ಕೆ ಆರ್ಥಿಕ ಸಮಸ್ಯೆಗಳು ಇವೆ. ಇದೆಲ್ಲವನ್ನೂ ಪರಿಗಣಿಸಿ ಅವರಿಗೆ ನ್ಯಾಯ ಕೊಡುವಂತಹ ಕೆಲಸವನ್ನು ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 521**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಎಲ್.ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. "ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಉಪಯೋಗಕ್ಕಾಗಿ ಸಮಾಜ ಕಲ್ಯಾಣ ಇಲಾಖೆಯಿಂದ ನಿರ್ವಹಿಸಲಾಗುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ಶೌಚಾಲಯಗಳು ಸೇರಿದಂತೆ ಮೂಲಭೂತ ಸೌಕರ್ಯಗಳ ಕೊರತೆ, ಕಳಪೆ ಗುಣಮಟ್ಟದ ಆಹಾರ ಸರಬರಾಜು ಮುಂತಾದ ಸಮಸ್ಯೆಗಳ ಬಗ್ಗೆ ಸರ್ಕಾರದಿಂದ ಸಮಗ್ರವಾಗಿ ಸಮೀಕ್ಷೆ ನಡೆಸಲಾಗಿದೆಯೇ: ಪ್ರಸ್ತಾಪಿತ ಸಮಗ್ರ ಸಮೀಕ್ಷೆಯನ್ನು ನ್ಯಾಯಾಲಯದ ನಿರ್ದೇಶನದ ಮೇರೆಗೆ ನಡೆಸಲಾಗುತ್ತಿದೆಯೇ? (ಸಂಪೂರ್ಣವಾದ ಮಾಹಿತಿ ನೀಡುವುದು)" ಎಂದು ನಾನು ಮಾನ್ಯ ಸಚಿವರಲ್ಲಿ ಪ್ರಶ್ನೆಯನ್ನು ಕೇಳಿದ್ದೆ. ಇವರು ಸಮೀಕ್ಷೆ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ಆದರೆ, ಇವರು ಸಂಪೂರ್ಣವಾದಂತಹ ಮಾಹಿತಿಯನ್ನು ಕೊಟ್ಟಿಲ್ಲ. ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ಮಾಡಿದ್ದೇವೆ. ಅವರು ಸಮೀಕ್ಷೆಯನ್ನು ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ. ಅವರು ಏನು ಸಮೀಕ್ಷೆ ಮಾಡಿದ್ದಾರೆ. ಅದರ ಮಾಹಿತಿಯನ್ನು ಕೂಡ ನಾನು ಕೇಳಿದ್ದೆ.

(ಮುಂದು)

(881)16-09-2022(12-10)bsd-vk

**ಶ್ರೀ ಎಂ.ಎಲ್. ಅನಿಲ್ ಕುಮಾರ್ (ಮುಂದು)**

ಸಮೀಕ್ಷೆ ಮಾಡಿರುವ ಮಾಹಿತಿಯನ್ನು ಒದಗಿಸಿಲ್ಲ, ಈ ಮಾಹಿತಿಯನ್ನು ಒದಗಿಸಿದ್ದರೆ ಏನು ಸಮಸ್ಯೆಗಳಿವೆ ಎಂಬ ಮಾಹಿತಿ ನನ್ನ ಗಮನಕ್ಕೆ ಬರುತ್ತಿತ್ತು, ನಂತರ ಪ್ರಶ್ನೆ ಮಾಡಲು ಸಾಧ್ಯವಾಗುತ್ತಿತ್ತು. ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ಹಲವಾರು ಕಡೆ ಮೂಲಭೂತ ಸೌಕರ್ಯಗಳ ಕೊರತೆ ಮತ್ತು ಇನ್ನಿತರ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸಮಸ್ಯೆಗಳನ್ನು

ನಿವಾರಣೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ಪ್ರಶ್ನೆ ಕೇಳಿದ್ದೇನೆ. ಇದಕ್ಕೆ ಉತ್ತರದಲ್ಲಿ ಈಗಾಗಲೇ ಕ್ರಮ ವಹಿಸಲಾಗಿದೆ ಮತ್ತು ಕೋಲಾರ ಜಿಲ್ಲೆಗೆ ರೂ.754.71 ಲಕ್ಷ ಬಿಡುಗಡೆ ಮಾಡಲಾಗಿದೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗೆ ರೂ.1,792.96 ಬಿಡುಗಡೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಬಹುಶಃ ರಾಜ್ಯದ ಜನಸಂಖ್ಯೆಯಲ್ಲಿ ಅತೀ ಹೆಚ್ಚು ಪರಿಶಿಷ್ಟ ಜಾತಿ ಜನರನ್ನು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳು ಹೊಂದಿದ್ದು, ಇಡೀ ದೇಶದಲ್ಲಿ ಅತೀ ಹೆಚ್ಚು ಪರಿಶಿಷ್ಟ ಜಾತಿ ಜನರನ್ನು ಹೊಂದಿರುವ ಜಿಲ್ಲೆ ಕೋಲಾರವಾಗಿದೆ. ಮೊದಲನೆಯ ಸ್ಥಾನವನ್ನು ಶ್ರೀ ರಾಮ್‌ವಿಲಾಸ್ ಪಾಸ್ವಾನ್ ಅವರು ಪ್ರತಿನಿಧಿಸುತ್ತಿದ್ದ ಹಾಜಿಪುರ ಲೋಕಸಭಾ ಕ್ಷೇತ್ರವು ಪಡೆದಿದೆ. ಕೋಲಾರಕ್ಕೆ ರೂ.754.71 ಲಕ್ಷ ಬಿಡುಗಡೆ ಮಾಡಿದರೆ ಬಹುಶ: ಅಲ್ಲಿ ಯಾವುದೇ ಸಮಸ್ಯೆಗಳಿಲ್ಲ ಮತ್ತು ಕಟ್ಟಡ ದುರಸ್ತಿಯ ಅಗತ್ಯವಿಲ್ಲ, ಹೊಸ ಕಟ್ಟಡದ ಅಗತ್ಯವಿಲ್ಲ ಎಂದು ವರದಿಯ ಆಧಾರದ ಮೇಲೆ ಹೇಳಬೇಕಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದು, ಅವರು ಕೇಳಿರುವ ಮಾಹಿತಿಗಳ ಪರಿಪೂರ್ಣ ವರದಿಯನ್ನು ಕೊಟ್ಟಿಲ್ಲ ಎಂದು ಹೇಳಿದ್ದು, ಆ ವರದಿಯನ್ನು ತರಿಸಿ ಕೊಡುತ್ತೇನೆ. ಅವರು ಕೇಳಿರುವ ಒಟ್ಟು ತಾತ್ಪರ್ಯದಂತೆ ಕೊಪ್ಪಳ ಜಿಲ್ಲೆಯಲ್ಲಿ ವಿದ್ಯುತ್ ಸಂಪರ್ಕಕ್ಕೆ ತುತ್ತಾಗಿ ಒಬ್ಬ ವಿದ್ಯಾರ್ಥಿ ಮೃತನಾಗುತ್ತಾನೆ. ಆ ಹಿನ್ನೆಲೆಯಲ್ಲಿ ರಾಜ್ಯ ಉಚ್ಛ ನ್ಯಾಯಾಲಯ ಸ್ವಯಂಪ್ರೇರಿತ ಪ್ರಕರಣ ದಾಖಲು ಮಾಡಿಕೊಂಡು, ಮಕ್ಕಳ ಮೂಲಭೂತ ಸೌಕರ್ಯ ಸೇರಿದಂತೆ ಮಕ್ಕಳ ಭದ್ರತೆಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಸರ್ಕಾರವನ್ನು ಪ್ರಶ್ನೆ ಮಾಡಿದೆ. ಆಗ ಸರ್ಕಾರವು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು committee ಮಾಡಿ, ಅವರವರ ಜಿಲ್ಲೆಯಲ್ಲಿ ಮಕ್ಕಳ ಸುರಕ್ಷತೆಗೆ ಮತ್ತು ಮೂಲಭೂತ ಸೌಕರ್ಯದ ಬಗ್ಗೆ ಇರುವ ಅವಶ್ಯಕತೆಗಳ ಸಮಗ್ರ ವರದಿ ಕೊಡಲು ತಿಳಿಸಿದ್ದು, ಅದರಂತೆ ವರದಿಯನ್ನು ಕೊಟ್ಟಿದ್ದು, ಆ ಮಾಹಿತಿಯನ್ನು ಲಿಖಿತವಾಗಿ ಕೊಡುತ್ತೇನೆ. ಅವರು hostel ಬಗ್ಗೆ ಕೇಳುತ್ತಿದ್ದು, ನಮ್ಮ BCM hostel ಗೆ ಸಂಬಂಧಪಟ್ಟಂತೆ ಸುಮಾರು 2,438 hostel ಗಳಿದ್ದು, ಸುಮಾರು 1,95,000 ವಿದ್ಯಾರ್ಥಿಗಳಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ 1,935 hostel ಗಳಿದ್ದು, 1,68,000 ವಿದ್ಯಾರ್ಥಿಗಳು ಕಲಿಯುತ್ತಿದ್ದು, ಒಟ್ಟಾರೆ ಹೆಚ್ಚು-

ಕಡಿಮೆ 4 ಲಕ್ಷ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಒಂದೊಂದು ವಿಭಾಗದಲ್ಲಿ ರೂ.460 ಕೋಟಿಗಳು ಖರ್ಚಾಗುತ್ತಿದ್ದು, ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಏನೇನು ಮಾಡಬೇಕೆಂದು ರಾಜ್ಯದ ಉಚ್ಚ ನ್ಯಾಯಾಲಯ ಮಾರ್ಗಸೂಚಿಗಳನ್ನು ಹಾಕಿಕೊಟ್ಟಿರುವಂತೆ ಹಾಗೂ CEO ರವರು ಕೊಟ್ಟಿರುವ ವರದಿಯ ಹಿನ್ನಲೆಯಲ್ಲಿ ಪ್ರತಿಯೊಂದು ಜಿಲ್ಲೆಗಳಿಗೆ ತುರ್ತಾದ ಹಣವನ್ನು ಬಿಡುಗಡೆ ಮಾಡುವ ಕೆಲಸವನ್ನು ಮಾಡಿದ್ದೇವೆ. ಮಾನ್ಯ ಸದಸ್ಯರು ಪ್ರಶ್ನೆ ಆ) ನಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಬಿಡುಗಡೆ ಮಾಡಿರುವ ಹಣದ ಬಗ್ಗೆ ಕೇಳಿದ್ದು, ಕೋಲಾರ ಜಿಲ್ಲೆಗೆ ರೂ.7,54,71,000/- ಗಳನ್ನು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗೆ ರೂ.17,92,96,000/- ಅನುದಾನವನ್ನು ಮೂಲಭೂತ ಸೌಕರ್ಯಕ್ಕೆ ಬಿಡುಗಡೆ ಮಾಡಲಾಗಿದೆ ಎಂಬ ವಿವರಗಳನ್ನು ಕೊಡಲಾಗಿದೆ. ಈ ಮಧ್ಯೆ library ಗಳು, ಬೇರೆ ಬೇರೆ ಕ್ರೀಡಾ ಸಾಮಗ್ರಿಗಳು, ಉಪಕರಣಗಳು, computer ಗಳ ಬಗ್ಗೆ ಮಾಹಿತಿ ಕೇಳಿದ್ದು ಈ ವಿವರಗಳನ್ನು ಕೊಟ್ಟಿದ್ದೇನೆ. ಮಕ್ಕಳ ಸುರಕ್ಷತೆ ಮತ್ತು ಮೂಲಭೂತ ಸೌಕರ್ಯ ಒದಗಿಸಲು ಎರಡು ವರ್ಷಗಳಿಂದ ಆರ್ಥಿಕವಾಗಿ ಸಮಸ್ಯೆ ಇದ್ದುದ್ದರಿಂದ ಸ್ವಲ್ಪ ಕಷ್ಟವಾಗಿತ್ತು. ಈ ವರ್ಷ ಎಲ್ಲಾ ಅನುಕೂಲತೆಗಳನ್ನು ಮಾಡಿಕೊಡಲು ಯೋಚನೆ ಮತ್ತು ಯೋಜನೆಗಳನ್ನು ರೂಪಿಸುತ್ತೇವೆ. ಮಾನ್ಯ ಸದಸ್ಯರ ಸಲಹೆಗಳೇನಾದರೂ ಇದ್ದಲ್ಲಿ ದಯವಿಟ್ಟು ನೀಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಎಂ.ಎಲ್. ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಇದು ಬಹಳ ಪ್ರಮುಖವಾದ ವಿಚಾರವಾಗಿದ್ದು, Social Welfare Department ನಲ್ಲಿ materials ಗಳನ್ನು ಖರೀದಿ ಮಾಡುವಾಗ ಎಲ್ಲವನ್ನೂ ಕೇಂದ್ರೀಕೃತವನ್ನಾಗಿ ಮಾಡುತ್ತಾರೆ. ಬೆಂಗಳೂರಿನಲ್ಲಿ ಎಲ್ಲದ್ದರ tender ಮಾಡಿ, ಬೆಂಗಳೂರಿನಿಂದಲೇ ಎಲ್ಲಾ supply ಕೊಡುತ್ತಾರೆ. ಯಾವ material ಗಳಲ್ಲಿಯೂ quality ಇರುವುದಿಲ್ಲ. ಉದಾಹರಣೆಗೆ UPS purchase ಮಾಡಿದರೆ 6 ತಿಂಗಳು ಬಾಳಿಕೆ ಬರುವುದಿಲ್ಲ, ನಾವುಗಳು ಮನೆ ಅಥವಾ ಕಛೇರಿಗಳಲ್ಲಿ ಅಳವಡಿಸಿದರೆ ಕನಿಷ್ಠ ನಾಲ್ಕೈದು ವರ್ಷ ಬರುತ್ತದೆ. ಆದರೆ ಸಮಾಜ ಕಲ್ಯಾಣ ಇಲಾಖೆಯಿಂದ supply ಮಾಡುವ ಯಾವುದೇ material ಗಳು ಬಾಳಿಕೆ ಬರುವುದಿಲ್ಲ. ಆಹಾರ ಪದಾರ್ಥಗಳಿಗೆ tender ಮಾಡಿದ್ದರೂ, ಯಾವೊಬ್ಬ contractor ಸಹ ಆಹಾರ ಪದಾರ್ಥ ಮತ್ತು ತರಕಾರಿಗಳನ್ನು supply ಮಾಡುವುದಿಲ್ಲ. ಏಕೆಂದರೆ

warden ಜೊತೆ adjustment ಮಾಡಿಕೊಂಡು ಪ್ರತಿ ತಿಂಗಳು ಇಷ್ಟು ಹಣ ಎಂದು ಕೊಟ್ಟುಬಿಡುತ್ತಾರೆ. ಆಗ ಅವರೇ ಆಹಾರ ಪದಾರ್ಥ ಮತ್ತು ತರಕಾರಿಗಳನ್ನು ಖರೀದಿ ಮಾಡಿ ಪೂರೈಸುವುದು ನಡೆಯುತ್ತಿದೆ. ಈ ವಿಚಾರಗಳೆಲ್ಲವೂ ಇಲಾಖೆಯ ಹಿರಿಯ ಅಧಿಕಾರಿಗಳಿಗೂ ಗೊತ್ತಿದೆ. ಆದರೆ ಯಾರೊಬ್ಬರು ಕ್ರಮ ತೆಗೆದುಕೊಳ್ಳುತ್ತಿಲ್ಲ. ಈ ವಿಚಾರ ಜನ ಪ್ರತಿನಿಧಿಗಳಿಗೂ ಸಹ ಗೊತ್ತಿದೆ. ಇವತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದವರಿಗೆ ಶಿಕ್ಷಣ ಎನ್ನುವುದು ಬಹುಶಃ ಮರೀಚಿಕೆಯಾಗಿದೆ.

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರ ಕೊಡಲಿ, ತಾವು ಕೇಳಿರುವ ಪ್ರಶ್ನೆಗೆ ಉತ್ತರ ಕೊಡಬೇಡವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಯನ್ನು ಈ ಸದನದಲ್ಲಿ ಯಾರಾದರೂ ಕೇಳಬೇಕು ಮತ್ತು ಉತ್ತರ ಕೊಡಬೇಕು ಎನ್ನುವ ಆಸೆಯಲ್ಲಿ ನಾನೂ ಇದ್ದೆನು. ಆದರೆ ಇದು ಪ್ರಶ್ನೋತ್ತರ ಆಗಿರುವುದರಿಂದ ಸೀಮಿತವಾದ ಸಮಯ ಇದೆ. ದಯವಿಟ್ಟು ಈ ವಿಚಾರವನ್ನು ಬೇರೆ ರೂಪದಲ್ಲಿ ಕೇಳಿದರೆ ಅರ್ಧ ಅಥವಾ ಒಂದು ಗಂಟೆಯಲ್ಲಿ ಚರ್ಚೆ ಮಾಡಬಹುದಾಗಿದೆ.

**ಸಭಾಪತಿಯವರು:-** ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರು notice ಕೊಡಲಿ.

**ಶ್ರೀ ನಸೀರ್ ಅಹಮದ್:-** ಈ ವಿಚಾರದ ಚರ್ಚೆಗೆ ಅರ್ಧ ಗಂಟೆ ಅವಕಾಶ ಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸಮಾಜ ಕಲ್ಯಾಣ ಇಲಾಖೆ ಎಂದರೆ ಅದೊಂದು ಅನಾಥಾಶ್ರಮ ಅಲ್ಲ. ಎಲ್ಲಾ ಮಕ್ಕಳಿಗೆ ರಕ್ಷಣೆ ಕೊಡುವ ಹಾಗೂ ಪಾರದರ್ಶಕವಾದ ಅಧಿಕಾರವನ್ನು ನಡೆಸಬೇಕಾದ ಒಂದು ಇಲಾಖೆ. ಈ ಇಲಾಖೆಯಲ್ಲಿ 4G ಬಗ್ಗೆ ದೂರು ಇರಬಹುದು. ಅದೇನೆಂದರೆ, 4G ಮೂಲಕ ಖರೀದಿ ಮಾಡಿ, ಎಷ್ಟು ಬೇಕಾದರೂ tender ಇಲ್ಲದೇ ಖರೀದಿ ಮಾಡಿದ್ದಾರೆ ಎಂಬ ದೂರು ಇರಬಹುದು. ಆದರೆ 4G ಯನ್ನು ಸಂಪೂರ್ಣವಾಗಿ ರದ್ದುಪಡಿಸಲಾಗಿದೆ. ಮಾನ್ಯ

ಸಭಾಪತಿಯವರೇ, 4G ಯನ್ನು ರದ್ದು ಮಾಡಿ ಒಂದು ವರ್ಷ ಕಳೆದಿದೆ. ಎಲ್ಲಾದರೂ 4G ಯಲ್ಲಿ ಮಾಡಿರುವ ಒಂದು ಉದಾಹರಣೆ ಇದ್ದರೆ ಕೊಡಲಿ. ಇದಲ್ಲದೇ tender ಎಲ್ಲದ್ದಕ್ಕೂ ಸೇರಿಸಿ ಹಾಕುತ್ತಿದ್ದು, ಯಾಲಕ್ಕಿಗೆ ರೂ.50 ಮತ್ತು ಅಕ್ಕಿಗೆ ರೂ.2 ಅಥವಾ 3 ಜಾಸ್ತಿ ಮಾಡಿ ಹಾಕುತ್ತಿದ್ದರು. ಆದ್ದರಿಂದ ಈಗ ಯಾಲಕ್ಕಿ ಪದಾರ್ಥಕ್ಕೆ ಬೇರೆ tender, ಎಣ್ಣೆಗೆ ಬೇರೆ tender ಕರೆಯುತ್ತಿದ್ದು, ಹಾಗಾಗಿ ಈ ಸಮಸ್ಯೆಗಳು ಮುಗಿದಿದೆ. ಹಾಗಾಗಿಯೂ ಲೋಪದೋಷಗಳು ಇದೆ ಎಂದು ನನಗೆ ಅನಿಸುತ್ತದೆ. ಅದಕ್ಕಾಗಿ ರಾಯಚೂರು ಜಿಲ್ಲೆಯಲ್ಲಿ ಮಕ್ಕಳು ತೊಂದರೆಗೆ ಒಳಗಾಗಿರುವ ಬಗ್ಗೆ ಮಾಧ್ಯಮದಲ್ಲಿ ಬಂದಿರುವುದನ್ನು ಕಂಡಿರಬಹುದು. ಅಲ್ಲಿಯ Principal ರನ್ನು suspend ಮಾಡಲಾಗಿದೆ. ಬೆಳಗಾವಿಯಲ್ಲಿ ಅಕ್ಕಿಯಲ್ಲಿ ಹುಳು ಬಂದಿದೆ ಎಂದು ವರದಿಗಳು ಪ್ರಕಟವಾದಾಗ ಅಲ್ಲಿಯ Warden ಮತ್ತು ಪ್ರಾಂಶುಪಾಲರನ್ನು suspend ಮಾಡಲಾಗಿದೆ. ಬಿಜಾಪುರದಲ್ಲಿ ಶಿಕ್ಷಕರು ಅತಿರೇಕವಾಗಿ ಕೆಲವು ಸಮಸ್ಯೆಗಳನ್ನು ಸೃಷ್ಟಿ ಮಾಡಿದರು ಎಂಬ ಕಾರಣಕ್ಕೆ ಅಲ್ಲಿಯ Warden ಮತ್ತು ಪ್ರಾಂಶುಪಾಲರನ್ನು suspend ಮಾಡಲಾಗಿದೆ. ನಾವು ಯಾವ ಮೇಲೂ ದಾಕ್ಷಿಣ್ಯ ಇಟ್ಟುಕೊಂಡಿಲ್ಲ, ಆಯಕಟ್ಟಿನ ಜಾಗಗಳಲ್ಲಿ ಇಲಾಖೆಯ ದಕ್ಷ ಅಧಿಕಾರಿಗಳನ್ನು ನೇಮಕ ಮಾಡಲಾಗುತ್ತಿದೆ. ತಮ್ಮ ಮೂಲಕ ಸದನದ ಗಮನಕ್ಕೆ ತರುವುದೇನೆಂದರೆ, ತಪ್ಪು ಮಾಡುವವರಿಗೆ ದಾರಿ ಬಿಡಿ ಎಂದು ವರ್ಗಾವಣೆ ಮಾಡುವ ಪ್ರಕ್ರಿಯೆಗಳು ನಡೆಯುತ್ತಿವೆ. ದಕ್ಷತೆ ಮತ್ತು ಪ್ರಾಮಾಣಿಕತೆಗೆ ಮಾತ್ರ ಇಲಾಖೆಯಲ್ಲಿ ಅವಕಾಶ ಇದೆ. ಒಂದು ರೂಪಾಯಿ ಹೆಚ್ಚು ಕಡಿಮೆ ಆದರೂ ತನಿಖೆ ಮಾಡಿಸುತ್ತೇನೆ.

**ಸಭಾಪತಿಯವರು:–** ಪತ್ರ ಕೊಡಿ, ಮಾನ್ಯ ಮಂತ್ರಿಗಳೇ ನಾಳೆ ಚರ್ಚೆ ಮಾಡೋಣವೇ?

**ಶ್ರೀ ಎಂ.ಎಲ್. ಅನಿಲ್ ಕುಮಾರ್:–** ನಾನು ಪತ್ರ ಕೊಡುತ್ತೇನೆ.

**ಡಾ॥ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು Monitoring Cell ಎಂದು ಮಾಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಅವರು notice ಕೊಡಲಿ, ನಮ್ಮ ಇಲಾಖೆಯಲ್ಲಿ ಯಾವುದೇ ಲೋಪಗಳಿದ್ದರೂ ಸರಿಪಡಿಸಿಕೊಂಡು ಕ್ರಮ ತೆಗೆದುಕೊಳ್ಳುತ್ತೇನೆ, ಪಾರದರ್ಶಕವಾದ ಆಡಳಿತಕ್ಕೆ ಅನುವು ಮಾಡಿಕೊಡುತ್ತೇನೆ.

**ಸಭಾಪತಿಯವರು** ಶ್ರೀ ಸಂಕನೂರು ರವರು ಪ್ರಶ್ನೆ ಕೇಳಿ.

**ಪ್ರಶ್ನೆ ಸಂಖ್ಯೆ: 573**

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರಿಸಲು ಮಾನ್ಯ ಸಚಿವರಾದ ಮಾನ್ಯ ನಾರಾಯಣಗೌಡರು ಇಲ್ಲ, ನಾನು ಪ್ರಶ್ನೆಯನ್ನು ಯಾರಿಗೆ ಕೇಳಲಿ?

**ಸಭಾಪತಿಯವರು:–** ಮಾನ್ಯ ಸಭಾನಾಯಕರು ಉತ್ತರ ಕೊಡುತ್ತಾರೆ, ತೊಂದರೆಯಿಲ್ಲ.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಕ್ರೀಡಾ ಇಲಾಖೆಯಿಂದ ಪ್ರಾಧಿಕಾರದ ಮೂಲಕ ಸುಮಾರು 15 ರಿಂದ 20 ವರ್ಷಗಳವರೆಗೆ contract basis ನಲ್ಲಿ ಸೇವೆ ಮಾಡಿದವರನ್ನು ಖಾಯಂ ಮಾಡಬೇಕೆಂದು ಪ್ರಶ್ನೆ ಕೇಳಿದ್ದೇನೆ. ಇದು ಬಹಳ ವರ್ಷಗಳಿಂದ ಗಂಭೀರ ಸಮಸ್ಯೆಯಾಗಿದೆ. ಆದ್ದರಿಂದ ಮಾನ್ಯ ಸಚಿವರು ಇರುವಾಗ ಅವಕಾಶ ಕೊಡಿ.

**ಪ್ರಶ್ನೆ ಸಂಖ್ಯೆ 526**

**ಉತ್ತರದ ಪ್ರತಿ ಲಗತ್ತಿಸಿದೆ**

**ಶ್ರೀ ಕೆ. ಹರೀಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದು, ಫಸಲು ಭೀಮಾ ಯೋಜನೆಯು ಸುಮಾರು 5 ವರ್ಷಗಳ ಹಿಂದೆ ಬಹಳ ನಿರೀಕ್ಷೆಯಿಂದ ಪ್ರಾರಂಭವಾದ ಯೋಜನೆಯಾಗಿದ್ದು, ಇವತ್ತು ರೈತರು ಅದರ ಬಗ್ಗೆ ನಿರಾಸಕ್ತಿಯನ್ನು ಹೊಂದಿದ್ದಾರೆ. ಏಕೆಂದರೆ ನಾಲ್ಕು ಜಿಲ್ಲೆಗಳನ್ನು ಹೊರತುಪಡಿಸಿ ಉಳಿದೆಲ್ಲಾ ಜಿಲ್ಲೆಗಳಲ್ಲಿ ಫಸಲು ಭೀಮಾ ಯೋಜನೆಗೆ ರೈತರಲ್ಲಿ ನಿರಾಸಕ್ತಿ ಇದೆ. ಇದಕ್ಕೆ ಅನೇಕ ಕಾರಣಗಳಿವೆ. ರೈತರಿಗೆ ಕೇವಲ 5% ಮಾತ್ರ ಕಟ್ಟಲು ಅವಕಾಶ ಇದ್ದು, ಉಳಿದ 95% ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಟ್ಟುತ್ತಿವೆ. ಆದರೂ 29 ಲಕ್ಷಗಳಿದ್ದ ಅರ್ಜಿ ಸಂಖ್ಯೆ ಇವತ್ತು 14 ಲಕ್ಷಗಳಿಗೆ ಕುಸಿದಿದೆ. ಅಂದರೆ ಇವತ್ತು ವಿಮೆ ಕೊಡುವ ಸಂದರ್ಭದಲ್ಲಿ ವಿನಾಃಕಾರಣ ವಿಮೆ ನಿರಾಕರಿಸಲ್ಪಡುತ್ತಿದೆ. ಬಹುಶಃ RTC ಯಲ್ಲಿ entry ಇಲ್ಲ, ಆಧಾರ್ card entry ಇಲ್ಲ, ಆಧಾರ್ card ರೈತರು ಸ್ವಯಂ ಅವರೇ ಮಾಡಿಸಿಕೊಳ್ಳಬೇಕು, ಮಾಡಿಕೊಳ್ಳದಿದ್ದರೆ ರೈತರದೇ ತಪ್ಪಿದೆ. ಆದರೆ RTC ಯಲ್ಲಿ entry ಆಗದಿದ್ದರೆ ಯಾರ ತಪ್ಪು? ಅದನ್ನು Village Accountant ಗಳು entry ಮಾಡಬೇಕು. ಬೆಳೆಯ ಬಗ್ಗೆ RTC ಯಲ್ಲಿ ನಮೂದಿಸುವುದಿಲ್ಲ. ಇದರಿಂದಾಗಿ ರೈತರಿಗೆ ತೊಂದರೆಯಾಗಿರುವುದರಿಂದ ಫಸಲು ಭೀಮಾ ಯೋಜನೆಯಿಂದ ಸರಿಯಾಗಿ ಪ್ರಯೋಜನ ಸಿಗುತ್ತಿಲ್ಲ. ರೈತರು ಹಣ ಕಟ್ಟುವುದು ಕಡಿಮೆಯಾಗಿದ್ದರೂ ಅವರಿಗೆ ಪ್ರಯೋಜನ ಸಿಗುವುದಿಲ್ಲ ಎಂದು ನಿರಾಸಕ್ತಿ ತಾಳಿದ್ದಾರೆ.

**ಶ್ರೀ ಬಿ.ಸಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, 2016 ರಲ್ಲಿ ಈ ಯೋಜನೆಯು ಜಾರಿಗೆ ಬಂದಿದ್ದು, ಹಂಗಾಮುವಾರು ಬೆಳೆ insurance ಅನ್ನು ಕಟ್ಟಿಸಿಕೊಳ್ಳುತ್ತಿದ್ದೇವೆ. ಮಾನ್ಯ ಸದಸ್ಯರ ಪ್ರಶ್ನೆ ಕೇಳಿರುವಂತೆ ಉತ್ತರವನ್ನು ಕೊಟ್ಟಿದ್ದೇವೆ. ಮುಂಗಾರಿನಲ್ಲಿ 31 district ಗಳಲ್ಲಿ ಮಾಡಲು ಅವಕಾಶ ಇದೆ.

(ಮುಂದು)

(882) 16.09.2022 12.20 ಹೆಚ್‌ವಿ:ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಸಿ.ಪಾಟೀಲ್ (ಮುಂದುವರಿದದ್ದು):-**

ಸನ್ಮಾನ್ಯ ಸಭಾಪತಿಯವರೇ, ಹಿಂಗಾರಿನಲ್ಲಿ ಹಂಗಾಮಿನಲ್ಲಿ ಬೆಳೆ ಆವರಿಸಿದ ವಿಸ್ತೀರ್ಣಕ್ಕನುಗುಣವಾಗಿ ಕೊಡಗು, ದಕ್ಷಿಣ ಕನ್ನಡ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಈ 04 ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ 27 ಜಿಲ್ಲೆಗಳಲ್ಲಿ ಹಾಗೂ ಬೇಸಿಗೆ ಹಂಗಾಮಿನಲ್ಲಿ ಉಡುಪಿ, ಕೊಡಗು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ಬೀದರ್ ಈ 5 ಜಿಲ್ಲೆಗಳನ್ನು ಹೊರತುಪಡಿಸಿ ಎಲ್ಲಾ 26 ಜಿಲ್ಲೆಗಳಲ್ಲಿ ಬೆಳೆ ವಿಮೆ ನೋಂದಣಿಗಾಗಿ ಅಧಿಸೂಚಿಸಲಾಗಿದೆ.

ಮಾನ್ಯ ಸದಸ್ಯರು ಆರ್.ಟಿ.ಸಿ.ಯಲ್ಲಿ ವಿಮೆ ಮಾಡಲಾಗಿರುವ ಬೆಳೆಯನ್ನು ನಮೂದು ಮಾಡುವ ನಿಟ್ಟಿನಲ್ಲಿ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಉಲ್ಲೇಖ ಮಾಡಿದ್ದಾರೆ. Based on crop survey data. ದತ್ತಾಂಶದ ಮೇಲೆ ಅವಲಂಬಿತವಾಗಿದೆ. ಮೊದಲಿಗೆ ನಾವು ಸರ್ವೆ ಮಾಡುತ್ತೇವೆ. ನಂತರ reconciliation and validation ಜಿಲ್ಲಾ ಮಟ್ಟದಲ್ಲಿ ಆಗುತ್ತದೆ. ಇದಾದ ಒಂದೆರಡು ತಿಂಗಳುಗಳ ನಂತರ ಬೆಳೆ ಸರ್ವೆ ಮಾಡಿ ನಂತರ ವಿಮಾ ಕಂಪನಿಗೆ ಕಳುಹಿಸಿಕೊಡಲಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುತ್ತಾ, ಬೆಳೆ ವಿಮೆ ನೋಂದಾಣಿ ಮಾಡುತ್ತಿರುವವರ ಸಂಖ್ಯೆ ಕಡಿಮೆಯಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ, ಈ ವರ್ಷ 18 ಲಕ್ಷದ 50 ಸಾವಿರ ಜನ ರೈತರು ಬೆಳೆ ವಿಮೆಗಾಗಿ ನೋಂದಾಣಿ ಮಾಡಿಕೊಂಡಿದ್ದಾರೆ. ಇದು ಅಧಿಕ ಪ್ರಮಾಣದ ನೋಂದಾಣಿಯಾಗಿದೆ. ಕಳೆದ ವರ್ಷಕ್ಕೆ ಹೋಲಿಕೆ ಮಾಡಿ ನೋಡಿದರೆ, ಸುಮಾರು 7 ಲಕ್ಷ ಜನ ರೈತರು ಹೆಚ್ಚಿನ ಪ್ರಮಾಣದಲ್ಲಿ ಬೆಳೆ ವಿಮೆ ನೋಂದಾಣಿ ಮಾಡಿಕೊಂಡಿದ್ದಾರೆ.

**ಶ್ರೀ ಕೆ.ಹರೀಶ್‌ಕುಮಾರ್:-** ಸನ್ಮಾನ್ಯ ಸಭಾಪತಿಯವರೇ, 2016ನೇ ಇಸವಿಯಲ್ಲಿ ಸುಮಾರು 29 ಲಕ್ಷ ಜನ ರೈತರು ಬೆಳೆ ವಿಮೆ ನೋಂದಾಣಿ ಮಾಡಿಕೊಂಡಿದ್ದರು.

**ಶ್ರೀ ಬಿ.ಸಿ.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಕಳೆದ ವರ್ಷಕ್ಕಿಂತ ಈ ವರ್ಷ 7 ಲಕ್ಷ ಜನರು ಅಧಿಕವಾಗಿ ನೋಂದಾಣಿ ಮಾಡಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ವಿಮಾ ಕಂಪನಿಗಳಿಗೆ ತಾಕಿತ್ತು ಮಾಡಿದ್ದೇವೆ. Crop cutting experience ಮಾಡುವವರು Statistical Officer ಕರೆದು ಮಾತನಾಡಿ, ಎಲ್ಲೆಲ್ಲಿ ಬೆಳೆ ನಷ್ಟವುಂಟಾಗಿದೆ ಎನ್ನುವ ದತ್ತಾಂಶಗಳನ್ನು ಇಟ್ಟುಕೊಂಡು ಮಾಡಬೇಕೆನ್ನುವ ಸೂಚನೆಗಳನ್ನು ಕೊಟ್ಟಿದ್ದೇವೆ. ವಿಮಾ ಕಂಪನಿಗಳಿಂದ ರೈತರಿಗೆ ಯಾವುದೇ ರೀತಿಯಲ್ಲಿಯೂ ತೊಂದರೆಯಾಗದಂತೆ ಕ್ರಮ ತೆಗೆದುಕೊಳ್ಳಲಾಗುತ್ತದೆ.

**ಶ್ರೀ ಕೆ.ಹರೀಶ್‌ಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ವಿಮಾ ಕಂಪನಿಗಳ ಪ್ರತಿನಿಧಿಗಳು ಯಾರೂ ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ, ಗ್ರಾಮ ಮಟ್ಟದಲ್ಲಿ ಅಥವಾ ಹಳ್ಳಿಗಳಲ್ಲಿ ಎಲ್ಲಿಯೂ ಕಾಣ ಸಿಗುವುದಿಲ್ಲ. ದೊಡ್ಡದೊಡ್ಡ ವಿಮಾ ಕಂಪನಿಯವರು ದೆಹಲಿಯಲ್ಲಿ ಆಫೀಸ್ ಮಾಡಿಕೊಂಡು ಇನ್ಸೂರೆನ್ಸ್ ಕಂಪನಿಗಳನ್ನು ನಡೆಸುತ್ತಿದ್ದಾರೆ. ಸರ್ಕಾರದ ಹಣ ವಿನಾ ಕಾರಣ ಅವರ ಜೇಬು ಸೇರುತ್ತಿದೆ. ರೈತರಿಗೆ ಕೊಡುತ್ತಿಲ್ಲ. ಶೇಕಡಾ ೫೦ರಷ್ಟು ಸಹ ಇವತ್ತು ವಿಲೇವಾರಿ ಆಗುತ್ತಿಲ್ಲ. ರೈತರ ಮತ್ತು ಸರ್ಕಾರದ ದುಡ್ಡನ್ನು ಅವರು ವ್ಯವಸ್ಥಿತವಾಗಿ ಲೂಟಿ ಮಾಡುತ್ತಿದ್ದಾರೆ. ಆದ್ದರಿಂದ ಆ ವಿಮಾ ಕಂಪನಿಗಳ ಪ್ರತಿನಿಧಿಗಳನ್ನು ತಾಲ್ಲೂಕು ಮಟ್ಟದಲ್ಲಿಯಾದರೂ ಇರಿಸಿದರೆ, ಅವರ ಕಂಪನಿ ಯಾವುದು ಎನ್ನುವುದಾದರೂ ರೈತರಿಗೆ ಗೊತ್ತಾಗುತ್ತದೆ. ಸೊಸೈಟಿ ಮೂಲಕ ವಿಮೆಯ ಹಣವನ್ನು ಕಟ್ಟುತ್ತಿದ್ದಾರೆ. ವಿಮಾ ಕಂಪನಿ ಯಾವುದು ಎನ್ನುವುದು ರೈತರಿಗೆ ಗೊತ್ತಿಲ್ಲ. ಹಣ ಎಲ್ಲಿಗೆ ಹೋಗುತ್ತಿದೆ ಎನ್ನುವುದು ರೈತರಿಗೆ ತಿಳಿಯುತ್ತಿಲ್ಲ. ಅವರಿಗೆ ಹಣ ಸಿಗುತ್ತಿಲ್ಲ.

**ಶ್ರೀ ಬಿ.ಸಿ.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಪ್ರತಿಯೊಂದು ರೈತ ಸಂಪರ್ಕ ಕೇಂದ್ರಗಳಲ್ಲಿ ಯಾವಯಾವ ಇನ್ಸೂರೆನ್ಸ್ ಕಂಪನಿಗಳು empanel ನಿಂದ ಬಂದಿರುತ್ತಾರೆ. ಅವರ ಒಬ್ಬ ಪ್ರತಿನಿಧಿಯನ್ನು ರೈತ ಸಂಪರ್ಕ ಕೇಂದ್ರದಲ್ಲಿ ಕಡ್ಡಾಯವಾಗಿ ಕೂರಿಸಬೇಕೆಂದು ಸರ್ಕಾರ ಆದೇಶ ಮಾಡಿದೆ. ಈಗ ರೈತ ಸಂಪರ್ಕ ಕೇಂದ್ರದಲ್ಲಿ ಆಯಾಯ ಕಂಪನಿಯ ಪ್ರತಿನಿಧಿಗಳು ತಮ್ಮ ಕಂಪನಿಯ ಹೆಸರನ್ನು ಹಾಕಿಕೊಂಡು ಕುಳಿತಿರುತ್ತಾರೆ. ಈಗ ರೈತರಿಗೆ ಅವರು ಲಭ್ಯವಾಗುತ್ತಿದ್ದಾರೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: ೫೦೫**

**ಶ್ರೀ ಯು.ಬಿ.ವೆಂಕಟೇಶ್:-** ಸನ್ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರಿಸಲು ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಹಾಜರಿಲ್ಲ.

**ಸಭಾಪತಿಯವರು:-** ಮಾನ್ಯ ಸಭಾ ನಾಯಕರು ಉತ್ತರವನ್ನು ನೀಡುತ್ತಾರೆ.

**ಶ್ರೀ ಯು.ಬಿ.ವೆಂಕಟೇಶ್:-** ಸಭಾ ನಾಯಕರಲ್ಲ.........

**ಸಭಾಪತಿಯವರು:-** ಸಭಾ ನಾಯಕರಲ್ಲ ಎನ್ನುವುದಾದರೆ, ಪ್ರಶ್ನೆಯನ್ನು ಮುಂದೂಡೋಣ.

**ಶ್ರೀ ಯು.ಬಿ.ವೆಂಕಟೇಶ್:-** ಸನ್ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷ ನನಗೆ ಮಾತನಾಡಲು ಅವಕಾಶ ನೀಡಿ. ನಾವೆಲ್ಲರೂ ಈ ಸದನಕ್ಕೆ ಆರಿಸಿ ಬರುವುದು.....

**ಸಭಾಪತಿಯವರು:-** ತಮ್ಮ ಪ್ರಶ್ನೆಯನ್ನು ಮುಂದಕ್ಕೆ ಹಾಕೋಣವೇ?

**ಶ್ರೀ ಯು.ಬಿ.ವೆಂಕಟೇಶ್:-** ಸನ್ಮಾನ್ಯ ಸಭಾಪತಿಯವರೇ, ಪ್ರಶ್ನೆಯನ್ನು ಮುಂದೂಡಿ.

**ಸಭಾಪತಿಯವರು;-** ಆಯಿತು.

**ಶ್ರೀ ಯು.ಬಿ.ವೆಂಕಟೇಶ್:-** ಸನ್ಮಾನ್ಯ ಸಭಾಪತಿಯವರೇ, ಇಂತಹ ಸಮಯದಲ್ಲಿ ಮಂತ್ರಿಗಳು ಸದನದಲ್ಲಿ ಹಾಜರಿಲ್ಲವೆಂದರೆ ಹೇಗೆ? ಸದನ ನಡೆಯುವುದೇ ವರ್ಷಕ್ಕೆ ೫ ದಿನ. ಅನಾರೋಗ್ಯ ಎಂದರೆ ಸರಿ ಆದರೆ, ಈ ರೀತಿ ಸದನಕ್ಕೆ ಮಂತ್ರಿಗಳೇ ಬರದಿದ್ದರೆ ಹೇಗೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ಮಂತ್ರಿಗಳು ಬಂದಾಗ ಸದನ ಮುಗಿಯುವುದರೊಳಗಾಗಿ ಉತ್ತರವನ್ನು ಕೊಡಿಸಲಾಗುತ್ತದೆ.

**ಶ್ರೀ ಯು.ಬಿ.ವೆಂಕಟೇಶ್:-** ಸನ್ಮಾನ್ಯ ಸಭಾಪತಿಯವರೇ, ಯಾವ ಉತ್ತರವನ್ನು ಕೊಡಿಸುತ್ತೀರಿ?

**ಸಭಾಪತಿಯವರು:-** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ಮಂತ್ರಿಗಳು ಬಂದಾಗ ಇದೇ ಸದನದಲ್ಲಿ ಉತ್ತರವನ್ನು ಕೊಡಿಸಲಾಗುತ್ತದೆ. ಈಗ ಮಾನ್ಯ ಮಂಜೇಗೌಡರ ಪ್ರಶ್ನೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 555+512**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸಿ.ಎನ್.ಮಂಜೇಗೌಡ:-** ಸನ್ಮಾನ್ಯ ಸಭಾಪತಿಯವರೇ, "ಐಷಾರಾಮಿ ಕಾರುಗಳ ಜೀವಿತಾವಧಿ ತೆರಿಗೆ ಪಾವತಿಸಿಕೊಳ್ಳದೇ ರಾಜ್ಯದ ವಿವಿಧ ಆರ್.ಟಿ.ಓ. ಕಛೇರಿಗಳಲ್ಲಿ ನೂರಾರು ಕೋಟಿ ರೂಪಾಯಿಗಳಿಗೂ ಹೆಚ್ಚು ತೆರಿಗೆಯನ್ನು ಸರ್ಕಾರಕ್ಕೆ ವಂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?" ಎನ್ನುವ ಪ್ರಶ್ನೆಯನ್ನು ಮಾನ್ಯ ಸಾರಿಗೆ ಸಚಿವರಲ್ಲಿ ಕೇಳಿದ್ದೇನೆ. ಇದೇ ಪ್ರಶ್ನೆಯನ್ನು ದಿನಾಂಕ:23.03.2022ರಲ್ಲಿ ಚುಕ್ಕೆ ಗುರುತಿನ ಪ್ರಶ್ನೆ 2691ರ ಮುಖಾಂತರ ಕೇಳಿದಾಗ ಸುಮಾರು 110 ಕೋಟಿ ರೂಪಾಯಿಗಳಷ್ಟು ಹಗರಣವಾಗಿದೆಯೆಂದು ಇಲಾಖೆ ವರದಿ ಕೊಟ್ಟಿದೆ ಎಂದು ಮಾನ್ಯ ಸಾರಿಗೆ ಸಚಿವರು ಉತ್ತರವನ್ನು ಕೊಟ್ಟಿದ್ದರು. ಆ ವಿಚಾರದ ಮೇಲೆ ಚರ್ಚೆ ನಡೆದಂತಹ ಸಂದರ್ಭದಲ್ಲಿ ಸದರಿ ಪ್ರಕರಣವನ್ನು ಸಿ.ಐ.ಡಿ.ಗೆ ವಹಿಸುವುದಾಗಿ ಇದೇ ಸದನದಲ್ಲಿ ಮಾನ್ಯ ಸಚಿವರು ಭರವಸೆಯನ್ನು ನೀಡಿದ್ದರು. ಇವತ್ತಿನವರೆವಿಗೂ ಈ ಪ್ರಕರಣವನ್ನು ಸಿ.ಐ.ಡಿ.ಗೆ ವಹಿಸಿಕೊಟ್ಟಿಲ್ಲ. ಇದರ ಬಗ್ಗೆ ಮಾನ್ಯ ಸಾರಿಗೆ ಸಚಿವರು ಸ್ಪಷ್ಟೀಕರಣವನ್ನು ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಬಿ.ಶ್ರೀರಾಮುಲು:-** ಸನ್ಮಾನ್ಯ ಸಭಾಪತಿಯವರೇ, ಐಷಾರಾಮಿ ಕಾರುಗಳ ಜೀವಿತಾವಧಿ ತೆರಿಗೆ ಪಾವತಿಸಿಕೊಳ್ಳುವ ನಿಟ್ಟಿನಲ್ಲಿ ಸರ್ಕಾರಕ್ಕೆ ತೆರಿಗೆಯನ್ನು ವಂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ಇಲ್ಲಿಯವರೆಗೆ ಸುಮಾರು 226 ಪ್ರಕರಣಗಳನ್ನು ದಾಖಲು ಮಾಡಲಾಗಿದೆ. ಅಪರ ಸಾರಿಗೆ ಆಯುಕ್ತರು(ಪ್ರವರ್ತನ)(ದಕ್ಷಿಣ) ಇವರು ವರದಿಯನ್ನು ಕೊಡಬೇಕೆಂದು ಆದೇಶವನ್ನು ಮಾಡಿದ್ದೆ. ಅವರು ದಿನಾಂಕ:26.04.2022ರಂದು ಒಂದು ವರದಿಯನ್ನು ಕೊಟ್ಟಿದ್ದಾರೆ. ಸರ್ಕಾರ ಆ ವರದಿಯನ್ನು ಸ್ವೀಕರಿಸಿದೆ. ಮಾನ್ಯ ಸದಸ್ಯರು ಕಳೆದ ಬಾರಿ ಈ ಸದನದಲ್ಲಿಯೇ ಇದೇ ಪ್ರಶ್ನೆಯನ್ನು ಕೇಳಿದ್ದರು. ಆಗ ನಾನು, "ಐಷಾರಾಮಿ ಕಾರುಗಳಿಗೆ ಪಾವತಿಸಿಕೊಳ್ಳಬೇಕಾಗಿರುವ ತೆರಿಗೆಯನ್ನು ವಂಚಿಸಿರುವ ಅಧಿಕಾರಿಗಳಾಗಿರಬಹುದು, ನೌಕರರಾಗಿರಬಹುದು ಅಥವಾ ಏಜೆನ್ಸಿಗಳಾಗಿರಬಹುದು ಅವರ ಮೇಲೆ ತನಿಖೆಯನ್ನು ಪ್ರಾರಂಭಿಸಿ,

ಅಗತ್ಯ ಬಿದ್ದರೇ ಸದರಿ ಪ್ರಕರಣವನ್ನು ಸಿ.ಐ.ಡಿ.ಗೆ ವಹಿಸಿಕೊಡಲಾಗುವುದು" ಎನ್ನುವ ಮಾತನ್ನು ಹೇಳಿದ್ದೆ.

ಸನ್ಮಾನ್ಯ ಸಭಾಪತಿಯವರೇ, ಎಷ್ಟು ತೆರಿಗೆ ವಂಚನೆಯಾಗಿದೆ ಎನ್ನುವುದನ್ನು ತಿಳಿದುಕೊಳ್ಳಬೇಕಾದರೆ, ಮೊದಲಿಗೆ ಆಡಿಟ್ ಮಾಡಿಸಬೇಕಾಗುತ್ತದೆ. Principal Accountant General ಇವರಿಗೆ ಆಡಿಟ್ ಮಾಡಿಕೊಡುವಂತೆ ಕೋರಿ ಅವರಿಗೆ ಪ್ರಕರಣವನ್ನು ವಹಿಸಿಕೊಡಲಾಗಿದೆ. ಈ ವಿಷಯವನ್ನು ಸಿ.ಐ.ಡಿ.ಗೆ ವಹಿಸಿಕೊಡಬೇಕೆಂದರೆ, ಅಡಿಟ್ ಮತ್ತು Principal Accountant General ಅವರಿಂದ ವರದಿಯನ್ನು ತರಿಸಿಕೊಂಡು ಇದನ್ನು ಸಿ.ಐ.ಡಿ. ವಹಿಸಿದರೆ ಒಳ್ಳೆಯದಾಗುತ್ತದೆಯೇ ಎನ್ನುವ ತೀರ್ಮಾನವನ್ನು ತೆಗೆದುಕೊಳ್ಳುವಂತಹ ಕೆಲಸವನ್ನು ಮಾಡುತ್ತೇನೆ. ಈ ವಿಚಾರವನ್ನು ಸಿ.ಓ.ಡಿ. ಒಪ್ಪಿಸುವ ಬಗ್ಗೆ ಈಗಾಗಲೇ ನಾನು Principal Accountant General ಅವರ ಜೊತೆಗೆ ಮಾತುಕತೆ ನಡೆಸಿದ್ದೇನೆ. ಅವರಿಂದ ಆಡಿಟ್ ವರದಿ ಬಂದ ನಂತರ ಎಷ್ಟೆಷ್ಟು ಅವ್ಯವಹಾರವಾಗಿದೆ; ಯಾವಯಾವ ಏಜೆನ್ಸಿಗಳು ಅವ್ಯವಹಾರ ಮಾಡಿವೆ; ಯಾವ ಅಧಿಕಾರಿಗಳು ಈ ಅವ್ಯವಹಾರದಲ್ಲಿ ಪಾಲ್ಗೊಂಡಿದ್ದಾರೆ ಎನ್ನುವುದು ತಿಳಿದು ಬರುತ್ತದೆ. ಬೆಂಗಳೂರಿನ ವ್ಯಾಪ್ತಿಯಲ್ಲಿ ಬರುವಂತಹ ಎಲ್ಲ ಕಛೇರಿಗಳ ಆಡಿಟ್ ಮಾಡುವಂತಹ ಕೆಲಸ ಪ್ರಾರಂಭವಾಗಿದೆ. ವರದಿ ಬಂದ ಕೂಡಲೇ ಈ ಪ್ರಕರಣವನ್ನು ಸಿ.ಐ.ಡಿ.ಗೆ ವಹಿಸಿ ಕೊಡುವಂತಹ ಕೆಲಸವನ್ನು ಮಾಡುತ್ತೇನೆ.

**ಶ್ರೀ ಸಿ.ಎನ್.ಮಂಜೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ವಿಚಾರವನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಕಳೆದ ಅಧಿವೇಶನದಲ್ಲಿ ನಾನು ಈ ಪ್ರಶ್ನೆಯನ್ನು ಕೇಳಿದ್ದೆ. ಇಲ್ಲಿಗೆ ಸುಮಾರು 5-6 ತಿಂಗಳುಗಳು ಕಳೆದು ಹೋಗಿವೆ. ಒಬ್ಬ ಆರ್.ಟಿ.ಐ. ಕಾರ್ಯಕರ್ತ ಈ ಪ್ರಶ್ನೆಯನ್ನು ಕೇಳಿದ್ದರೆ ಇಷ್ಟು ಹೊತ್ತಿಗಾಗಲೇ ಆತನಿಗೆ ಉತ್ತರ ದೊರೆಯುತ್ತಿತ್ತು. ಮಾನ್ಯ ಸಚಿವರು ಈ ಸದನದಲ್ಲಿ "ಸದರಿ ಪ್ರಕರಣವನ್ನು ಸಿ.ಐ.ಡಿ.ಗೆ ವಹಿಸಿ ಕೊಡಲಾಗುವುದು" ಎಂದು ಹೇಳಿ, ಇಲ್ಲಿಗೆ 5-6 ತಿಂಗಳುಗಳು ಕಳೆದರೂ "ಇನ್ನೂ ಕಾರ್ಯದರ್ಶಿಗಳ ಹಂತದಲ್ಲಿಯೇ ಪತ್ರ ವ್ಯವಹಾರ ನಡೆಸುತ್ತಿದ್ದೇವೆ, ಇನ್ನೂ ಆಡಿಟ್ ಮಾಡಿಸಬೇಕು" ಎಂದು ಹೇಳಿದರೆ ಎಷ್ಟು ಸಮಂಜಸವೆನ್ನುವುದು ನನ್ನ ಪ್ರಶ್ನೆಯಾಗಿದೆ. ಸದನದಲ್ಲಿ ಭರವಸೆ ಕೊಟ್ಟಂತೆ ಇನ್ನೂ ಸಿ.ಐ.ಡಿ.ಗೆ

ವಹಿಸಿಕೊಟ್ಟಿಲ್ಲವೆಂದರೆ ಹೇಗೆ? 40 per cent commission ಬಗ್ಗೆ ಮಾತನಾಡುವುದಕ್ಕೆ ಹೋದರೆ, ಸಾಕ್ಷಿ ಕೊಡಿ ಎಂದು ಕೇಳುತ್ತಾರೆ. ಈ ಪ್ರಕರಣದಲ್ಲಿ ಸುಮಾರು 110 ಕೋಟಿ ರೂಪಾಯಿಗಳಷ್ಟು ತೆರಿಗೆ ವಂಚನೆಯಾಗಿದೆಯೆಂದು ಇಲಾಖಾ ವರದಿ ಬಂದಿದ್ದರೂ ಸಹ ಸರ್ಕಾರ ಸುಮ್ಮನೆ ಕಾಲಾಹರಣ ಮಾಡುತ್ತಿರುವುದರ ಹಿಂದಿರುವ ಉದ್ದೇಶವೇನು? ಏತಕ್ಕೋಸ್ಕರ ಸಿ.ಐ.ಡಿ.ತನಿಖೆಗೆ ವಹಿಸಿಕೊಟ್ಟಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ. ನಾವು ಸರ್ಕಾರದಿಂದ ಏನಾದರು ಉತ್ತರವನ್ನು ಕೇಳಿದರೆ ಅವರು ಸಾಕ್ಷಿ ಕೊಡಿ ಎಂದು ಕೇಳುತ್ತಾರೆ. ನಾನು ಸಾಕ್ಷಿ ಕೊಡುತ್ತಿದ್ದೇನೆ. ಅವರು ಏನು ಮಾಡುತ್ತಾರೋ ಮಾಡಲಿ.

**ಶ್ರೀ ಬಿ.ಶ್ರೀರಾಮುಲು:-** ಸನ್ಮಾನ್ಯ ಸಭಾಪತಿಯವರೇ, ಕಳೆದ ಬಾರಿ ಮಾನ್ಯ ಸದಸ್ಯರು ಈ ವಿಚಾರವನ್ನು ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ಅವರು ಸಿ.ಐ.ಡಿ.ಗೆ ವಹಿಸಿಕೊಡಿ ಎಂದು ಕೇಳಿರಲಿಲ್ಲ.

**ಶ್ರೀ ಸಿ.ಎನ್.ಮಂಜೇಗೌಡ:-** ಸನ್ಮಾನ್ಯ ಸಭಾಪತಿಯವರೇ, ನಾನು ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿ, ಆ ಸಮಿತಿ ಈ ವಿಚಾರದ ಬಗ್ಗೆ ತನಿಖೆ ನಡೆಸಲು ವಹಿಸಿಕೊಡಿ ಎಂದು ಕೇಳಿದ್ದೆ. ಆದರೆ, ಮಾನ್ಯ ಸಚಿವರು ಆಗಿನ ಮಾನ್ಯ ಸಭಾಪತಿಗಳ ಮೂಲಕ ಸಿ.ಐ.ಡಿ.ಗೆ ವಹಿಸಿಕೊಡುತ್ತೇವೆಂದು ಒಪ್ಪಿಕೊಂಡಿದ್ದರು.

**ಶ್ರೀ ಬಿ.ಶ್ರೀರಾಮುಲು:-** ಸನ್ಮಾನ್ಯ ಸಭಾಪತಿಯವರೇ, ನಾನು ಆ ವಿಚಾರವನ್ನೇ ಹೇಳುವುದಕ್ಕೆ ಹೊರಟಿದದೆ, ಮಾನ್ಯ ಸದಸ್ಯರು ನನಗೆ ಮಾತನಾಡಲು ಅವಕಾಶವನ್ನೇ ನೀಡುತ್ತಿಲ್ಲ. ಅವರು ಹೇಳಿರುವುದನ್ನೇ ನಾನು ಹೇಳುವುದಕ್ಕೆ ಬಯಸುತ್ತಿದ್ದೇನೆ. ನಿವೃತ್ತ ನ್ಯಾಯಾಧೀಶರಿಂದ ತನಿಖೆ ಮಾಡಿಸಿ, ಅವರಿಂದ ವರದಿ ಬಂದ ನಂತರ ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ .......

**ಸಭಾಪತಿಯವರು:-** ಮಾನ್ಯ ಮಂಜೇಗೌಡರೇ, ಮಾನ್ಯ ಸಚಿವರು ಏನು ಹೇಳುತ್ತಾರೆ ಅದನ್ನಾದರು ಕೇಳಿ.

**ಶ್ರೀ ಬಿ.ಶ್ರೀರಾಮುಲು:-** ಸನ್ಮಾನ್ಯ ಸಭಾಪತಿಯವರೇ, ಅವರು ಏನು ಕೇಳಿದ್ದಾರೆ ಅದರ ಬಗ್ಗೆಯೇ ಮಾತನಾಡುತ್ತಿದ್ದೇನೆ. ಬೇರೇನೂ ಇಲ್ಲ.

**ಶ್ರೀ ಸಿ.ಎನ್.ಮಂಜೇಗೌಡ:-** ಸನ್ಮಾನ್ಯ ಸಭಾಪತಿಯವರೇ, ನಾವು ಏನು ಪ್ರಶ್ನೆ ಕೇಳುತ್ತೇವೆ ಅದು ಈ ಸದನಕ್ಕೆ ಮಾತ್ರ ಸೀಮಿತವಾಗುತ್ತಿದೆ. ನಾವು ಚುನಾಯಿತ ಪ್ರತಿನಿಧಿಗಳು ನಾವು ಕೇಳಿದ ವಿಚಾರಗಳ ಬಗ್ಗೆ ಸರ್ಕಾರ ಕ್ರಮವನ್ನು ಜರುಗಿಸುವುದೇ ಇಲ್ಲ. ಆದರೆ, ಯಾರೋ ಒಬ್ಬ ಆರ್.ಟಿ.ಐ. ಕಾರ್ಯಕರ್ತ ಒಂದು ಅರ್ಜಿಯನ್ನು ಕೊಟ್ಟರೇ ತಕ್ಷಣವೇ ಪ್ರತಿಕ್ರಿಯಿಸುತ್ತಾರೆ. ನಾವು ಇಲ್ಲಿ ಬಾಯಿ ಬಡಿದುಕೊಂಡರೂ ಸಹ ಉತ್ತರ ದೊರೆಯುವುದಿಲ್ಲ. ಚುನಾಯಿತ ಪ್ರತಿನಿಧಿಗಳಾದ ನಾವು ಜನರಿಗೆ ಏನು ಉತ್ತರವನ್ನು ನೀಡಬೇಕು?

(ಮುಂದುವರಿದಿದೆ)

(883) 16.9.2022 12.30 ಪಿಕೆ: ಬಿಎಸ್ಎಸ್

**ಶ್ರೀ ಸಿ.ಎನ್.ಮಂಜೇಗೌಡ** (ಮುಂದು)

6 ತಿಂಗಳ ಮುಂಚೆ ಇದೇ ರೀತಿ ಉತ್ತರ ಕೊಟ್ಟಿದ್ದರು. ಈ ಕುರಿತು ನಾನು ಭರವಸೆ ಸಮಿತಿಗೆ ಅರ್ಜಿ ಕೊಟ್ಟಿದ್ದೇನೆ.

**ಶ್ರೀ ಬಿ.ಶ್ರೀರಾಮುಲು:-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಮೊದಲು ನಾನು ಹೇಳುವ ಉತ್ತರವನ್ನು ತಾಳ್ಮೆಯಿಂದ ಕೇಳಬೇಕು. ನಾನು ಉತ್ತರ ಕೊಟ್ಟ ಮೇಲೆ ಮಾನ್ಯ ಸದಸ್ಯರು ಮಾತನಾಡಲಿ. ನಾನು ಉತ್ತರ ಕೊಡುವ ವಿಚಾರದಲ್ಲಿ ಲೋಪವಾಗಿದ್ದರೆ ಅದರ ಬಗ್ಗೆ ಮಾತನಾಡಿ. ಮಾನ್ಯ ಸದಸ್ಯರು ಕಳೆದ ಸಲ, ಐಷಾರಾಮಿ ಕಾರುಗಳ ಜೀವಿತಾವಧಿ ತೆರಿಗೆ ಪಾವತಿ ಮಾಡದೇ ನೂರಾರು ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ, ಸುಮಾರು ರೂ. 100 ಕೋಟಿಗಳ ಅವ್ಯವಹಾರವಾಗಿದೆ ಎಂದು ಹೇಳಿ, ಇದನ್ನು ನಿವೃತ್ತ ನ್ಯಾಯಾಧೀಶರಿಂದ ತನಿಖೆ ಮಾಡಿಸಬೇಕು ಎಂದು ಕೇಳಿದ್ದರು. ಆಗ ನಾನು, ಈ ವಿಚಾರದಲ್ಲಿ ಯಾವುದೇ ಮುಲಾಜು ಇಲ್ಲ; ಸಿಒಡಿಗೆ ರೆಫರ್

ಮಾಡೋಣ; ಯಾರು ತಪ್ಪು ಮಾಡಿದ್ದಾರೋ ಅವರಿಗೆ ಶಿಕ್ಷೆ ಆಗಲಿ ಎಂದು ಹೇಳಿದೆ. ಅಲ್ಲದೇ ಈ ಕುರಿತು ಸಂಬಂಧಪಟ್ಟ ನಮ್ಮ ಅಧಿಕಾರಿಗಳನ್ನು ಕರೆಸಿಕೊಂಡು ಚರ್ಚೆ ಮಾಡಿದ್ದೇನೆ. ಬೆಂಗಳೂರು ವ್ಯಾಪ್ತಿಯಲ್ಲಿ 11 ಆರ್‌ಟಿಓ ಕಚೇರಿಗಳು ಬರುತ್ತವೆ. ಅವುಗಳೆಲ್ಲದರ ಆಡಿಟ್ ಮಾಡಿಸುವಂತಹ ಕೆಲಸಗಳು ಆಗುತ್ತಿವೆ. ಸಿಓಡಿಗೆ ಅಥವಾ ಇನ್ಯಾವುದೇ ರೀತಿಯ ತನಿಖೆಗೆ ಒಳಪಡಿಸಬೇಕು ಎಂದರೆ ಆಡಿಟ್ ಮಾಡದೇ ಕೊಡುವುದಕ್ಕೆ ಆಗುವುದಿಲ್ಲ. ಆದಷ್ಟು ಶೀಘ್ರದಲ್ಲಿ ಆಡಿಟ್ ಮಾಡಿಸಿ, ಸಿಓಡಿಗೆ ವಹಿಸಿಕೊಡುವಂತಹ ಕೆಲಸವನ್ನು ನಾನು ಮಾಡುತ್ತೇನೆ.

**ಶ್ರೀ ಸಿ.ಎನ್. ಮಂಜೇಗೌಡ:–** ಮಾನ್ಯ ಸಭಾಪತಿಗಳೆ, ನಾವು ಇವತ್ತು ಸರ್ಕಾರದ ಮಟ್ಟದಲ್ಲಿ ಎಷ್ಟೋ ತನಿಖೆಗಳು ವಹಿಸಿದಾಗ, ವರ್ಷಗಟ್ಟಲೆ ಕಳೆದು ಅಲ್ಲಿದ್ದ ಅಧಿಕಾರಿಗಳು ದೈವಾಧೀನರಾಗಿರುವುದನ್ನು ಕಂಡಿದ್ದೇವೆ.

**ಸಭಾಪತಿಯವರು:–** ಈಗೇನು ಮಾಡಬೇಕು? ನಿಮ್ಮ ಸಲಹೆ ಕೊಡಿ.

**ಶ್ರೀ ಸಿ.ಎನ್. ಮಂಜೇಗೌಡ:–** ನಿರ್ದಿಷ್ಟ ಅವಧಿಯ ಒಳಗೆ ಸಿಐಡಿಗೆ ವಹಿಸಿಕೊಡುತ್ತೇನೆ ಎಂದು ಒಂದು ಸಮಯವನ್ನು ಹೇಳಲಿ.

**ಶ್ರೀ ಬಿ.ಶ್ರೀರಾಮುಲು:–** ಮಾನ್ಯ ಸಭಾಪತಿಗಳೆ, ಇಲ್ಲಿ ಯಾರನ್ನೋ ಉಳಿಸಬೇಕು ಎನ್ನುವ ಉದ್ದೇಶ ನಮಗಿಲ್ಲ. ಖಂಡಿತವಾಗಿಯೂ ಈ ಸದನ ಮುಗಿಯುವುದರೊಳಗೆ, ನಾನೇ ಖುದ್ದು ಮಹಾಲೇಖಪಾಲರನ್ನು ಭೇಟಿ ಮಾಡುತ್ತೇನೆ; ನಮ್ಮ ಕಾರ್ಯದರ್ಶಿಯವರನ್ನು ಕಳುಹಿಸಿ ಕೊಟ್ಟು ಈ ಸಮಸ್ಯೆಯನ್ನು ಬಗೆಹರಿಸುವ ಕೆಲಸ ಮಾಡುತ್ತೇನೆ. ಸಿಓಡಿ ಗೆ ಒಪ್ಪಿಸುವಂತಹ ಕೆಲಸವನ್ನೂ ಕೂಡ ನಾನು ಮಾಡುತ್ತೇನೆ.

**ಶ್ರೀ ಸಿ.ಎನ್. ಮಂಜೇಗೌಡ:–** ಎಷ್ಟು ದಿವಸದ ಒಳಗೆ ಮಾಡುತ್ತೀರಿ?

**ಶ್ರೀ ಬಿ.ಶ್ರೀರಾಮುಲು:–** ಈ ಸದನ ಮುಗಿಯುವುದರ ಒಳಗೆ ನಿಮಗೆ ಉತ್ತರ ಕೊಡುತ್ತೇನೆ.

**ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 16ನೇ ಸೆಪ್ಟೆಂಬರ್ 2022ರ ಸಮೂಹ-5ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 93 ಪ್ರಶ್ನೆಗಳ ಪೈಕಿ 40 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**(ಲಿಖಿತ ಉತ್ತರದ ಪ್ರತಿಗಳನ್ನು ಲಗತ್ತಿಸಿದೆ)**

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಗಳೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು 100 ಇದ್ದರೆ 30 ಪ್ರಶ್ನೆಗಳಿಗೆ ಉತ್ತರ ಒದಗಿಸುವುದು; 90 ಪ್ರಶ್ನೆಗಳಿದ್ದರೆ 40 ಪ್ರಶ್ನೆಗಳಿಗೆ ಉತ್ತರ ಒದಗಿಸಲಾಗುತ್ತದೆ. ಒಂದು ಸಲವೂ ಪೂರ್ತಿ ಉತ್ತರಗಳನ್ನು ಮಂಡಿಸುತ್ತಿಲ್ಲ.

**ಸಭಾಪತಿಯವರು:-** ನೀವು ಯಾವಾಗ ವಿರೋಧ ಪಕ್ಷದ ನಾಯಕರ ಕೆಲಸವನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದಿರಿ? ವಿರೋಧ ಪಕ್ಷದ ನಾಯಕರ ಪಾತ್ರವನ್ನು ಮಾಡುವುದಕ್ಕೆ ಹೊರಟ್ಟಿದ್ದೀರಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ಅರಳಿಯವರು ಕೇಳಿದ್ದು ಸರಿಯಿದೆ. ಈಗ ಸುಮಾರು ಶೇಕಡ 50 ರಷ್ಟು ಉತ್ತರವನ್ನು ಮಂಡಿಸಿದ್ದೇವೆ. ಉಳಿದದ್ದನ್ನು ನಂತರ ಕಳುಹಿಸಿ ಕೊಡುತ್ತೇವೆ.

**೦೩. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

ಅ) **ವಿದ್ಯಾರ್ಥಿನಿಯರಿಗೆ ಕಿರುಕುಳ ನೀಡಿದ ಆರೋಪದ ಮೇಲೆ ಮೊರಾರ್ಜಿ ದೇಸಾಯಿ ವಸತಿ ಶಾಲೆ ಕುಂಚಾವರಂ, ಚಿಂಚೋಲಿ ಇಲ್ಲಿ ಪ್ರಭಾರಿ ಪ್ರಾಂಶುಪಾಲ ಮತ್ತು ಕಂಪ್ಯೂಟರ್ ಆಪರೇಟರ್ ಇವರನ್ನು ಪಾಲಕರು ಥಳಿಸಿರುವ ಬಗ್ಗೆ.**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:(ಸಭಾನಾಯಕರು)(ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಬಿ.ಜಿ.ಪಾಟೀಲ್‌ರವರು ದಿನಾಂಕ: 13.9.2022 ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರ ಪ್ರತಿ ಲಗತ್ತಿಸಲಾಗಿದೆ)

**ಆ) ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಕಟ್ಟಡಗಳು ಅಪಾಯದ ಅಂಚಿನಲ್ಲಿದ್ದು ಚಾವಣಿ ಕುಸಿತ, ಗೋಡೆಗಳು ಶಿಥಿಲವಾಗಿರುವುದು ಮತ್ತು ಇನ್ನಿತರೆ ಮೂಲಭೂತ ಸೌಕರ್ಯಗಳ ಕೊರತೆ ಬಗ್ಗೆ.**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:(ಸಭಾನಾಯಕರು)(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಶ್ರೀ ಕೆ.ಹರೀಶ್ ಕುಮಾರ್‌ರವರು ದಿನಾಂಕ: 14.9.2022ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರ ಪ್ರತಿ ಲಗತ್ತಿಸಲಾಗಿದೆ)

**ಇ) ಕೊಡಗು ಜಿಲ್ಲೆಯ ಭಾಗಮಂಡಲ ತೀರ್ಥಯಾತ್ರಾ ಸ್ಥಳದಲ್ಲಿ ಮೇಲ್ಸ್ಥಾವಣಿಗಳ ನಿರ್ಮಾಣ, ಪಾದಚಾರಿ ಮಾರ್ಗ, ಭೋಜನಶಾಲೆ ಹಾಗೂ ಪಾಕಶಾಲೆಗಳನ್ನು ನಿರ್ಮಾಣ ಮಾಡಲು** ಸರ್ಕಾರ **ಅನುದಾನ ಮಂಜೂರು ಮಾಡುವ ಬಗ್ಗೆ.**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:(ಸಭಾನಾಯಕರು)(ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಶ್ರೀ ಕುಶಾಲಪ್ಪ ಎಂ.ಪಿ(ಸುಜಾ) ರವರು ದಿನಾಂಕ: 14.9.2022ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರ ಪ್ರತಿ ಲಗತ್ತಿಸಲಾಗಿದೆ)

**ಈ) ಸ್ಮಾರ್ಟ್ ಸಿಟಿ ಅಭಿವೃದ್ಧಿಯಲ್ಲಿನ ಗುಣಮಟ್ಟ ಹಾಗೂ ಕಾಮಗಾರಿಗಳ ಬಗ್ಗೆ.**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:(ಸಭಾನಾಯಕರು)(ನಗರಾಭಿವೃದ್ಧಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಶ್ರೀ ಯು.ಬಿ. ವೆಂಕಟೇಶ್‌ರವರು ದಿನಾಂಕ: 15.9.2022ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರ ಪ್ರತಿ ಲಗತ್ತಿಸಲಾಗಿದೆ)

## 04. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

| | |
|---|---|
| ಅ) | ವಿಶೇಷ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಲ್ಲಿ ಹುದ್ದೆಗಳು ಭರ್ತಿಯಾಗದಿರುವುದರಿಂದ ಸರ್ಕಾರದ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನಗೊಳ್ಳದಿರುವ ಬಗ್ಗೆ. |

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ವಿಶೇಷ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಲ್ಲಿ ಹುದ್ದೆಗಳು ಭರ್ತಿಯಾಗದೇ ಇರುವುದರಿಂದ ಹಲವಾರು ಯೋಜನೆಗಳ ಅನುಷ್ಠಾನ ಸಮರ್ಪಕವಾಗಿಲ್ಲದಿರುವ ಬಗ್ಗೆ ದಿನಾಂಕ 15.9.2022ರ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ವಿಶೇಷ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಲ್ಲಿ ಮಂಜೂರಾದ ಹುದ್ದೆಗಳಲ್ಲಿ ಶೇ. 65.30 ರಷ್ಟು ಹುದ್ದೆಗಳು ಖಾಲಿ ಇವೆ. ವಿವಿಧ ವೃಂದಗಳಿಂದ 464 ಹುದ್ದೆಗಳು ಮಂಜೂರಾಗಿದ್ದು, ಇವುಗಳಲ್ಲಿ ಕೇವಲ 161 ಹುದ್ದೆಗಳನ್ನು ಮಾತ್ರ ಭರ್ತಿ ಮಾಡಲಾಗಿದೆ. 303 ಹುದ್ದೆಗಳು ಖಾಲಿ ಇವೆ.

ಜಂಟಿ ನಿರ್ದೇಶಕರು, ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು ಇಂತಹ ಮುಖ್ಯ ಹುದ್ದೆಗಳನ್ನೇ ಭರ್ತಿ ಮಾಡಿಲ್ಲ. ಮುಖ್ಯವಾಗಿ ಮಂಜೂರಾಗಿರುವ 35 ಜಿಲ್ಲಾ ವಿಶೇಷ ಚೇತನ ಕಲ್ಯಾಣಾಧಿಕಾರಿ/ಅಧೀಕ್ಷಕರ ಹುದ್ದೆಗಳಲ್ಲಿ ಭರ್ತಿ ಮಾಡಲಾಗಿರುವುದು ಕೇವಲ 14 ಮಾತ್ರ. ಇನ್ನೂ 21 ಖಾಲಿ ಹುದ್ದೆಗಳು ಇವೆ ಎಂದು ತಿಳಿದು ಬಂದಿರುತ್ತದೆ.

ಒಂದೆಡೆ ಹುದ್ದೆಗಳು ಭರ್ತಿಯಾಗದೇ ಇಲಾಖೆಯ ಚಟುವಟಿಕೆಗೆ ಸಮಸ್ಯೆಯಾಗುತ್ತಿದ್ದರೆ, ಇನ್ನೊಂದು ಕಡೆ ಯೋಜನೆಗಳು ಕಾಟಾಚಾರಕ್ಕೆ ಎಂಬಂತಿವೆ. ವಿಶೇಷ ಚೇತನರಿಗೆ ಕೊಡುವ ತ್ರಿಚಕ್ರ ವಾಹನ ಪೂರೈಕೆ ಬೇಡಿಕೆಯಷ್ಟು ಇಲ್ಲ. 2014-15ನೇ ಸಾಲಿನಿಂದ ಶೇ.75ಕ್ಕಿಂತ ಹೆಚ್ಚು ಅಂಗವೈಕಲ್ಯತೆಯನ್ನು ಹೊಂದಿರುವ ವಿಶೇಷ ಚೇತನರಿಗೆ ಕೆಲವು ಮಾನದಂಡಗಳ ಆಧಾರದ ಮೇಲೆ

ಇಲಾಖೆಯಿಂದ ತ್ರಿಚಕ್ರ ವಾಹನ ವಿತರಿಸಲಾಗುತ್ತಿದೆ. ಆದರೆ ರಾಜ್ಯಾದ್ಯಂತ ಬೇಡಿಕೆಗೆ ತಕ್ಕಂತೆ ತ್ರಿಚಕ್ರ ವಾಹನ ಪೂರೈಕೆಯಾಗುತ್ತಿಲ್ಲ. 2018-19ನೇ ಸಾಲಿನಲ್ಲಿ ಒಂದೇ ಒಂದು ವಾಹನ ವಿತರಣೆ ಮಾಡಿಲ್ಲ.

ಆದಕಾರಣ ಈ ಮೇಲಿನ ವಿಷಯಗಳನ್ನು ಪರಿಗಣಿಸಿ ವಿಶೇಷ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಶೀಘ್ರಗತಿಯಲ್ಲಿ ಭರ್ತಿ ಮಾಡಬೇಕು ಹಾಗೂ ತ್ರಿಚಕ್ರ ವಾಹನಗಳನ್ನು ಬೇಡಿಕೆಗೆ ತಕ್ಕಂತೆ ಸಮರ್ಪಕವಾಗಿ ಪೂರೈಸುವುದು ಸೇರಿದಂತೆ ಇಲಾಖೆಯ ಇತರೆ ಯೋಜನೆಗಳನ್ನು ಕೂಡ ಸರಿಯಾಗಿ ಅನುಷ್ಠಾನ ಮಾಡಲು ಸೂಕ್ತ ಕ್ರಮವನ್ನು ಕೈಗೊಳ್ಳಬೇಕೆಂದು ಮಾನ್ಯ ಮಹಿಳಾ ಮತ್ತು ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಶೇಷ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರನ್ನು ಒತ್ತಾಯಿಸಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಮಹಿಳಾ ಮತ್ತು ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಶೇಷ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಆ): ಶಿರಾ ತಾಲ್ಲೂಕಿನ ಚನ್ನಕುಂಟೆ ಮಾರ್ಗ ರಸ್ತೆಯಲ್ಲಿರುವ ಸೇತುವೆಯು ರಸ್ತೆಯ ಮಟ್ಟಕ್ಕೆ ಇಳಿದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ.**

**ಶ್ರೀ ಚಿದಾನಂದ ಎಂ. ಗೌಡ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಇತ್ತೀಚಿಗೆ ಸುರಿದ ವ್ಯಾಪಕ ಮಳೆಯಿಂದಾಗಿ ಶಿರಾ ತಾಲ್ಲೂಕಿನಾದ್ಯಂತ ಕೆರೆ-ಕಟ್ಟೆಗಳು ತುಂಬಿ ಹಲವೆಡೆ ಹಾನಿ ಸಂಭವಿಸಿದ್ದು, ಅದರಲ್ಲೂ ಹೆಚ್ಚಿನದಾಗಿ ಚಂಗವಾರ ಡಾಂಬರ್ ರಸ್ತೆಯು ಕೊಚ್ಚಿ ಹೋಗಿದ್ದು, ವಾಹನ ಸಂಚಾರ ಅಸ್ತವ್ಯಸ್ತವಾಗಿರುತ್ತದೆ. ಬೆಟ್ಟಪ್ಪನಹಳ್ಳಿ, ಕೋಡಿಹಳ್ಳಿ, ದ್ವಾರನಕುಂಟೆ, ಬೇವಿನಹಳ್ಳಿ ಗ್ರಾಮಗಳಿಗೆ ರಸ್ತೆ ಇಲ್ಲದಂತಾಗಿ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿದೆ. ಇದೇರೀತಿ ಬೇವಿನಹಳ್ಳಿ ಗ್ರಾಮದ ಕೆರೆಮಂದಲಹಟ್ಟಿಯ ಸುಮಾರು 30-40 ಮನೆಗಳು ಜಲಾವೃತಗೊಂಡು ದ್ವೀಪದಂತಾಗಿದೆ.

ಪ್ರತಿನಿತ್ಯವು ಈ ಹಟ್ಟಿಯ ಜನ ಬೇವಿನಹಳ್ಳಿಗೆ ಬರಬೇಕು. ಇಲ್ಲಿನ ಸರ್ಕಾರಿ ಶಾಲೆಗೆ ಬರುವ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಬಸ್ ಸೌಕರ್ಯವಿಲ್ಲದೆ ಹೊಲ ಗದ್ದೆಗಳಲ್ಲಿ ಎದ್ದು ಬಿದ್ದು ಓಡಾಡುವ ಸ್ಥಿತಿ ನಿರ್ಮಾಣವಾಗಿದೆ. ರೈತರ ಜಮೀನುಗಳಗೂ ನೀರು ನುಗ್ಗಿ ವ್ಯಾಪಕ ನಷ್ಟವಾಗಿರುತ್ತದೆ. ಅದರ ಪರಿಹಾರವಾಗಿ ರೈತರಿಗೆ ಕೂಡಲೇ ಸರ್ಕಾರ ಆರ್ಥಿಕವಾಗಿ ನೆರವಾಗಬೇಕಾಗಿರುತ್ತದೆ. ಈ ಗ್ರಾಮಗಳಲ್ಲಿ ಆಕಸ್ಮಿಕವಾಗಿ ಯಾರಿಗಾದರೂ ಅನಾರೋಗ್ಯ ಉಂಟಾಗಿ ಆಸ್ಪತ್ರೆಗೆ ತೆರಳಬೇಕೆಂದರೆ ಅಂಬುಲೆನ್ಸ್ ಕೂಡ ಬರದಂತಾಗಿದೆ. ಗರ್ಭಿಣಿಯರು, ಬಾಣಂತಿಯರಿಗೆ ಚಿಕಿತ್ಸೆ ಇಲ್ಲದೆ ನರಳುವಂತಾಗಿದೆ. ಹಗಲು ಹೊತ್ತಿನಲ್ಲಿಯೇ ಓಡಾಡಲು ರಸ್ತೆ ಇಲ್ಲ ಎನ್ನುವಂತಿರುವಾಗ ಇನ್ನೂ ರಾತ್ರಿ ವೇಳೆಯಲ್ಲಿ ಸಂಕಷ್ಟಗಳು ಹಾಗೂ ಸಮಸ್ಯೆಗಳು ಎದುರಾದರೆ ಗ್ರಾಮದ ಜನ ನರಳಾಡುವಂತಿದೆ.

ಅದೇ ರೀತಿ ಮತ್ತೊಂದು ಘಟನೆ ಕಳೆದ ಆಗಸ್ಟ್ 2 ರಂದು, ಆರಿಫ್ ಉಲ್ಲಾ ಖಾನ್ ಎಂಬ 55 ವರ್ಷದ ಶಿಕ್ಷಕ ಶಿರಾ ನಗರದಿಂದ ದಾವೂದ್ ಪಾಳ್ಯ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಪಾಠ ಮಾಡಿ ಮನೆಗೆ ಹಿಂತಿರುಗುತ್ತಿದ್ದಾಗ ಚನ್ನನಕುಂಟೆ ಸೇತುವೆ ದಾಟುವಾಗ ವಾಹನ ಸಮೇತ ನೀರಿನಲ್ಲಿ ಕೊಚ್ಚಿ ಹೋಗಿ ಮೃತಪಟ್ಟಿರುವ ಘಟನೆ ನಡೆದಿರುತ್ತದೆ. ಈ ಸಮಯದಲ್ಲಿ ನಾನೂ ಸಹ ಶಿರಾ ಕ್ಷೇತ್ರದಲ್ಲಿ ಇರುವ ಸಂದರ್ಭದಲ್ಲಿ ಘಟನೆಯ ವಿಷಯ ತಿಳಿದು ಕೂಡಲೇ ಸ್ಥಳಕ್ಕೆ ಭೇಟಿ ಕೊಟ್ಟು ಪರಿಶೀಲಿಸಿ, ಮೃತದೇಹ ತೆಗೆಸಲಾಯಿತು. ಈ ಎಲ್ಲಾ ಘಟನೆಗಳು ಸ್ಥಳೀಯ 'ಪ್ರಜಾ ಪ್ರಗತಿ' ದಿನ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ. ಶಿರಾದಿಂದ ಚನ್ನನಕುಂಟೆ ಮಾರ್ಗ ರಸ್ತೆಯಲ್ಲಿರುವ ಸೇತುವೆಯು ರಸ್ತೆಯ ಮಟ್ಟಕ್ಕೆ ಇರುವುದರಿಂದಲೇ ಈ ಘಟನೆಗೆ ಕಾರಣವಾಯಿತು ಎಂದು ತಿಳಿದಿರುತ್ತದೆ. ಆದ್ದರಿಂದ ಕೂಡಲೇ ಸೇತುವೆಯನ್ನು ಎತ್ತರಿಸಿ ಸೇತುವೆಯನ್ನು ಮರುನಿರ್ಮಾಣ ಮಾಡಿ, ಇಂತಹ ಘಟನೆಗಳು ಮರುಕಳಿಸದಂತೆ ಸೂಕ್ತ ಕ್ರಮ ಕೈಗೊಳ್ಳುವಂತೆ ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಸಿ.ಸಿ.ಪಾಟೀಲ್ (ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಗಳೆ, ಇದಕ್ಕೆ ಉತ್ತರವನ್ನು ಒದಗಿಸಿಕೊಡಲು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಬುಧವಾರದಂದು ಈ ಕುರಿತು ಉತ್ತರವನ್ನು ನೀಡುತ್ತೇನೆ.

(ಮುಂದು . . .)

(884) 16-09-2022 12.40 ಡಿಎಸ್-ಬಿಎನ್ಎಸ್

**ಇ) ರಾಜ್ಯದಲ್ಲಿ ಮಧ್ಯಾಹ್ನ ಉಪಾಹಾರ ಯೋಜನೆ ಕಾರ್ಯಕ್ರಮದ ಅಡಿ ವಿದ್ಯಾರ್ಥಿಗಳಿಗೆ ಬಿಸಿಯೂಟವನ್ನು ತಯಾರಿಸಿ ಉಣಬಡಿಸುವವರಿಗೆ ಸರ್ಕಾರ ಕಳೆದ 6 ತಿಂಗಳಿನಿಂದ ಗೌರವ ಧನ ನೀಡದಿರುವ ಬಗ್ಗೆ.**

**------**

**ಶ್ರೀ ಪ್ರಕಾಶ್ ಕೆ.ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ರಾಜ್ಯದಲ್ಲಿರುವ ಶಾಲಾ ವಿದ್ಯಾರ್ಥಿಗಳಿಗೆ ಅಗತ್ಯ ಪೌಷ್ಟಿಕಾಂಶವನ್ನು ಒದಗಿಸಲು ಮಧ್ಯಾಹ್ನ ಉಪಹಾರ ಯೋಜನೆಯನ್ನು ಪರಿಪೂರ್ಣವಾಗಿ ವಿದ್ಯಾರ್ಥಿಗಳಿಗೆ ತಲುಪಿಸುವ ಅಡುಗೆ ಸಹಾಯಕರುಗಳಿಗೆ ಸುಮಾರು ತಿಂಗಳುಗಳಿಂದ ಗೌರವಧನವನ್ನು ನೀಡದೇ ಇರುವುದರಿಂದ ಈ ಅಡುಗೆ ಸಹಾಯಕರು ಜೀವನ ನಡೆಸುವುದೇ ಕಷ್ಟವಾಗಿರುತ್ತದೆ. ರಾಜ್ಯದ ಎಲ್ಲಾ ಶಾಲಾ ವಿದ್ಯಾರ್ಥಿಗಳಿಗೆ ಊಟವನ್ನು ಬಡಿಸಿ, ಇವರ ಕುಟುಂಬದ ಮಕ್ಕಳ ಊಟಕ್ಕೆ ಹಣವೇ ಇಲ್ಲದಂತಾಗಿದೆ. ಈ ಅಡುಗೆ ಸಹಾಯಕರಿಗೆ ಸರ್ಕಾರವು ಕೇವಲ 2,000 ರೂಪಾಯಿಗಳಿಂದ 3,500 ರೂಪಾಯಿಗಳನ್ನು ಗೌರವಧನವಾಗಿ ನೀಡುತ್ತಿದ್ದು, ಈ ಹಣವು ಅವರ ಕುಟುಂಬದ ಜೀವನ ನಿರ್ವಹಣೆಗೆ ಸಾಕಾಗುವುದಿಲ್ಲ. ಅಲ್ಲದೆ ಸಮಯಕ್ಕೆ ಸರಿಯಾಗಿ ಈ ಗೌರವಧನವನ್ನು ಸಹ ಸರ್ಕಾರವು ನೀಡುತ್ತಿಲ್ಲವಾದ್ದರಿಂದ ಈ ಅಡುಗೆ ಸಹಾಯಕರು ಜೀವನವನ್ನು ಬಹಳ ಕಷ್ಟದಿಂದ ಸಾಗಿಸುತ್ತಿದ್ದಾರೆ. ಈ ಅಡುಗೆ ಸಹಾಯಕರಿಗೆ ನೀಡುವ ಗೌರವಧನ

ಸಮಯಕ್ಕೆ ಸರಿಯಾಗಿ ಸಿಗದಿದ್ದರೆ, ಇವರುಗಳು ಮಕ್ಕಳಿಗೆ ಪೌಷ್ಟಿಕಾಂಶದ ಆಹಾರವನ್ನು ನೀಡುವಾಗ ಅವರ ಕಾರ್ಯಕ್ಷಮತೆ ಯಾವ ರೀತಿಯಲ್ಲಿರುತ್ತದೆ ಎಂದು ಯೋಚಿಸಬೇಕಾಗುತ್ತದೆ.

ಸರ್ಕಾರವು ಮಧ್ಯಾಹ್ನದ ಉಪಹಾರ ಯೋಜನೆಗೆ ಬೇಕಾಗುವ ಸಾಮಗ್ರಿಗಳಿಗೆ ಸರಿಯಾಗಿ ಹಣವನ್ನು ಸಹ ಬಿಡುಗಡೆ ಮಾಡುತ್ತಿಲ್ಲವಾದ್ದರಿಂದ, ಬಡ ಮಕ್ಕಳ ಊಟೋಪಚಾರಕ್ಕೆ ಬೇಕಾಗುವ ಸಾಮಗ್ರಿಗಳಿಗೆ ಶಿಕ್ಷಕರುಗಳೇ ಹಣವನ್ನು ನೀಡಿ ಮಕ್ಕಳ ಮಧ್ಯಾಹ್ನದ ಉಪಹಾರವನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಸರ್ಕಾರದ ಈ ಎಲ್ಲಾ ಪ್ರವೃತ್ತಿಯನ್ನು ಗಮನಿಸಿದಾಗ ಮಧ್ಯಾಹ್ನ ಉಪಹಾರ ಯೋಜನೆ ಕಾರ್ಯಕ್ರಮವನ್ನು ಸ್ಥಗಿತಗೊಳಿಸಲು ಕಾರ್ಯತಂತ್ರವನ್ನು ರೂಪಿಸುತ್ತಿದೆ ಎಂದು ಅನುಮಾನ ಬರುವಂತಾಗಿದೆ.

ಆದ್ದರಿಂದ ಸರ್ಕಾರವು ಈ ಅಡುಗೆ ಸಹಾಯಕರ ಮತ್ತು ಉಪಹಾರಕ್ಕೆ ಬೇಕಾಗುವ ಹಿಂದಿನ ಅನುದಾನವನ್ನು ಶೀಘ್ರದಲ್ಲಿಯೇ ಬಿಡುಗಡೆ ಮಾಡುವುದಲ್ಲದೇ, ಮುಂದಿನ ದಿನಗಳಲ್ಲಿ ಸಮಯಕ್ಕೆ ತಕ್ಕಂತೆ ಬಿಡುಗಡೆಗೊಳಿಸುವ ನಿಟ್ಟಿನಲ್ಲಿ, ಸಂಬಂಧಪಟ್ಟವರಿಗೆ ನಿರ್ದೇಶನವನ್ನು ನೀಡಲು ಈ ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಪ್ರೌಢ ಮತ್ತು ಪ್ರಾಥಮಿಕ ಶಿಕ್ಷಣ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಈ) ಪ್ರಧಾನ ಮಂತ್ರಿ ಜನೌಷಧಿಯ ಕೇಂದ್ರಗಳಲ್ಲಿ ಔಷಧಗಳು ಸಕಾಲದಲ್ಲಿ ಪೂರೈಕೆ ಆಗದಿರುವ ಬಗ್ಗೆ.**

------

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಭಾರಿ ಮಹತ್ವಕಾಂಕ್ಷಿಯೊಂದಿಗೆ ಆರಂಭಗೊಂಡ ಪ್ರಧಾನ ಮಂತ್ರಿ ಭಾರತೀಯ ಜನೌಷಧಿಯ ಕೇಂದ್ರ ರಾಜ್ಯದ ಈ ಜನೌಷಧಿ ಕೇಂದ್ರಗಳಲ್ಲಿ 1650 ಔಷಧಿಗಳಲ್ಲಿ ಸುಮಾರು 650 ರಿಂದ 700 ಔಷಧಿಗಳು ಮಾತ್ರ ಲಭ್ಯವಿದ್ದು, ಈ ಪೈಕಿ ಬಹುಬೇಡಿಕೆಯ ಔಷಧಿಗಳು ಸುಮಾರು 4 ತಿಂಗಳಿಂದ ಸರಿಯಾಗಿ ಪೂರೈಕೆ

ಆಗುತ್ತಿಲ್ಲ. ಪರಿಣಾಮ ಕಡಿಮೆ ಬೆಲೆ ಔಷಧಿಗಳು ಲಭ್ಯವಾಗಬೇಕೆಂಬ ಕಾರಣಕ್ಕೆ 2008 ರಲ್ಲಿ ಆರಂಭಗೊಂಡ ಜನೌಷಧಿ ಯೋಜನೆಯು ಮೆಡಿಕಲ್ ಲಾಬಿಗೆ ಮಣಿದಿದೆಯೇ ಎಂಬ ಅನುಮಾನ ಮೂಡಿದೆ.

ಹಳ್ಳಿಗಾಡಿನ ಬಡವರು ಮತ್ತು ಕೂಲಿ ಕಾರ್ಮಿಕರು ವಿಶೇಷವಾಗಿ ಬಿ.ಪಿ., ಶುಗರ್ ಸಂತ್ರಸ್ಥರು ಕಡಿಮೆ ದರ ಎಂದು ಈಗಾಗಲೇ ಜನೌಷಧಿ ಕೇಂದ್ರಗಳನ್ನು ಅವಲಂಬಿಸಿದ್ದಾರೆ. ಪ್ರತಿಶತ 10 ಜನರ ಪೈಕಿ 7 ಜನರಿಂದ ಈ ಔಷಧಿಗೆ ಬೇಡಿಕೆ ಇದೆ. ಈ ಬಗ್ಗೆ ದಿನಾಂಕ:09-09-2022ರ ವಿಜಯ ಕರ್ನಾಟಕ ಪತ್ರಿಕೆಯ ಮುಖಪುಟದಲ್ಲಿ ವರದಿಯಾಗಿದೆ. ಇಂತಹ ಸಾರ್ವಜನಿಕ ಮಹತ್ವವಾದ ವಿಷಯವನ್ನು ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಆರೋಗ್ಯ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಉ) ಅನುದಾನಿತ ಪದವಿ ಕಾಲೇಜುಗಳಲ್ಲಿ 2015ರ ಪೂರ್ವಕಾಲದಲ್ಲಿ ನಿವೃತ್ತಿ ಮತ್ತು ಮರಣದಿಂದಾಗಿ ತೆರವಾಗಿ ಮಂಜೂರಾದ ಬೋಧಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.**

-------

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಅನುದಾನಿತ ಪದವಿ ಕಾಲೇಜುಗಳಲ್ಲಿ 2015ರ ಪೂರ್ವ ಕಾಲದಲ್ಲಿ ನಿವೃತ್ತಿ ಮತ್ತು ಮರಣದಿಂದಾಗಿ ತೆರವಾಗಿ ಮಂಜೂರಾದ ಬೋಧಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಆದೇಶ ಸಿಕ್ಕಿದೆ. ಆದರೆ ಅನಿವಾರ್ಯ ಕಾರಣಗಳಿಂದ (ED/57/PUC/2021) ಕಡತವನ್ನು ತಡೆಹಿಡಿಯಲಾಗಿದೆ.

ಬೆಂಗಳೂರು ಹೊರತುಪಡಿಸಿ ಉಳಿದೆಲ್ಲ ಜಿಲ್ಲೆಗಳಿಗೆ ಅನುಮತಿ ದೊರೆತು ನೇಮಕಾತಿ ಪೂರ್ಣಗೊಂಡಿದೆ. ಬೆಂಗಳೂರು ವಲಯದಲ್ಲಿ 300ಕ್ಕೂ ಹೆಚ್ಚು ಹುದ್ದೆಗಳು ಖಾಲಿ ಉಳಿದಿವೆ. ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಸಂಬಂಧ, ಸಂಬಂಧಪಟ್ಟ ಆಡಳಿತ

ಮಂಡಳಿಯವರು ಪ್ರತಿ ವರ್ಷ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದರೂ ಸಹ ಭರ್ತಿ ಮಾಡಿಕೊಳ್ಳಲು ಅನುಮತಿ ನೀಡದಿರುವುದು ದುರದೃಷ್ಟಕರ ಸಂಗತಿಯಾಗಿದೆ.

ಹಲವಾರು ವರ್ಷಗಳಿಂದ ಅನುದಾನಿತ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಲವಾರು ಬೋಧಕರು ಆ ಹುದ್ದೆಗೆ ಬೇಕಾದ ವಯೋಮಿತಿ ಮೀರಿ ವಂಚಿತರಾಗುವ ಹಂತದಲ್ಲಿದ್ದಾರೆ. ಅಲ್ಲದೇ ಪದವಿ ಕಾಲೇಜುಗಳಲ್ಲಿ NAAC ಉನ್ನತ ಶಿಕ್ಷಣ ಮಾನ್ಯತೆ ದೊರೆಯಲು ಪೂರ್ಣಕಾಲಿಕ ಬೋಧಕ ಹುದ್ದೆಗಳ ಖಾಯಂ ಮಾಡುವ ಅವಶ್ಯಕವಾಗಿರುತ್ತದೆ. ಪೂರ್ಣಕಾಲಿಕ ಹುದ್ದೆಗಳಿಲ್ಲದೆ ಕಾಲೇಜು ನಿರ್ವಹಣೆಯು ಕಷ್ಟಕರವಾಗಿದೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟ (ED/57/PUC/2021) ಕಡತವನ್ನು ಇಲಾಖೆಯ ಕಚೇರಿಯಲ್ಲಿಯೇ ಇರುವುದರಿಂದ ಸದರಿ ಕಡತವನ್ನು ಮಂಜೂರು ಮಾಡಿ ಅನುದಾನಿತ ಪದವಿ ಕಾಲೇಜುಗಳಲ್ಲಿ 2015ರ ಪೂರ್ವ ಕಾಲದಲ್ಲಿ ನಿವೃತ್ತಿ ಮತ್ತು ಮರಣದಿಂದಾಗಿ ತೆರವಾಗಿ ಮಂಜೂರಾದ ಬೋಧಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವಂತೆ ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಊ) ನಗರ ಪಾಲಿಕೆ/ನಗರಸಭೆ ನೌಕರರಿಗೆ ಹಾಗೂ ಪೌರ ಕಾರ್ಮಿಕರುಗಳಿಗೆ ಸರ್ಕಾರದ ಆರೋಗ್ಯ ಸಂಜೀವಿನಿ ವಿಮಾ ಯೋಜನೆಯನ್ನು ವಿಸ್ತರಿಸಲು ಬಳ್ಳಾರಿ ಮಹಾನಗರ ಪಾಲಿಕೆ ಆವರಣದಲ್ಲಿ ನಡೆಯುತ್ತಿರುವ ಪ್ರತಿಭಟನೆ ಕುರಿತು.**

------

**ಶ್ರೀ ವೈ.ಎಂ.ಸತೀಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸರ್ಕಾರಿ ನೌಕರರಿಗೆ ನೀಡುತ್ತಿರುವ ಆರೋಗ್ಯ ಸಂಜೀವಿನಿ ವಿಮಾ ಯೋಜನೆಯನ್ನು ಹಗಲು ರಾತ್ರಿ ನಗರಗಳನ್ನು ಸ್ವಚ್ಛವಾಗಿಡಲು ಶ್ರಮಿಸುತ್ತಿರುವ ನಗರ ಪಾಲಿಕೆ/ನಗರ ಸಭೆ ನೌಕರರು ಮತ್ತು ಪೌರ ಕಾರ್ಮಿಕರಿಗೂ ನೀಡುವಂತೆ ಬಳ್ಳಾರಿ ಮಹಾನಗರ ಪಾಲಿಕೆ ಆವರಣದಲ್ಲಿ ನೌಕರರುಗಳು

ಪ್ರತಿಭಟನೆಯನ್ನು ನಡೆಸುತ್ತಿರುವುದು ದಿನಾಂಕ:15.09.2022ರ ದಿನ ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.

ಈ ಪಾಲಿಕೆ ಹಾಗೂ ಸ್ಥಳೀಯ ಸಂಸ್ಥೆಗಳ ನೌಕರರುಗಳಿಗೂ ಸಹ ಆರೋಗ್ಯ ಸಂಜೀವಿನಿ ವಿಮಾ ಯೋಜನೆಯನ್ನು ವಿಸ್ತರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯ ಕಾರ್ಮಿಕ ಇಲಾಖೆಗೆ ಸಂಬಂಧಪಟ್ಟಿದೆ ಎಂದು ಹೇಳಿದ್ದಾರೆ. ಆದರೆ ಇದು ನಗರಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟಿರಬಹುದು. ಈ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಖ) ಕೆಪಿಎಸ್‌ಸಿ ಯಿಂದ ಉದ್ಯೋಗಾಕಾಂಕ್ಷಿಗಳಿಗೆ ನೇಮಕಾತಿ ಪ್ರಕ್ರಿಯೆಯಲ್ಲಿ ಪದೇಪದೇ ಅನ್ಯಾಯವಾಗುತ್ತಿರುವ ಬಗ್ಗೆ.**

------

**ಶ್ರೀ ಯು.ಬಿ.ವೆಂಕಟೇಶ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಸರ್ಕಾರಿ ಉದ್ಯೋಗಾಕಾಂಕ್ಷಿಗಳಿಗೆ ಕೆಪಿಎಸ್‌ಸಿ ಯೇ ಕಂಟಕ- ಆಯೋಗಕ್ಕೆ ಕಾಯಕಲ್ಪ ಯಾವಾಗ-ಅಕ್ರಮವಿಲ್ಲದೆ ಅಲ್ಲಿ ನೇಮಕವೇ ನಡೆಯದು ಎನ್ನುತ್ತಾರೆ ರಾಜ್ಯದ ಯುವಜನ ಎನ್ನುವ ಬರಹದೊಂದಿಗೆ ದಿನಾಂಕ:15ನೇ ಸೆಪ್ಟೆಂಬರ್ 2022 ರ ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ರಾಜ್ಯದ ಎಲ್ಲಾ ಸರ್ಕಾರಿ ಇಲಾಖೆಗಳಿಗೂ ದಕ್ಷತೆ, ಪ್ರಾಮಾಣಿಕತೆ ಹಾಗೂ ಜೇಷ್ಠತೆ ಆಧರಿಸಿ ನೇಮಕಾತಿ ಮಾಡಬೇಕಾಗಿದ್ದ ಕರ್ನಾಟಕ ಲೋಕ ಸೇವಾ ಆಯೋಗ (ಕೆಪಿಎಸ್‌ಸಿ) ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಅಕ್ರಮ ಹಾಗೂ ವಿಳಂಬಕ್ಕೆ ಹೆಸರುವಾಸಿಯಾಗಿ ತಾನೇ ಉದ್ಯೋಗಾಕಾಂಕ್ಷಿಗಳ ಪಾಲಿಗೆ ಕಂಟಕವಾಗಿದೆ.

ರಾಜ್ಯದ ವಿವಿಧ ಇಲಾಖೆಗಳಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿಯಿದ್ದರೂ ಅವುಗಳಿಗೆ ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ಮಾಡದೆ ಅಕ್ರಮಗಳ ಕೂಪ ವೆಂಬ ಹಣೆಪಟ್ಟಿ ಹೊತ್ತಿದ್ದು, ಅಕ್ರಮದಲ್ಲಿ ಭಾಗಿಯಾದ ಯಾರೋಬ್ಬರಿಗೂ ಶಿಕ್ಷೆಯಾಗದಿರುವುದು ಇದನ್ನು ಪುಷ್ಟೀಕರಿಸಿದೆ. ಸರ್ಕಾರವು ಇದನ್ನು ಈಗಲೂ ಗಂಭೀರವಾಗಿ ಪರಿಗಣಿಸದಿರುವುದು ಉದ್ಯೋಗಾಕಾಂಕ್ಷಿಗಳು ಕಂಗಲಾಗುವಂತೆ ಮಾಡಿದೆ.

ಆಯೋಗವೇ ನೇಮಕಾತಿ ಸ್ಥಿತಿಗತಿಯ ಶ್ವೇತಪತ್ರದಲ್ಲಿ ಹೇಳಿರುವಂತೆ, 3421 ಹುದ್ದೆಗಳ ನೇಮಕ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಒಂದೊಂದು ನೇಮಕಗಳು ಒಂದೊಂದು ಸ್ಥಿತಿಯಲ್ಲಿವೆ. ಕಿರಿಯ ಸಹಾಯಕ/ದ್ವಿತೀಯ ದರ್ಜೆ ಸಹಾಯಕರ 1323 ಹುದ್ದೆಗಳು, ಲೋಕೋಪಯೋಗಿ ಇಲಾಖೆ ಸಹಾಯಕ/ಕಿರಿಯ ಇಂಜಿನಿಯರ್ 990 ಹುದ್ದೆಗಳು ಮತ್ತು ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳ ವಾರ್ಡನ್-140 ಹುದ್ದೆಗಳು, ಈ ಮೂರು ನೇಮಕಗಳು ಪರೀಕ್ಷೋತ್ತರ ಕಾರ್ಯ ಪಗ್ರತಿಯಲ್ಲಿರುವುದಾಗಿಯೂ, ಮೂರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ಚಿತ್ರಕಲಾ ಶಿಕ್ಷಕರು-230 ಹುದ್ದೆಗಳ ನೇಮಕಕ್ಕೆ ನ್ಯಾಯಾಲಯದಿಂದ ತಡೆಯಿದ್ದು, ಆಯುಷ್ ಇಲಾಖೆಯ ಔಷಧ ವಿತರಕರ-60 ಹುದ್ದೆಗಳ ಪ್ರಕ್ರಿಯೆ ಮೂಲ ದಾಖಲೆಗಳ ಪರಿಶೀಲನೆಯಲ್ಲಿದ್ದು, 2017ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ-106 ಹುದ್ದೆಗಳ ಪ್ರಕ್ರಿಯೆ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿರುವುದಾಗಿ ಪ್ರಕಟಿಸಿದೆ.

ಆಯೋಗ ಎಷ್ಟೇ ಪ್ರಾಮಾಣಿಕವಾಗಿ ದಕ್ಷತೆಯಿಂದ ಜೇಷ್ಠತೆಗೆ ಆದ್ಯತೆ ಕೊಟ್ಟು ನೇಮಕ ಮಾಡಿದರೂ ಆ ನೇಮಕಾತಿಯನ್ನು ಸರಿ ಇದೆ ಎಂದು ನಂಬುವಂತಹ ಸ್ಥಿತಿ ರಾಜ್ಯದ ಯುವ ಜನತೆಯಲ್ಲಿ ಕಣ್ಮರೆಯಾಗಿದ್ದು, ಇದಕ್ಕೆಲ್ಲ ಆಯೋಗದ ನೇಮಕದಲ್ಲಿ ನಡೆದಿರುವ ಅಕ್ರಮಗಳ ಇತಿಹಾಸವೇ ಪ್ರಮುಖ ಕಾರಣವಾಗಿದೆ. ನೇಮಕಗಳು "ಪಂಚವಾರ್ಷಿಕ ಯೋಜನೆ"ಯಂತಿದ್ದು ಯಾವುದು ನಿಗದಿತ ಕಾಲಮಿತಿಯಲ್ಲಿ ನಡೆಯದಾಗಿದ್ದು, ಕಳೆದೆರಡು ವರ್ಷಗಳಿಂದ ಆಯೋಗ ಯಾವುದೇ ಅಧಿಸೂಚನೆಯನ್ನು ಹೊರಡಿಸದಿರುವುದು ಯುವ ಜನತೆಯನ್ನು ಮತಷ್ಟು ಚಿಂತೆಗೀಡು ಮಾಡಿದೆ.

ಆದ್ದರಿಂದ ಸರ್ಕಾರವು ಆಯೋಗವನ್ನು ಮತಷ್ಟು ಬಲಿಷ್ಠಗೊಳಿಸಲು ಹೋಟಾ ಸಮಿತಿಯ ಶಿಫಾರಸ್ಸುಗಳನ್ನು ಯಥಾವತ್ತಾಗಿ ಜಾರಿಗೊಳಿಸುವ ಮೂಲಕ ರಾಜ್ಯದ ಉದ್ಯೋಗಾಕಾಂಕ್ಷಿಗಳಿಗೆ ಭರವಸೆ ಮೂಡಿಸುವಂತಹ ಕಾರ್ಯವನ್ನು ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಒದಗಿಸಲಾಗುವುದು.

(ಮುಂದು)

**(೮೮5) 12:50 15/09/2022 ಎಸ್‌ಪಿಆರ್/ಕೆಎಸ್**

**(ಸಭಾಪತಿಯವರ ಉಪಸ್ಥಿತಿ)**

**ಎ) ಅಂತರರಾಷ್ಟ್ರೀಯ, ರಾಷ್ಟ್ರೀಯ ಕ್ರೀಡಾ ಕೂಟಗಳಲ್ಲಿ ಕ್ರೀಡಾಪಟುಗಳು ಮಾದಕ ದ್ರವ್ಯಗಳಂತಹ ಉದ್ದೀಪನ ಮದ್ದು ಸೇವಿಸಿರುವ ಪ್ರಕರಣಗಳ ಕುರಿತು.**

* * *

**ಶ್ರೀ ಡಿ.ಎಸ್.ಅರುಣ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕ್ರೀಡಾ ಕೂಟಗಳಲ್ಲಿ ಗಾಂಜಾ, ಸ್ಟಿರಾಯ್ಡ್! ಕ್ರೀಡಾಂಗಣ ಶೌಚಾಲಯಗಳಲ್ಲಿ ರಾಶಿ ರಾಶಿ ಸಿರಂಜುಗಳ ಪತ್ತೆ, ಕದ್ದು ಮುಚ್ಚಿ ಸೇವನೆ ಮಾಡಲಾಗುತ್ತಿದ್ದ, ಗಾಂಜಾ ಮತ್ತು ಉದ್ದೀಪನ ಮದ್ದು (ಸ್ಟಿರಾಯ್ಡ್) ಬಳಕೆ ಈಗ ನೇರವಾಗಿ ಕ್ರೀಡಾಂಗಣ ತಲುಪಿದ್ದು, ರಾಜ್ಯದ ಕ್ರೀಡಾ ವಲಯವನ್ನು ಬೆಚ್ಚಿ ಬೀಳಿಸಿರುವ ಸಂಗತಿ ಕಳೆದವಾರ ಹಲವೆಡೆ ನಡೆದ ದಸರಾ ಕ್ರೀಡಾಕೂಟದ ಸಂದರ್ಭದಲ್ಲಿ ಬೆಳಕಿಗೆ ಬಂದಿರುತ್ತದೆ. ಅಂತರಾಷ್ಟ್ರೀಯ, ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಕ್ರೀಡಾಪಟುಗಳು ಮಾದಕ ದ್ರವ್ಯಗಳಂತಹ ಉದ್ದೀಪನ ಮದ್ದು ಸೇವಿಸಿ, ಸಿಕ್ಕಿಬಿದ್ದ ಪ್ರಕರಣಗಳು ಆಗಾಗ್ಗೆ ಕೇಳಿ ಬರುತ್ತಿರುವುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ. ಉದ್ದೀಪನ ಮದ್ದು ಸೇವನೆ ದೃಢಗೊಂಡ ಸಂದರ್ಭದಲ್ಲಿ ಅನೇಕ ಕ್ರೀಡಾಪಟುಗಳು

ತಾವು ಪಡೆದಂತಹ ಪದಕ ಮತ್ತು ಪ್ರಶಸ್ತಿಗಳನ್ನು ಸಹ ಕಳೆದುಕೊಂಡಿರುವುದು ಎಲ್ಲರ ತಿಳುವಳಿಕೆಯಲ್ಲಿದೆ. ಆದರೂ ಸಹ ಇಂತಹ ಅಪರಾಧಗಳು ಜರುಗುತ್ತಿರುವುದು ವಿಷಾದನೀಯ.

ಯಾವುದೇ ಕ್ರೀಡಾಪಟು ಉದ್ದೀಪನ ಮದ್ದನ್ನು ಮೊದಲ ಬಾರಿ ಬಳಕೆ ಮಾಡಿದರೆ, ಆತನಿಗೆ 6 ತಿಂಗಳವರೆಗೂ ಶಿಕ್ಷೆ ವಿಧಿಸಲಾಗುತ್ತದೆ. 2ನೇ ಪತ್ತೆಯೊಂದಿಗೆ 2 ವರ್ಷದವರೆಗೂ ಮತ್ತು 3ನೇ ಬಾರಿಗೆ ಕ್ರೀಡಾಪಟುವನ್ನು ಜೀವನ ಪರ್ಯಂತ ಕ್ರೀಡಾ ಸ್ಪರ್ಧೆಗಳಿಂದ ಅಮಾನತ್ತುಗೊಳಿಸಲಾಗುತ್ತದೆ. ಇಷ್ಟಲ್ಲದೇ, ಕ್ರೀಡಾಪಟುವಿನ ಜೊತೆಗೆ ಆತನ ತರಬೇತುದಾರ ಮತ್ತು ಕ್ರೀಡಾಪಟುವನ್ನು ಪರೀಕ್ಷಿಸಿದ ವೈದ್ಯರಿಗೂ ಶಿಕ್ಷೆಯನ್ನು ನೀಡಲಾಗುತ್ತದೆ. ಹೀಗಿದ್ದರೂ ಯಾವುದೇ ಭಯವಿಲ್ಲದೇ, ಸ್ಟಿರಾಯ್ಡ್ ಸೇವಿಸಿ, ಗೆಲ್ಲಲೇಬೇಕೆಂಬ ಹಠಕ್ಕೆ ಬಿದ್ದು, ಆಟಕ್ಕೆ ಇಳಿದು ಇಂತಹ ಕೃತ್ಯ ಎಸಗುತ್ತಿರುವುದು ಶೋಚನೀಯವಾದುದಾಗಿರುತ್ತದೆ. ಜಿಲ್ಲಾ, ರಾಜ್ಯ ಮತ್ತು ವಿಶ್ವವಿದ್ಯಾಲಯಗಳ ಮಟ್ಟದ ಕ್ರೀಡಾಕೂಟಗಳಲ್ಲಿ ಡೋಪಿಂಗ್ ಪರೀಕ್ಷೆ ನಡೆಯದಿರುವ ಕಾರಣ ಅದರ ಬಳಕೆ ಅತಿಯಾಗುತ್ತಿದೆ. ಗಾಂಜಾ ಮತ್ತು ಸ್ಟಿರಾಯ್ಡ್ ಸೇವಿಸಿದವರನ್ನು ಮೇಲ್ನೋಟಕ್ಕೆ ಗುರುತಿಸಲು ಸಾಧ್ಯವಾಗದ ಕಾರಣ ಇಂತಹ ಅವಾಂತರಗಳಿಗೆ ಅವಕಾಶವಾಗಿದೆ. ಇಂತಹ ದುಷ್ಕೃತ್ಯದಿಂದ ಸರಿಯಾಗಿ ಛಲದಿಂದ ಸ್ಪರ್ಧೆ ಮಾಡುವ ಈ ದುಷ್ಕೃತ್ಯ ಕುರಿತು ಅರಿವಿಲ್ಲದ ಗ್ರಾಮೀಣ ಭಾಗದ ಕ್ರೀಡಾಪಟುಗಳಿಗೆ ಅನ್ಯಾಯವಾಗುತ್ತಿದೆ.

ರಾಷ್ಟ್ರಮಟ್ಟದಲ್ಲಿ ಒಬ್ಬ ಕ್ರೀಡಾಪಟು ಭಾಗವಹಿಸಿ ಪದಕ ಗಳಿಸುವಲ್ಲಿ ಯಶಸ್ವಿಯಾದರೆ, ಕ್ರೀಡಾ ಕೋಟಾದಡಿ ಸರ್ಕಾರಿ ಉದ್ಯೋಗ ಗಿಟ್ಟಿಸಿಕೊಳ್ಳಬಹುದೆನ್ನುವ ಉದ್ದೇಶದಿಂದಲೇ ಯುವ ಸಮೂಹ ಇಂತಹ ಕೃತ್ಯಗಳಲ್ಲಿ ಸಕ್ರಿಯವಾಗಿರುವುದು ತಿಳಿದುಬಂದಿದ್ದು ಇಂತಹದ್ದಕ್ಕೆ ಸರ್ಕಾರ ಕೂಡಲೇ ಬಿಗಿಯಾದ ಕ್ರಮಗಳನ್ನು ಕೈಗೊಳ್ಳಬೇಕು; ವಾಮಮಾರ್ಗಕ್ಕೆ ಅವಕಾಶವಿಲ್ಲದಂತಹ ಕ್ರೀಡಾ ಚಟುವಟಿಕೆಗಳು ನಡೆಯುವಂತಾಗಬೇಕು. ಈ ನಿಟ್ಟಿನಲ್ಲಿ ಕ್ರೀಡಾ ಸಚಿವರು ಹಾಗೂ ರಾಜ್ಯ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕೆಂದು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ರೇಷ್ಮೆ, ಯುವಜನ ಸೇವೆ, ಕ್ರೀಡಾ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಏ) ಬೆಂಗಳೂರು ನಗರ ಮತ್ತು ಸುತ್ತಮುತ್ತ ಪ್ರದೇಶಗಳ ರಾಜಕಾಲುವೆಗಳ ಒತ್ತುವರಿ ಕುರಿತು**

* * *

**ಶ್ರೀ ಹೆಚ್.ಎಸ್.ಗೋಪಿನಾಥ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರ ಜಿಲ್ಲೆಯ ಹಲವು ಭಾಗಗಳಲ್ಲಿ ಕಳೆದ ಎರಡು ವಾರಗಳ ಹಿಂದೆ ಸುರಿದ ಭಾರಿ ಮಳೆಯಿಂದ ಬೆಂಗಳೂರಿನ ನಾಗರೀಕರು ಹೈರಾಣಾಗಿದ್ದರು. ಈ ಅವಾಂತಗಳಂದ ಹಾಗೂ ಭವಿಷ್ಯದಲ್ಲಿ ಈ ಸಮಸ್ಯೆಗಳು ಮರುಕಳಿಸದಂತೆ ಎಚ್ಚರವಹಿಸಲು ಸರ್ಕಾರವು ರಾಜಕಾಲುವೆ ಒತ್ತುವರಿ ತೆರವುಗೊಳಿಸುವ ಅತ್ಯಂತ ಅವಶ್ಯ ಹಾಗೂ ಅನಿವಾರ್ಯ ಕಾರ್ಯ ಕೈಗೊಳ್ಳಲು ಸರ್ಕಾರ ಸೂಚಿಸಿತು. ಅದರಂತೆ, ಬಿ.ಬಿ.ಎಂ.ಪಿ.ಯ ಅಧಿಕಾರಿಗಳು ಹಲವು ಭಾಗಗಳಲ್ಲಿ ಒತ್ತುವರಿ ಕಾರ್ಯವನ್ನು ಪ್ರಾರಂಭಿಸಿದರು. 7 ಕಟ್ಟಡಗಳು, 4 ಕಾಂಪೌಂಡ್‌ಗಳು ಹಾಗೂ ಹಲವು ಶೆಡ್‌ಗಳನ್ನು ಇನ್ನಿತರೆ ಮನೆಗಳನ್ನು ನೆಲಸಮಗೊಳಿಸಿದರು.

ಈ ಹಿಂದೆ ರಾಜಕಾಲುವೆಗಳ ಅಸಮರ್ಪಕವಾದ ದಾಖಲೆಗಳು, ನೀಲಿ ನಕ್ಷೆ ಸರಿಯಾಗಿದ್ದರೂ ಕೂಡ ಅದರ ಮೇಲೆ ಅನಧಿಕೃತವಾಗಿ ಅಪಾರ್ಟ್‌ಮೆಂಟ್ ಕಟ್ಟಡಗಳನ್ನು ನಿರ್ಮಿಸಲು ಅವಕಾಶ ಕೊಟ್ಟು ಸಹಕರಿಸಿದ ಅಧಿಕಾರಿಗಳ ವಿರುದ್ಧ ತೆಗೆದುಕೊಂಡ ಕ್ರಮಗಳೇನು? ನಿನ್ನೆಯ ಪತ್ರಿಕಾ ಪ್ರಕಟಣೆಯೊಂದರಲ್ಲಿ ಮಹದೇವಪುರ ವಲಯಗಳಲ್ಲಿ ಒತ್ತುವರಿ ಕಾರ್ಯಗಳು ನಡೆಯುತ್ತಿದ್ದು, ಹಲವು ಮನೆಗಳು ಹಾಗೂ ಅಪಾರ್ಟ್‌ಮೆಂಟ್‌ಗಳು ಮತ್ತು ಕಾಂಪೌಂಡ್‌ಗಳು ನೆಲಸಮಗೊಂಡಿರುವುದು ಕಂಡು ಬಂದಿರುತ್ತದೆ. ಆದರೆ, ಅತಿದೊಡ್ಡ ಟೆಕ್ ಪಾರ್ಕ್‌ಗಳನ್ನು ನಿರ್ಲಕ್ಷಿಸಿರುವುದು ಪ್ರಶ್ನೆಯಾಗಿ

ಉಳಿದಿದೆ. ರಾಜಕಾಲುವೆಗಳನ್ನು ಒತ್ತುವರಿ ಮಾಡಿಕೊಂಡು ಹಲವು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಮನೆ ಮತ್ತು ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸಿ ಸಾರ್ವಜನಿಕರಿಗೆ ಮಾರಾಟ ಮಾಡುವ ಹಲವು ಡೆವಲಪರ್‌ಗಳ ವಿರುದ್ಧ ಸರ್ಕಾರವು ಈ ಹಿಂದಿನಿಂದಲೂ ಅವರ ವಿರುದ್ಧ ಯಾವುದೇ ರೀತಿ ಕ್ರಮ ಜರುಗಿಸಿರುವುದಿಲ್ಲ.

ಸಾರ್ವಜನಿಕರು ಮನೆ ಖರೀದಿಸುವಾಗ ಎಲ್ಲಾ ದಾಖಲೆಗಳನ್ನು ಒದಗಿಸಿ ಗೃಹ ಸಾಲವನ್ನು ಪಡೆದಿರುತ್ತಾರೆ. ಆದರೆ, ಕಟ್ಟಡಗಳ ಒತ್ತುವರಿ ಎಂದು ಬಿ.ಬಿ.ಎಂ.ಪಿ. ಅಧಿಕಾರಿಗಳ ನೆಲಸಮಗೊಳಿಸಿದರೆ ಗೃಹ ಸಾಲ ಪಡೆದ ಸಾಲಗಾರರು/ವಾಸಗಾರರು ಏನು ಮಾಡುವುದು? ಈ ನಡೆಗಳಿಂದ ಜನ ಸಾಮಾನ್ಯರಲ್ಲಿ ಗೊಂದಲಮಯವಾದ ಪರಿಸ್ಥಿತಿ ಸೃಷ್ಟಿಯಾಗಿದ್ದು, ಬಡ ಹಾಗೂ ಮಧ್ಯಮ ವರ್ಗದ ಜನ ಅತಂತ್ರ ಸ್ಥಿತಿ ತಲುಪಿದ್ದಾರೆ. ಅನೇಕ ಸುಪ್ರಸಿದ್ಧ ಹಾಗೂ ಶ್ರೀಮಂತ ಟೆಕ್ ಪಾರ್ಕ್‌ಗಳು, ಹೆಸರಾಂತ ಆಸ್ಪತ್ರೆಗಳು ರಾಜಕಾಲುವೆಗಳನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ಆದರೆ, ಈ ಮಧ್ಯೆ ಅನೇಕ ಮಧ್ಯಮವರ್ಗದ ಸಾರ್ವಜನಿಕರು ಮನೆಗಳನ್ನು ಸುಳ್ಳು ದಾಖಲೆ ಸೃಷ್ಟಿ ಮಾಡಿ ನಿರ್ಮಿಸಿದ ಅಪಾರ್ಟ್‌ಮೆಂಟ್ ಮತ್ತು ಮನೆಗಳನ್ನು ಖರೀದಿಸಿರುತ್ತಾರೆ. ಇದನ್ನೆಲ್ಲ ಮನಗಂಡು ಸರ್ಕಾರವು ತುರ್ತಾಗಿ ಒಂದು ಪರ್ಯಾಯ ವ್ಯವಸ್ಥೆ ಕಂಡುಕೊಂಡು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸಹಕರಿಸಿದ ಅಧಿಕಾರಿಗಳ ವಿರುದ್ಧ ಹಾಗೂ ಡೆವಲಪರ್‌ಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ವಿನಂತಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಮುಖ್ಯಮಂತ್ರಿಗಳಿಂದ ಉತ್ತರವನ್ನು ಒದಗಿಸಲಾಗುವುದು.

**೦೫. ನಿಯಮ ೬೮ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ**

**ವಿಷಯ:- ರಾಜ್ಯದಲ್ಲಿ ಇತ್ತೀಚೆಗೆ ಸುರಿಯುತ್ತಿರುವ ಮಳೆಯಿಂದಾಗಿ ಬೆಂಗಳೂರು ನಗರ ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಪ್ರವಾಹ ಭೀತಿಯನ್ನು ಎದುರಿಸುತ್ತಿದ್ದು, ರಾಜ್ಯದ ಹೆದ್ದಾರಿ ಮತ್ತು ರಸ್ತೆಗಳು ಕೊಚ್ಚಿಹೋಗಿದ್ದು, ಕೆರೆ ಕೋಡಿಗಳು ಒಡೆದು ಅಪಾರ ಹಾನಿಯುಂಟಾಗಿ ಜನರು ಸಂಕಷ್ಟಕ್ಕೆ ಒಳಗಾಗಿರುವ ಬಗ್ಗೆ**

* * *

**ಶ್ರೀ ಎಸ್.ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳು – ೬೮ ರಡಿ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಮಾತನಾಡಲು ನನಗೆ ಅವಕಾಶ ನೀಡಿದ್ದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಇದು ಬಹಳ ಮಹತ್ವಪೂರ್ಣವಾದ ವಿಚಾರವಾಗಿದೆ. ಇತ್ತೀಚೆಗೆ, ರಾಜ್ಯದಲ್ಲಿ ಸುರಿದ ಅಗಾಧವಾದ ಮಳೆಯಿಂದಾಗಿ ಬೆಂಗಳೂರು ನಗರವನ್ನೊಳಗೊಂಡಂತೆ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಪ್ರವಾಹ ಭೀತಿ ಎದುರಾಗಿದೆ. ಈ ಸಮಸ್ಯೆಯಿಂದಾಗಿ ಜನರು ಸಂಕಷ್ಟಕ್ಕೆ ಒಳಗಾಗಿರುವ ವಿಚಾರವನ್ನು ಈ ಸದನದಲ್ಲಿ ಪ್ರಸ್ತಾಪಿಸಲು ನನಗೆ ಅವಕಾಶ ದೊರೆತಿದೆ. ನಾವು ಯಾರೂ ಸಹ ನಿರೀಕ್ಷಿಸಿದ ರೀತಿಯಲ್ಲಿ ವರುಣನ ಅವಕೃಪೆಯಾಗಿದೆ. ಇದರ ಪರಿಣಾಮಗಳೂ ಸಹ ಅತ್ಯಂತ ಭೀಕರವಾಗಿ ಆಗಿರುವುದನ್ನು ನಾವುಗಳೆಲ್ಲರೂ ಇವತ್ತಿನ ದಿವಸ ನೋಡುತ್ತಿದ್ದೇವೆ; ಅದಕ್ಕಿಂತಲೂ ಹೆಚ್ಚಾಗಿ ಅದನ್ನು ಅನುಭವಿಸುತ್ತಿದ್ದೇವೆ. ರಾಜ್ಯದ ಉದ್ದಗಲಕ್ಕೂ ಅಂದರೆ, ಬೀದರ್ ಜಿಲ್ಲೆಯಿಂದ ಹಿಡಿದು ಮಡಿಕೇರಿ ಜಿಲ್ಲೆಯವರೆಗೆ ಎಲ್ಲಾ ಜಿಲ್ಲೆಗಳಲ್ಲಿಯೂ ಸಹ ಹೆಚ್ಚು ಮಳೆಯಾಗಿದೆ. ಎಲ್ಲಿಯೂ ಸಹ ಮಳೆ ಇಲ್ಲ, ಮಳೆ ಕಡಿಮೆಯಾಯಿತು, ಯಾವುದೇ ಜಲಾಶಯಗಳು ಇನ್ನೂ ಭರ್ತಿಯಾಗಿಲ್ಲ ಎನ್ನುವ ಸನ್ನಿವೇಶವೇ ಇಲ್ಲದಂತಾಗಿದೆ. ನಿರೀಕ್ಷೆಗೂ ಮೀರಿದ ಪ್ರಮಾಣದಲ್ಲಿ ಮಳೆಯಾಗಿದೆ.

**(ಈ ಹಂತದಲ್ಲಿ ವೈಸ್ ಚೇರ್ಮನ್‌ರಾದ ಶ್ರೀಮತಿ ಭಾರತಿ ಶೆಟ್ಟಿಯವರು ಸಭಾಪತಿಯವರ ಪೀಠವನ್ನು ಅಲಂಕರಿಸಿದರು)**

ಈ ಬಾರಿ ನಮಗೆಲ್ಲಾ ಬೇಸಿಗೆ ಕಾಲದ ಅನುಭವವೇ ಆಗಲಿಲ್ಲ. ಬೇಸಿಗೆಯ 15-20 ದಿನಗಳನ್ನು ಹೊರತುಪಡಿಸಿದರೆ, ಆಗಲೂ ಸಹ ಧಾರಾಕಾರವಾಗಿ ಮಳೆ ಸುರಿಯಿತು. ಮಳೆಯ ಪ್ರಾರಂಭದ ದಿನಗಳಲ್ಲಿ ನಾವು ಬಹಳವಾಗಿ ಸಂತೋಷಪಟ್ಟೆವು. ಮಳೆಯಿಂದಾಗಿ ರಾಜ್ಯದ ಅದರಲ್ಲೂ ವಿಶೇಷವಾಗಿ ರೈತರ ಆರ್ಥಿಕ ಮತ್ತು ಕುಡಿಯುವ ನೀರಿನ ಪರಿಸ್ಥಿತಿಗಳು ಬದಲಾದವು. ಮಳೆಯಿಂದಾಗಿ ರೈತರ ಕೃಷಿ, ಬೆಳೆ ಇತ್ಯಾದಿಗಳು ವೃದ್ಧಿಗೊಂಡು, ಬಹಳವಾಗಿ ಅನುಕೂಲವಾಗುತ್ತದೆ ಎನ್ನುವ ಭಾವನೆಯು ನಮಗೆ ಇತ್ತು. ಆದರೆ ಅತಿಯಾದರೆ ಅಮೃತವೂ ಸಹ ವಿಷಯವಾಗಿ ಪರಿಣಿಮಿಸುತ್ತದೆ. ಇದಕ್ಕೆ ಉದಾಹರಣೆಯಾಗಿ ಇವತ್ತಿನ ದಿವಸ ಇಂತಹ ಪರಿಸ್ಥಿತಿ ನಮಗೆ ಬಂದೊದಗಿದೆ. ಪ್ರತಿನಿತ್ಯವೂ ಬೆಳಗ್ಗೆ ಟಿ.ವಿ. ಹಾಗೂ ಇನ್ನಿತರೆ ವಿದ್ಯುನ್ಮಾನ ಮಾಧ್ಯಮಗಳಲ್ಲಿ "ತತ್ತರಿಸಿದ ಬೆಂಗಳೂರು"; "ತತ್ತರಿಸಿದ ರಾಮನಗರ" ಎಂಬ ಸುದ್ದಿಗಳು ಬಿತ್ತರಗೊಳ್ಳುತ್ತವೆ. ಇಂತಹ ಸುದ್ದಿಗಳನ್ನು ನೋಡಿದಾಗ, ಎಲ್ಲಿಯೋ ಒಂದು ಕಡೆ ನಾವು ಭಯಭೀತರಾಗುವಂತಹ ವಾತಾವರಣ ಸೃಷ್ಟಿಯಾಗುತ್ತಿದೆ. ಜಲಪ್ರಳಯ ಸಂಭವಿಸುತ್ತದೆಯೋ ಅಥವಾ ಇನ್ನೇನೋ ಘಟಿಸುತ್ತದೆಯೋ ಎನ್ನುವಂತಹ ಪರಿಸ್ಥಿತಿಯನ್ನು ನಾವುಗಳೆಲ್ಲರೂ ನೋಡಿದ್ದೇವೆ ಹಾಗೂ ಅನುಭವಿಸಿಯೂ ಸಹ ಇದ್ದೇವೆ. ನಾನು ಇಡೀ ರಾಜ್ಯದ ಪರಿಸ್ಥಿತಿಯನ್ನು ಪ್ರಸ್ತಾಪಿಸದೇ, ಈ ಸದನದ ಮುಖೇನ ಕೇವಲ ನಾನು ಪ್ರತ್ಯಕ್ಷವಾಗಿ ನೋಡಿದ ಜನರ ಸಂಕಷ್ಟದ ಬಗ್ಗೆ ಮಾತ್ರವೇ ಒಂದಿಷ್ಟು ಬೆಳಕನ್ನು ಚೆಲ್ಲುವುದಕ್ಕೆ ಪ್ರಯತ್ನಿಸುತ್ತೇನೆ. ನಾನು ವಿಶೇಷವಾಗಿ ರಾಮನಗರ ಜಿಲ್ಲೆಗೆ ಸಂಬಂಧಪಟ್ಟಂತೆ ಮಾತ್ರವೇ ಕೆಲವು ವಿಷಯಗಳನ್ನು ಪ್ರಸ್ತಾಪಿಸಬಯಸುತ್ತೇನೆ. ರಾಮನಗರ ಜಿಲ್ಲೆಯು ಮೂಲತಃ ರೇಷ್ಮೆ ಮತ್ತು ಹೈನುಗಾರಿಕೆಯನ್ನು ಅವಲಂಬಿಸಿದೆ. ರಾಮನಗರ ಜಿಲ್ಲೆಯು ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಧಾರಿತ ಕೃಷಿಯನ್ನು ಅವಲಂಬಿಸಿದೆ. ಅಲ್ಲಿನ ಒಂದಿಷ್ಟು ಕೆರೆ-ಕಟ್ಟೆಗಳ ಮುಖೇನ ನೀರಾವರಿಯನ್ನು ಆಶ್ರಯಿಸಲಾಗಿದೆ. ಈ ಬಾರಿ ರಾಮನಗರ ಜಿಲ್ಲೆಯಲ್ಲಿ ಮಳೆಯಾಯಿತು. ಈ ಸಂಗತಿಯನ್ನು ನಾವೆಲ್ಲಾ ಪತ್ರಿಕಾ ಹಾಗೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ

ನೋಡಿದ್ದೇವೆ. ನಾನು ಆಗಲೇ ಪ್ರಸ್ತಾಪಿಸಿದಂತೆ ಮಾಧ್ಯಮಗಳಲ್ಲಿ "ತತ್ತರಿಸಿದ ರಾಮನಗರ" ಎಂಬುದಾಗಿ ವಿಶ್ಲೇಷಣೆ ಮಾಡಲಾಯಿತು. ಇತ್ತೀಚೆಗೆ ಸುರಿದ ಭಾರಿ ಪ್ರಮಾಣದ ಮಳೆಯು ಇಡೀಯಾಗಿ ರಾಮನಗರ ಜಿಲ್ಲೆಯನ್ನೇ ಅದರಲ್ಲೂ ವಿಶೇಷವಾಗಿ ರಾಮನಗರ ಪಟ್ಟಣ, ರಾಮನಗರ ನಗರಸಭೆ ಮತ್ತು ಚನ್ನಪಟ್ಟಣ ನಗರಸಭೆಯ ವ್ಯಾಪ್ತಿಗಳಲ್ಲಿ ಅಲ್ಲಿನ ಜನ ಜೀವನವನ್ನು ಸಂಪೂರ್ಣವಾಗಿ ಅಸ್ತವ್ಯಸ್ಥಗೊಳಿಸಿತು. ಈ ಸಂಗತಿಯನ್ನು ನಾವುಗಳು ನೋಡಿದ್ದೇವೆ ಹಾಗೂ ಈಗಲೂ ಸಹ ನೋಡುತ್ತಿದ್ದೇವೆ. ರಾಮನಗರ ಜಿಲ್ಲೆಯಲ್ಲಿ ಮಳೆಯಾದ ಸಂದರ್ಭದಲ್ಲಿ, ಅಲ್ಲಿನ 3-4 ಕಿಲೋಮೀಟರ್‌ಗಳ ಅಂತರದಲ್ಲಿರುವ ಕೇತೋಹಳ್ಳಿ ಕೆರೆಯು ಭರ್ತಿಯಾಯಿತು. ನಿರೀಕ್ಷೆಗೂ ಮೀರಿ, ಆ ಕೆರೆಯ ಕೋಡಿಯೂ ಸಹ ಒಡೆಯಿತು.

(ಮುಂದು)

886/16-09-2022/1-00/ಬಿಕೆಪಿ- ಕೆ.ಎಸ್

**ಶ್ರೀ ಎಸ್. ರವಿ(ಮುಂದು..)**

ಭರ್ತಿಯಾದ ಕೇತುಹಳ್ಳಿ ಕೆರೆ ನಿರೀಕ್ಷೆಗೂ ಮೀರಿ ಕೋಡಿ ಬಿದ್ದು ನೀರು ಹೋಯಿತು. ಅದರ ಮುಖೇನ, ಸಂಪರ್ಕವೇ ಕಡಿದು ಹೋಯಿತು. ಆ ಕೇತುಹಳ್ಳಿ ಕೆರೆ ತುಂಬಿ ಹೊರ ಬಂದ ನೀರು ಭಕ್ಷಿಕೆರೆ ಎಂದು ಹೇಳಿ ರಾಮನಗರ ನಗರ ಸಭೆಗೆ ಹೊಂದಿಕೊಂಡಿರತಕ್ಕಂತಹ ಕೆರೆಗೆ ಆ ಕೋಡಿ ಬಿದ್ದ ನೀರು ಬಂತು. ಆ ಕೋಡಿ ನೀರಿನಿಂದ ಆ ಭಕ್ಷಿಕೆರೆ ತುಂಬಿ ಭಕ್ಷಿಕೆರೆ ಸಾಮರ್ಥ್ಯಕ್ಕೂ ಮೀರಿ ಆ ನೀರಿನ ಒತ್ತಡವನ್ನು ತಾಳಲಾರದೇ ಭಕ್ಷಿಕೆರೆ ಹೊಡೆದು ಹೋಯಿತು. ಭಕ್ಷಿಕೆರೆ ಹೊಡೆದಾಗ ಅದರ ನೀರು ಸಂಪೂರ್ಣವಾಗಿ ರಾಮನಗರ ಟೌನ್‌ನೊಳಗಡೆ ಪ್ರವೇಶ ಮಾಡಿತು. ದುರದೃಷ್ಟವಶಾತ್ ರಾಮನಗರ ಪಟ್ಟಣದ ಒಳಗಡೆ ಆ ರಾಜ ಕಾಲುವೆ, ಭಕ್ಷಿ ಕೆರೆಯ ಕೋಡಿ ನೀರನ್ನು ಅರ್ಕಾವತಿ ನದಿಗೆ ಸಂಪರ್ಕಿಸುವಂತಹದ್ದು. ಆ ಸಂಪೂರ್ಣ ನೀರು ಎಲ್ಲವೂ ಹೋಗಬೇಕೆಂದರೆ, ರಾಮನಗರದ ಮಧ್ಯ ಭಾಗದಲ್ಲಿರುವ ರಾಜ ಕಾಲುವೆಯ ಮೂಲಕವೇ ಹೋಗಬೇಕು. ಆ ಕೆರೆ ಹೊಡೆದಂತಹ ನೀರು ಸಂಪೂರ್ಣವಾಗಿ ರಾಮನಗರದ ಮಧ್ಯದಲ್ಲಿ ಹರಿಯುವಾಗ ರಾಮನಗರ ಪಟ್ಟಣವೇ ಎರಡು ಭಾಗವಾಯಿತು. ಬಹುತೇಕ ಎಲ್ಲರೂ ಕೂಡ ರಾಮನಗರ ಪಟ್ಟದ ಮೂಲಕವೇ ಹಾದು

ಹೋಗಿರುತ್ತಾರೆ. ರಾಮನಗರ-ಮೈಸೂರು ರಸ್ತೆಯಲ್ಲಿ ಸಂಚಾರ ಮಾಡತಕ್ಕವರು ಸಂಪೂರ್ಣವಾಗಿ ಬಹುತೇಕವಾಗಿ ಎಲ್ಲರೂ ರಾಮನಗರವನ್ನು ನೋಡಿರುತ್ತಾರೆ. ಇಲ್ಲಿ ಬೆಂಗಳೂರಿನಿಂದ ಹೊರಟು ಹೋಗುವಾಗ ಎಡಗಡೆ ಇರುವುದು ಹಳೆ ರಾಮನಗರ ಪಟ್ಟಣ, ಬಲಗಡೆ ಇರುವಂತಹದ್ದು, ಐಜೂರು ಭಾಗಗಳೆಲ್ಲವೂ ಹೊಸದಾಗಿ ಅಭಿವೃದ್ಧಿ ಆಗತಕ್ಕಂತಹ ರಾಮನಗರ. ಅದು ಸ್ವಲ್ಪ ಎತ್ತರದ ಪ್ರದೇಶದಲ್ಲಿದೆ. ಇದು ಸ್ವಲ್ಪ ಕೆಳಗಡೆ ಪ್ರದೇಶದಲ್ಲಿದೆ.

ಮಾನ್ಯ ಸಭಾಪತಿಯವರೆ, ಭಕ್ಷಿಕೆರೆ ಹೊಡೆದು ಬಂದಿರುವುದಕ್ಕೆ ಮಳೆಯ ಪ್ರಮಾಣ ಎಷ್ಟು ಇತ್ತು ಎಂದರೆ 3-4 ದಿನಗಳಿಂದ ಸತತವಾಗಿ ಮಳೆ ಬಂದಿತ್ತು. ಅವತ್ತಿನ ದಿವಸ ಬಂದಂತಹ ಮಳೆ 19 ಸೆಂಟಿ ಮೀಟರ್ ಮಳೆಯಾಗಿತ್ತು. ಕೊಡುಗು ಮತ್ತು ಮಲೆನಾಡು ಪ್ರದೇಶಗಳಲ್ಲೋ ಈ ರೀತಿ ಮಳೆಯಾಗುವುದು ಅಲ್ಲಿನ ಜನರಿಗೆ ಹೆಚ್ಚು ಮಳೆ ಏನಲ್ಲ. ಆದರೆ, ನಮ್ಮ ರಾಮನಗರ ಜಿಲ್ಲೆಗೆ 19-20 ಸೆಂಟಿ ಮೀಟರ್ ಮಳೆ ಎಂದರೆ ಅಗಾಧವಾದಂತಹ ಮಳೆ. ಆ ಮಳೆಯನ್ನು ತಡೆದುಕೊಳ್ಳುವಂತಹ ಸಾಮರ್ಥ್ಯ ನಮಗೆ ಇಲ್ಲ. ಅವತ್ತಿನ ದಿವಸ 19 ಸೆಂಟಿ ಮೀಟರ್‌ಗಿಂತಲೂ ಅಧಿಕ ಮಳೆಯಾಗಿತ್ತು. ಇಡಿ ರಾಮನಗರ ಪಟ್ಟಣದ ಜನರಿಗೆ ಸಂಪರ್ಕ ಕಡಿದು ಹೋಯಿತು. ರೈಲ್ವೇ ಸ್ಟೇಷನ್ ಮುಂದೆ underpass ಒಂದು ಇತ್ತು. ಅದು ಎರಡು ರಾಮನಗರವನ್ನು ಅಂದರೆ, ಹಳೆ ರಾಮನಗರ, ಹೊಸ ರಾಮನಗರಕ್ಕೆ ಸಂಪರ್ಕ ಕಲ್ಪಿಸುವಲ್ಲಿ ಏನು underpass ಇತ್ತು, ಅದು ಸಂಪೂರ್ಣವಾಗಿ ಮುಚ್ಚಿ ಹೋಯಿತು. ಅದರಲ್ಲಿ ಒಂದು ಬಸ್, ಎರಡು ಕಾರುಗಳು, ಒಂದೆರಡು ಆಟೋಗಳು ಮುಳುಗಿ, ಅದರಲ್ಲಿ ಇದ್ದಂತಹ ಜನರನ್ನು ಅಲ್ಲಿನ ಸ್ಥಳೀಯ ಜನರು ಸಕಾಲಕ್ಕೆ ನೆರವಿಗೆ ಧಾವಿಸಿ, ಹಗ್ಗವನ್ನು ಕಟ್ಟಿ ಆ ಜನರನ್ನು ಪ್ರಾಣಾಪಾಯದಿಂದ ಪಾರು ಮಾಡಿದರು. ಅವರ ಜೊತೆಗೆ ಅಗ್ನಿಶಾಮಕ ದಳದವರು ಮತ್ತು ಪೊಲೀಸರ ಪಾತ್ರವನ್ನು ಕೂಡ ನಾವು ಮೆಚ್ಚುಗೆಯನ್ನು ವ್ಯಕ್ತ ಮಾಡಬೇಕಾಗುತ್ತದೆ. ಆ 5-10 ನಿಮಿಷಗಳಲ್ಲಿ ಅವರ ನೆರವಿಗೆ ಹೋಗಲಿಲ್ಲವೆಂದರೆ ಅ underpass ನಲ್ಲಿಯೇ 15-20 ಜನರು ಪ್ರಾಣವನ್ನು ಕಳೆದುಕೊಳ್ಳಬೇಕಾಗಿತ್ತು. ನೀವು ಒಂದು ಕಡೆಯಿಂದ ಇನ್ನೊಂದು ಕಡೆಗೆ ರಾಮನಗರಕ್ಕೆ ಹೋಗಲಿಕ್ಕೆ ಆಗದೇ ಇರುವಂತಹ ಪರಿಸ್ಥಿತಿ ಆ underpass ನಿಂದ ನಿರ್ಮಾಣವಾಗಿತ್ತು. ಈ

ರೀತಿಯಲ್ಲಿ ತೊಂದರೆಯಾಗಿರುವುದರಿಂದ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗ ಬೇಕೆಂದರೂ ಹೋಗಲಿಕ್ಕೆ ಆಗದೇ ಇರುವಂತಹ ಪರಸ್ಥಿತಿ ನಿರ್ಮಾಣ ಆಯಿತು. ರಾತ್ರಿ ಅಂದರೆ ಸರಿ ರಾತ್ರಿ. ಹೊಡೆದು ಹೋದಂತಹ ಕೆರೆಯ ನೀರು ರಾತ್ರಿ ಏನು ನುಗ್ಗಿತು, ನಾಲ್ಕೂವರೆ–ಐದು ಗಂಟೆಗೆ ರಾಮನಗರ ಪಟ್ಟಣದ ಒಳಗಡೆ ಪ್ರವೇಶ ಆಯಿತು. ಜನರೆಲ್ಲರೂ ಮನೆಯಲ್ಲಿ ಮಲಗಿದ್ದಂತಹವರು ಕಣ್ಣು ಬಿಟ್ಟರು. ಬೆಳಗ್ಗೆ 5–6 ಗಂಟೆಗೆ ಎದ್ದು ಮನೆಯಿಂದ ಹೊರಗಡೆ ಬಂದು ನೋಡುತ್ತಾರೆ, ಅವರ ಮನೆ ಬಾಗಿಲುಗಳಲ್ಲಿ ನೀರು. ಮನೆಗಳ ಒಳಗಡೆ ನೀರು ಪ್ರವೇಶ ಆಗಲಿಕ್ಕೆ ಪ್ರಾರಂಭವಾಯಿತು. ಅಂದರೆ ಸುರ್ಯೋದಯ ಆಗುವ ಮುನ್ನ ಆಯಿತು. ಅದು ನಮ್ಮ ಅದೃಷ್ಟ. ಈ ಸಂದರ್ಭ, ಸನ್ನಿವೇಶವನ್ನು ಕಲ್ಪಿಸಿಕೊಳ್ಳುವಂತಹ ಸಂದರ್ಭ ಎಂದರೆ ಐದೂವರೆ–ಆರು ಗಂಟೆ ಸುಮಾರಿಗೆ ಈ ಮನೆಗಳಗೆ ನೀರು ನುಗ್ಗಲಿಕ್ಕೆ ಪ್ರಾರಂಭವಾಯಿತು. ಅದು ಅರ್ಕೇಶ್ವರ ನಗರ, ಜಿಯಾವುಲ್ಲಾ ಬ್ಲಾಕ್, ಟಿಪ್ಪು ನಗರ, ಈ ರೀತಿಯಲ್ಲಿ ಯಾವ ತಗ್ಗು ಪ್ರದೇಶಗಳು ರಾಮನಗರ ಪಟ್ಟಣದಲ್ಲಿದ್ದವೋ ಆ ಪ್ರದೇಶಗಳಗೆ ನೀರು ನುಗ್ಗಲಿಕ್ಕೆ ಪ್ರಾರಂಭವಾದದ್ದು, ಅದೃಷ್ಟವಶಾತ್ ಬೆಳಗ್ಗೆ ಸೂರ್ಯೋದಯವಾಗುವ ಸಂದರ್ಭದಲ್ಲಿ ಆ ನೀರಿನ ಏರಿಕೆಯ ಪ್ರಮಾಣ ಐದೂವರೆ–ಆರು ಗಂಟೆಗೆ ಪ್ರಾರಂಭವಾದದ್ದು, ಅರ್ಧ ಅಡಿ, ಒಂದು ಅಡಿ ನೀರು ಮನೆಗಳಗೆ ನುಗ್ಗಲಿಕ್ಕೆ ಪ್ರಾರಂಭವಾಯಿತು. ರಸ್ತೆಗಳೆಲ್ಲವೂ ಏನೂ ಜಲಾವೃತವಾದ ಮನೆಗಳಗೆ ಸಂಪೂರ್ಣವಾಗಿ ನೀರು ನುಗ್ಗಲಿಕ್ಕೆ ಪ್ರಾರಂಭವಾಯಿತು. ಎಷ್ಟು ಮನೆಗಳಗೆ ನೀರು ಪ್ರವೇಶ ಆಯಿತು ಎಂದರೆ, ಸುಮಾರು ಎರಡೂವರೆ ಸಾವಿರದಿಂದ ಮೂರು ಸಾವಿರ ಮನೆಗಳಗೆ ಅಧಿಕವಾದಂತಹ ನೀರು ಪ್ರವೇಶವಾಯಿತು. ಜನರು ಕಣ್ಣು ಬಿಟ್ಟರು. ಜನರು ಕಣ್ಣು ಬಿಟ್ಟು ಹಿಂದೆ–ಮುಂದೆ ಏನು ಯೋಚನೆ ಮಾಡಲಿಲ್ಲ. ಸ್ವಯಂಸೇವಕರು, ಸ್ವಯಂಪ್ರೇರಿತರಾಗಿ, ನಾಗರೀಕರು ಸಹ ಹೆಚ್ಚಿನ ಪ್ರಮಾಣದಲ್ಲಿ ನೀರು ನುಗ್ಗುತ್ತಿರುವ ಬಗ್ಗೆ ಅರಿವು ಉಂಟಾಗಿ, ಮನೆಯಲ್ಲಿದ್ದಂತಹ ಜನರು ಗಂಟು–ಮೂಟೆ ಕಟ್ಟಲಿಕ್ಕೂ, ದಿನನಿತ್ಯದ ಅವಶ್ಯಕ ಸಾಮಗ್ರಿಗಳನ್ನೂ ಕೂಡ ಕಾಪಾಡಿಕೊಳ್ಳಲಿಕ್ಕೆ ಯೋಚನೆ ಮಾಡುವಂತಹ ಸಂದರ್ಭವೇ ಅವರ ಮುಂದೆ ನಿರ್ಮಾಣವಾಗಲಿಲ್ಲ. ತಮ್ಮ ಜೀವ ಉಳದರೆ ಸಾಕು, ಮನೆಯಿಂದ ಹೊರಗಡೆ ಬಂದರೆ ಸಾಕು, ಯಾವುದಾದರೂ ಎತ್ತರದ ಪ್ರದೇಶಕ್ಕೆ

ಹೋಗಿ ತಲುಪಿದರೆ ಸಾಕು, ಎನ್ನತಕ್ಕಂತಹ ಸನ್ನಿವೇಶ ಅವರುಗಳ ಮುಂದೆ ನಿರ್ಮಾಣವಾಯಿತು. ಅಂದರೆ, ಕ್ಷಣ ಕ್ಷಣಕ್ಕೂ ಇಂಚು- ಇಂಚು ನೀರು ಏರಿಕೆಯಾಗುತ್ತಾ ಹೋಯಿತು, ಸುಮಾರು ಏಳೂವರೆ -ಎಂಟು ಗಂಟೆಗೆ ಮನೆಗಳಿಗೆ 2 ರಿಂದ 3 ಅಡಿ ಮೇಲೆ ನೀರು ಪ್ರವೇಶ ಆಯಿತು. ಜನರು ತಮ್ಮ ಮನೆಗಳಲ್ಲಿ ಏನು ಸಂಗ್ರಹ ಮಾಡಿ ಇಟ್ಟುಕೊಂಡಿದ್ದರೋ ಅದನ್ನೆಲ್ಲಾ ಬಿಟ್ಟು ಉಟ್ಟ ಬಟ್ಟೆಯಿಂದ ಹೊರಗಡೆ ಬಂದರು. ನಾನು ಹೇಳುತ್ತಿರುವುದು ನೈಜ ಪರಿಸ್ಥಿತಿ. ಅವರ ಮೈ ಮೇಲೆ ಇದ್ದಂತಹ ಬಟ್ಟೆಯನ್ನು ಬಿಟ್ಟರೆ, ಮತ್ಯಾವುದನ್ನು ಜೋಪಾನ ಮಾಡತಕ್ಕಂತಹ ಸಂದರ್ಭ ಅಗಲಿ, ರಕ್ಷಣೆ ಮಾಡಿಕೊಳ್ಳತಕ್ಕ ಸಂದರ್ಭವಾಗಲಿ, ಅದನ್ನು ಎತ್ತಿ ಇಡತಕ್ಕಂತಹ ಸಂದರ್ಭವಾಗಲಿ, ಅವರ ಮುಂದೆ ನಿರ್ಮಾಣವೇ ಆಗಲಿಲ್ಲ. ಕೆಲವರು ಮನೆ ಬಾಗಿಲನ್ನು ತೆಗೆಯಲಿಕ್ಕೆ ಆಗಲಿಲ್ಲ. ಏತಕ್ಕೆ ತೆಗೆಯಲಿಕ್ಕೆ ಆಗಲಿಲ್ಲವೆಂದರೆ, ಬಾಗಿಲು ತೆಗೆದರೆ ನೀರು ಒಳಗಡೆ ಬರುತ್ತದೆ. ಕೆಲವರು ಶೀಟ್ ಮನೆನಲ್ಲಿದ್ದವರು ಮೇಲ್ಗಡೆ ಶೀಟ್ ತೆಗೆದುಕೊಂಡು, ಒಬ್ಬರಿಗೊಬ್ಬರು ಸಹಾಯ ಮಾಡಿಕೊಂಡು ಮನೆಯಿಂದ ಹೊರಗಡೆ ಬಂದರು. ಆಚೆಕಡೆ ಇದ್ದಂತಹವರು ಸ್ವಯಂಪ್ರೇರಿತ ರಾಗಿದ್ದಂತಹ ನಾಗರೀಕರೆಲ್ಲರೂ ಸೇರಿ ಹಗ್ಗ ಕಟ್ಟಲಿಕ್ಕೆ ಪ್ರಾರಂಭ ಮಾಡಿದರು. ಬೆಳಕು ಅರಿದಂತಹ ಸಂದರ್ಭದಲ್ಲಿ ಹಗ್ಗಗಳನ್ನು ತಂದು ಆ ಜನರನ್ನು ಉಳಿಸಿದರು. ಅವರ ಮೊದಲ ಆದ್ಯತೆ ಏನಿತ್ತು ಎಂದರೆ, ಜನರ ಜೀವ ಉಳಿಸುವಂತಹದ್ದು ಆಗಿತ್ತು. ಜನರ ಜೀವ ಉಳಿಸಲಿಕ್ಕೆ ಏನು ಮಾಡಬೇಕಾಗಿತ್ತು ಎಂದರೆ ಅಕ್ಕ-ಪಕ್ಕದ ಮನೆಗಳ ಪೈಕಿ ಯಾವುದು moulding ಮನೆಗಳು ಇದ್ದವೋ, ಯಾವುದು ಗಟ್ಟಿ ಮುಟ್ಟಿಯಾಗಿದ್ದಂತಹ, ಮಳೆಯ ನೀರು ಪ್ರವಾಹ ಅಲ್ಲಿಗೆ ಬಂದರೂ ಕೂಡ ಅವರ ಮನೆಗಳು ಕೊಚ್ಚಿ ಹೋಗದೇ ಇರುವ, ಕುಸಿದು ಹೋಗದಿರುವ ಮನೆಗಳ ಮೇಲೆ ಜನರನ್ನು ಸ್ಥಳಾಂತರ ಮಾಡಲಿಕ್ಕೆ ಒಂದು ಅವಕಾಶವಾಯಿತು.

ಅವರೆಲ್ಲರೂ ಮೊದಲು ಮಾಡಿದ ಕೆಲಸ ಎಂದರೆ, ತೊಂದರೆಯಲ್ಲಿರುವ ಜನರನ್ನು ಎತ್ತರದ ಪ್ರದೇಶಗಳಿಗೆ ಅಕ್ಕ-ಪಕ್ಕದ ಎರಡು-ಮೂರು ಮಹಡಿಗಳಿರುವ moulding ಮನೆಗಳಿಗೆ ಸಂಪೂರ್ಣವಾಗಿ 9 ರಿಂದ 9-30 ಗಂಟೆಯ ಒಳಗೆ ಸ್ಥಳಾಂತರ ಮಾಡಲಿಕ್ಕೆ ಸಾಧ್ಯವಾಯಿತು. ಎರಡೂವರೆ- ಮೂರು ಸಾವಿರ ಜನರು ಏನಿದ್ದರು, ಅ ಜನರನ್ನೆಲ್ಲಾ ಸಂಪೂರ್ಣವಾಗಿ ಎಲ್ಲವನ್ನು

ತೊರೆದು ಬರಿಗೈಯಲ್ಲಿ ತಮ್ಮ ತಮ್ಮ ಪ್ರಾಣ ಉಳಿಸಿಕೊಳ್ಳಲಿಕ್ಕೆ ಎತ್ತರವಾದಂತಹ ಪ್ರದೇಶದ ಮನೆಗಳಿಗೆ ಹೋಗಿ ತಲುಪಿದರು. ಈ ವಿಚಾರವಾಗಿ ರಾಮನಗರಕ್ಕೆ ನೆರೆ ಹಾನಿಯಿಂದಾಗಿ ಈ ರೀತಿ ಹಾನಿಯಾಗಿದೆ ಎಂದು ಟಿ.ವಿಯಲ್ಲಿ ಪ್ರಚಾರವಾಗಿದ್ದನ್ನು ಹೇಳಿದ್ದನ್ನು ಎಲ್ಲರೂ ತಿಳಿದುಕೊಂಡರು. ಆ ಸಂದರ್ಭದಲ್ಲಿ ನಾವು ಸಹ ಅಂದರೆ, ನಾವು, ನಮ್ಮ ಸಂಸದರು, ಸ್ಥಳೀಯ ಮುಖಂಡರುಗಳು ಮತ್ತು ಅಲ್ಲಿಯ ಶಾಸಕರಾಧಿಯಾಗಿ ಎಲ್ಲರೂ ತ್ವರಿತವಾಗಿ ಅಲ್ಲಿಗೆ ಹೋಗಿದ್ದೆವು. ನಾವು ಸಹ ಒಳಗಡೆ ಹೋಗಲಿಕ್ಕೆ ಸಾಧ್ಯವಿರಲಿಲ್ಲ. ಇಡೀ ಸಂಪೂರ್ಣವಾಗಿ ಅರ್ಧ ರಾಮನಗರ ಜಲಾವೃತವಾಗಿ ನಿರ್ಮಾಣವಾಗಿತ್ತು. ಅಗ್ನಿಶಾಮಕದಳದವರ ಬಳಿ ಇರುವಂತಹ 2-3 boat ಗಳಿದ್ದು, ಅವುಗಳ ಮುಖೇನ ಜನರ ಜೀವನಾವಶ್ಯಕ ಸಾಮಗ್ರಿಗಳನ್ನು ಅವರುಗಳ ಜೀವ ಉಳಿಸಿಕೊಳ್ಳುವುದಕ್ಕೆ ಹಗ್ಗ ಇತ್ಯಾದಿಯಾಗಿ ತಂದು, ಅವರುಗಳ ಜೀವ ಉಳಿಸುವುದಕ್ಕೆ ಆ ಕಡೆಯಿಂದ ಈ ಕಡೆಗೆ ಬಳಸಿಕೊಳ್ಳುವುದಕ್ಕೆ ಸಾಧ್ಯವಾಯಿತು. ಸುಮಾರು ಹತ್ತು-ಹತ್ತೂವರೆ ಗಂಟೆಗೆ ಆ ಭಕ್ಷಿಕೆರೆ ಹೊಡೆದಂತಹ ನೀರಿನಿಂದಾಗಿ 8 ಅಡಿ ನೀರು ಮತ್ತು ಮಳೆಯಿಂದಾಗಿ ಬಂದಂತಹ ನೀರು ಇಡೀ ಅರ್ಧ ರಾಮನಗರ ಪಟ್ಟಣದ ತಗ್ಗು ಪ್ರದೇಶಗಳಲ್ಲಿ ತುಂಬಿಕೊಂಡಿತು. ಹನ್ನೊಂದು-ಹನ್ನೊಂದುವರೆ ಗಂಟೆಗೆ ನೀರಿನ ಪ್ರಮಾಣ ಇಳಿಯಲಿಕ್ಕೆ ಪ್ರಾರಂಭವಾಯಿತು. ಅದೃಷ್ಟವಶಾತ್ 11-30 ಗಂಟೆಗೆ ನೀರಿನ ಪ್ರಮಾಣ ಇಳಿಯಲಿಕ್ಕೆ ಪ್ರಾರಂಭವಾಯಿತು. ನಾವು ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ಒಳಗಡೆ ಪ್ರವೇಶ ಮಾಡಲಿಕ್ಕೆ 1-30 ಗಂಟೆಗೆ ಸಾಧ್ಯವಾಯಿತು. ನಾವೆಲ್ಲರೂ ಅಲ್ಲಿಗೆ ನೋಡಿದಂತಹ ಸಂದರ್ಭದಲ್ಲಿ ಅಲ್ಲಿನ ಪರಿಸ್ಥಿತಿ ಹೇಗೆ ಇತ್ತು ಎಂದರೆ ಅತ್ಯಂತ ಶೋಚನೀಯವಾಗಿತ್ತು. ಹೇಳಲಿಕ್ಕೆ ಆಗದ ರೀತಿಯಲ್ಲಿ ಪರಿಸ್ಥಿತಿ ಇತ್ತು. ಅಲ್ಲಿ ಹೆಚ್ಚಿನದಾಗಿ ಕೂಲಿಕಾರ್ಮಿಕರು, ಬಿಡಿ ಕಟ್ಟುವವರು, ರೀಲರ್ಸ್, ಗಾರೆ ಕೆಲಸ ಮಾಡುವಂತಹವರು, ಬಸ್‌ಸ್ಟ್ಯಾಂಡ್‌ನಲ್ಲಿ ಕೂಲಿ ಮಾಡುವಂತಹವರು, ಈ ರೀತಿಯಾದಂತಹ ಜನರೇ ಅಲ್ಲಿ ಸಂಪೂರ್ಣವಾಗಿ ವಾಸ ಮಾಡುವಂತಹ ಜನರಾಗಿದ್ದರು. ಮಧ್ಯಾಹ್ನ ಎರಡು-ಎರಡೂವರೆ ಗಂಟೆಗೆ ನೀರಿನ ಪ್ರಮಾಣ ಇಳಿಯಿತು. ಆಗ ಅವರ ಮನೆಗಳಲ್ಲಿ ನೋಡಿದಾಗ ಒಂದೂವರೆ-ಎರಡು ಅಡಿ ಕೆಸರು ಬಂದಿತ್ತು. ಅಲ್ಲಿ ಬರಿ ಮಳೆ ನೀರು ಅಷ್ಟೇ ಬರಲಿಲ್ಲ. ತಿಳಿ ನೀರು

ಬರಲಿಲ್ಲ. ಮಳೆ ನೀರು ಬರುವ ಸಂದರ್ಭದಲ್ಲಿ ಕೆಸರು ನೀರನ್ನು ಸಹ ಹೊತ್ತುಕೊಂಡು ಬಂದಿತ್ತು. ಇಡೀ ಕೆಸರು ಅವರ ಇಡೀ ಬದುಕನ್ನು ಸಂಪೂರ್ಣವಾಗಿ ನಾಶ ಮಾಡಿತ್ತು. ಯಾವ ಮನೆಗಳು ಬಲಹೀನವಾಗಿದ್ದವು, ಯಾವ ಮನೆಗಳು ಶೀಟ್ ಮನೆಗಳಾಗಿದ್ದವು, ಯಾವ ಮನೆಗಳು ಶೀತಕ್ಕೆ ಒಳಗಾದವು ಅಂದರೆ 250 ರಿಂದ 400 ಮನೆಗಳು ಕುಸಿದು ಹೋದವು.

**ಮುಂದು.**

**(887) 16.09.2022 01.10 ಎಸ್‌ವಿ-ಜಿಆರ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಎಸ್.ರವಿ (ಮುಂದು):-**

ಕೆಲವು ಮನೆಗಳಲ್ಲಿ ಹೆಣ್ಣುಮಕ್ಕಳ ಮದುವೆ ದಿನಾಂಕಗಳು ನಿಗದಿಯಾಗಿದ್ದವು. ಮದುವೆಗೆ ಬೇಕಾದಂತಹ ಪಡಿತರ ಸಾಮಗ್ರಿ, ಬಟ್ಟೆ, ಒಡವೆ, ವಸ್ತುಗಳನ್ನು ಮನೆಗಳಲ್ಲಿ ಜೋಪಾನ ಮಾಡಿದ್ದರು. ಯಾವುದನ್ನೂ ರಕ್ಷಣೆ ಮಾಡಿಕೊಳ್ಳಲು ಅವರಿಂದ ಆಗಲಿಲ್ಲ. ಅದರ ಮೇಲೆ ಒಂದೂವರೆಯಿಂದ ಎರಡು ಅಡಿಗಳಷ್ಟು ಕೆಸರು ಇತ್ತು. ರಾಮನಗರ ಹಳೆಯ ಟೌನ್‌ನಲ್ಲಿದ್ದಂತಹ ರಸ್ತೆಗಳು ಕೊಚ್ಚಿಹೋಗಿ 4-5 ಅಡಿ ಗುಂಡಿಗಳು ಇದ್ದವು. ಜನರು ಓಡಾಡಲಿಕ್ಕೆ ಸಾಧ್ಯವಿಲ್ಲದಂತಹ ಸಂದರ್ಭ ನಿರ್ಮಾಣವಾಗಿತ್ತು. ಉತ್ತರ ಕರ್ನಾಟಕ ಭಾಗದಲ್ಲಿ ನೆರೆ ಪರಿಸ್ಥಿತಿ ಉಂಟಾದಂತಹ ಸಂದರ್ಭದಲ್ಲಿ, ಕೃಷ್ಣಾ ನದಿಯಿಂದ 3 ಲಕ್ಷ ಕ್ಯುಸೆಕ್ಸ್ ನೀರನ್ನು ಹೊರಬಿಟ್ಟಂತಹ ಸಂದರ್ಭದಲ್ಲಿ ಆ ಭಾಗದ ಜನಜೀವನ ಯಾವ ರೀತಿ ಅಸ್ತವ್ಯಸ್ತವಾಗುತ್ತದೆ ಎಂಬುದನ್ನು ಟಿ.ವಿಯಲ್ಲಿ ನೋಡಿದ್ದೆವು. ದಿನಪತ್ರಿಕೆಗಳಲ್ಲಿ ಓದಿದ್ದೆವು. ಅಂತಹ ಭೀಕರ ಪರಿಸ್ಥಿತಿಯನ್ನು ನಾವೆಂದೂ ನಮ್ಮ ಜೀವಮಾನದಲ್ಲಿ ನೋಡಿರದ ಪರಿಸ್ಥಿತಿಯನ್ನು ಅಂದು ರಾಮನಗರ ಮತ್ತು ಚನ್ನಪಟ್ಟಣದಲ್ಲಿ ನೋಡಿದೆವು.

ಜನರು ಅಸಹಾಯಕರು. ಅಲ್ಲಿದ್ದಂತಹ ಸ್ವಯಂಸೇವಕರು ಜನರಿಗೆ ಹಾಲು, ಬಿಸ್ಕೆಟ್ ಕೊಡುತ್ತಿದ್ದರು. ತಮ್ಮ ಮಕ್ಕಳಿಗೆ ಕುಡಿಯುವುದಕ್ಕಾಗಿ ಹಾಲನ್ನು ನೀಡುವ ಸಲುವಾಗಿ ಹಾಲು ಕಾಯಿಸಿಕೊಳ್ಳಲು ಅವರಿಗೆ ಆಗದಂತಾಗಿತ್ತು. ಏಕೆಂದರೆ ಅವರ ಸ್ಟೌ ಕೆಸರಿನಲ್ಲಿ ಹೂತುಕೊಂಡಿತ್ತು.

ಮತ್ತೊಂದು ಭಾಗಕ್ಕೆ ಬಂದು ನೋಡಿದರೆ ಮನೆಗಳಲ್ಲಿ Reeling machines ಗಳಿದ್ದವು. ರಾಮನಗರದಲ್ಲಿ Reeling machines ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿವೆ. ನಮ್ಮ ರಾಜ್ಯದಲ್ಲಿ ಶಿಡ್ಲಘಟ್ಟ, ಕೊಳ್ಳೇಗಾಲ, ರಾಮನಗರ ಟೌನ್‌ಗಳಲ್ಲಿ ಈ ರೀತಿಯ ಯಂತ್ರಗಳಿವೆ. ಅವು ಸಂಪೂರ್ಣವಾಗಿ ಕೆಸರುಮಯವಾಗಿತ್ತು. ಒಬ್ಬೊಬ್ಬರ ಮನೆಯಲ್ಲಿಯೂ 50, 100, 200 ಕೆ.ಜಿ. ರೇಷ್ಮೆ ಗೂಡು ಇತ್ತು. ಅದರ ಮೇಲೆ ಒಂದಡಿ ಕೆಸರು ಇತ್ತು. ಒಂದು ಕೆ.ಜಿ. ರೇಷ್ಮೆ ರೂ.5,000, ರೂ.10,000 ಹೀಗೆ ಇದೆ. 10 ಕೆ.ಜಿ., 20 ಕೆ.ಜಿ. ರೇಷ್ಮೆ ಇಲ್ಲ. ಸಂಗ್ರಹಣೆ ಮಾಡಿದ್ದಂತಹ ರೇಷ್ಮೆಯ ಮೇಲೆ ಕೆಸರು ಕೂತು ಅದು ಸಂಪೂರ್ಣವಾಗಿ ಹಾಳಾಗಿತ್ತು. ಇನ್ನು ಬಳಕೆಗೆ ಬರದೆ ಇರುವಂತಾಗಿತ್ತು. ಒಂದು, ಎರಡು Reeling machines ಅಲ್ಲ. ಒಂದು, ಎರಡು ಕುಟುಂಬ ಅಲ್ಲ. 400-500 Reeling machines ಗಳನ್ನು ನಂಬಿಕೊಂಡು ಬದುಕುತ್ತಿದ್ದಂತಹ Reeler ಕುಟುಂಬಗಳ ಜೀವನವನ್ನೇ ಕಸಿದಿದೆ. ಮಕ್ಕಳ ಮದುವೆಗಾಗಿ ಸಂಗ್ರಹಿಸಿದ್ದ ದವಸ ಧಾನ್ಯಗಳು, ವಸ್ತ್ರಗಳು ಎಲ್ಲವೂ ಕೆಸರುಮಯ. ಆ ಜನರಿಗೆ ಮಾತೇ ಹೊರಡದಂತಾಗಿತ್ತು. ಮೌನವನ್ನು ವಹಿಸಿದ್ದರು. ಹೀಗೆ ರಾಮನಗರದ ಜನರ ಬದುಕನ್ನು ಕಸಿದಿದೆ.

ರಾಮನಗರದ ಪರಿಸ್ಥಿತಿಯ ವೀಕ್ಷಣೆಗಾಗಿ ಮುಖ್ಯಮಂತ್ರಿಗಳು ಬರುತ್ತಿದ್ದಾರೆ ಎನ್ನುವ ಸುದ್ದಿ ನಮಗೆ ಬಂದಿತು. ನಾನಂತೂ ಮುಖ್ಯಮಂತ್ರಿಯವರನ್ನು ಭೇಟಿ ಮಾಡಲಿಕ್ಕೆ ಆಗಲೇ ಇಲ್ಲ. ಏಕೆಂದರೆ ರಾಮನಗರದ ಒಂದು ಭಾಗದಲ್ಲಿ ನಾವಿದ್ದೆವು. ಮತ್ತೊಂದು ಭಾಗಕ್ಕೆ ಮುಖ್ಯಮಂತ್ರಿಗಳು ಬಂದಿದ್ದರು. ಅವರನ್ನು ಭೇಟಿ ಮಾಡಲು ಸಂಪರ್ಕ ಸಾಧ್ಯವಾಗಲಿಲ್ಲ. ನಾವು ಆ ನೀರನ್ನು ದಾಟಿ ಬರುವಷ್ಟರಲ್ಲಿ ಅವರು ಚನ್ನಪಟ್ಟಣಕ್ಕೆ ಹೊರಟು ಹೋಗಿದ್ದರು. ತಕ್ಷಣವೇ ಮುಖ್ಯಮಂತ್ರಿಗಳು ಅಲ್ಲಿಗೆ ಬಂದು ಸಂದರ್ಭವನ್ನು ವೀಕ್ಷಣೆ ಮಾಡಿ ಜನರಿಗೆ ಧೈರ್ಯವನ್ನು ಹೇಳಿ ತುರ್ತಾಗಿ ಅಗತ್ಯಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು ಹೋಗಿದ್ದರು. ಆ ಸಂದರ್ಭಕ್ಕೆ ಬಂದಂತಹ ಮುಖ್ಯಮಂತ್ರಿಗಳಿಗೆ ನನ್ನ ಶ್ಲಾಘನೆ ಇದೆ.

**ವೈಸ್ ಛೇರ್ಮನ್:-** ಮಾನ್ಯ ರವಿಯವರೇ, 20 ನಿಮಿಷ ಆಯಿತು. ಇನ್ನೂ ಎಷ್ಟು ಹೊತ್ತು ಮಾತನಾಡುತ್ತೀರಿ? ಬಹಳಷ್ಟು ಜನ ಮಾತನಾಡುವವರಿದ್ದಾರೆ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಸಮಸ್ಯೆಯ ತೀವ್ರತೆಯನ್ನು ಅರ್ಥ ಮಾಡಿಕೊಳ್ಳಿ.

**ವೈಸ್ ಛೇರ್ಮನ್:-** ಮಾನ್ಯ ರವಿಯವರೇ, ಈ ಸಮಸ್ಯೆ ಕೇವಲ ರಾಮನಗರದಲ್ಲಿ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಆಗಿದೆ. ಬಹುಶಃ ಮಾನ್ಯ ಮಂಜುನಾಥ ಭಂಡಾರಿಯವರು ಹೇಳಬಹುದು. ನಿಮಗೆ ಹೊಸತು. ಕರಾವಳಿಯಲ್ಲಿ ಪ್ರತಿ ಮಳೆಗಾಲದಲ್ಲಿ ಕೊಡಿಯಾಲ್‌ಬೈಲ್ ಎಲ್ಲಾ ಮುಳುಗಿ ಹೋಗುತ್ತದೆ. ದಯಮಾಡಿ ಸಮಯವನ್ನು ನೋಡಿ ಮಾತನಾಡಬೇಕು.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ನೀವು ಒಬ್ಬ ಹೆಣ್ಣುಮಗಳಾಗಿ ಸಹೃದಯತೆಯಿಂದ ತುಡಿತವನ್ನು ಅರ್ಥ ಮಾಡಿಕೊಳ್ಳುತ್ತೀರೆಂದು ಭಾವಿಸುತ್ತೇನೆ. ಕಷ್ಟ ಪಟ್ಟವರ ನೋವನ್ನು ಅರ್ಥ ಮಾಡಿಕೊಳ್ಳುವ ಹೆಂಗರುಳು ನಿಮಗೆ ಇರುತ್ತದೆ.

**ವೈಸ್ ಛೇರ್ಮನ್:-** ನಿಮ್ಮ ವಿವರಣೆಯ ಮೂಲಕ ಅಲ್ಲಿಯ ಚಿತ್ರಣವನ್ನೇ ಸದನದ ಮುಂದೆ ತಂದು ನಿಲ್ಲಿಸಿದ್ದೀರಿ. ಅಷ್ಟು ಚೆನ್ನಾಗಿ ವಿವರಣೆಯನ್ನು ಕೊಟ್ಟಿದ್ದೀರಿ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಇಲ್ಲಿ ಕೇವಲ ಒಬ್ಬರೇ ಒಬ್ಬರು ಮಂತ್ರಿಗಳಿದ್ದಾರೆ. ನಮ್ಮ ಅದೃಷ್ಟಕ್ಕೆ ಒಬ್ಬರಾದರೂ ಇದ್ದಾರೆ.

**ವೈಸ್ ಛೇರ್ಮನ್:-** ಅವರು ನೂರು ಜನಕ್ಕೆ ಸಮ ಇದ್ದಾರೆ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ನಮ್ಮ ತಾಲ್ಲೂಕಿನಲ್ಲಿ ಒಂದು ಸೇತುವೆಯ ಸಮಸ್ಯೆ ಇತ್ತು. ನಮಗೆ ಯಾರಿಗೂ ಮಾಹಿತಿ ಇರಲಿಲ್ಲ. ಆದರೂ ಮಾನ್ಯ ಸಚಿವರು ಬಂದು ಹೋಗಿದ್ದಾರೆ. ಮತ್ತೊಮ್ಮೆ ಕನಕಪುರದ ಬೂದುಗುಪ್ಪೆ ಹತ್ತಿರ ಮತ್ತು ಹಾರೋಹಳ್ಳಿಯ ಬಳಿ ಬಂದು ತುರ್ತಾಗಿ ನೋಡಿಕೊಂಡು ಹೋಗಿದ್ದಾರೆ. ರಾಮನಗರ ಟೌನ್‌ಗೂ ಹೋಗಿದ್ದೆನು ಎಂದು ಹೇಳುತ್ತಿದ್ದಾರೆ. ಬಹಳ ಸಂತೋಷ.

ದಯವಿಟ್ಟು ಸರ್ಕಾರ ಇದನ್ನು ಕೇಳಲು ಮಂತ್ರಿಗಳನ್ನಾದರೂ ಕರೆಸಿ. ಪುಣ್ಯಾತ್ಮರು, ಆ ಕಲ್ಲು ಹೃದಯದ ಅಧಿಕಾರಿಗಳನ್ನು ಕರೆಸಿ. ನಾನು ಆ ವಿಚಾರವನ್ನು ಹೇಳುವುದಕ್ಕೆ ಹೊರಟಿದ್ದೇನೆ.

ಸಂತ್ರಸ್ತರಿಗೆ ಪರಿಹಾರವನ್ನು ಕೊಡಬೇಕು. ಪರಿಹಾರವನ್ನು ಕೊಡುವುದಕ್ಕೆ ರೇಷನ್ ಕಾರ್ಡ್ ಕೊಡು, ಆಧಾರ್ ಕಾರ್ಡ್ ಕೊಡು, ವೋಟರ್ ಐಡಿ ಕಾರ್ಡ್ ಕೊಡು ಎಂದರೆ ಎಲ್ಲಿಂದ ತರುತ್ತಾರೆ? ನಾನು ಈ ಮಾತನ್ನು ಏಕೆ ಒತ್ತಿ ಹೇಳುತ್ತಿದ್ದೇನೆಂದರೆ ಒಂದೂವರೆ ಅಡಿಯಿಂದ ಎರಡು ಅಡಿ ಕೆಸರು ಕೂತಿರುವಾಗ ಯಾವ ರೇಷನ್ ಕಾರ್ಡ್ ಅನ್ನು ತಂದುಕೊಡುತ್ತಾರೆ? ನಗರ ಸಭೆಯ ಅಧಿಕಾರಿಗಳಿಗೆ ಹೇಳಿ ವಾಸ್ತವವಾಗಿ ಯಾರಿಗೆ ತೊಂದರೆಯಾಗಿದೆಯೋ ಅವರಿಗೆ ಪರಿಹಾರ ಕೊಡಿಸಲಿ. ಎಷ್ಟು ಪರಿಹಾರವನ್ನು ಕೊಡುತ್ತಾರೆ? ಮುಖ್ಯಮಂತ್ರಿಗಳು ಬಂದು ಹೋದರು. ನಾನು ಅವರನ್ನೂ ಶ್ಲಾಘನೆ ಮಾಡಿದೆ. ಫಲಿತಾಂಶ ಏನು? ಎನ್.ಡಿ.ಆರ್.ಎಫ್., ಎಸ್.ಡಿ.ಆರ್.ಎಫ್., ಯಾವುದರಲ್ಲಿ ಕೊಡುತ್ತಾರೆಯೋ ಅದನ್ನು ತಕ್ಷಣವೇ ಕೊಟ್ಟರೆ ಆ ಜನರಿಗೆ ಬದುಕು ಕಟ್ಟಿಕೊಳ್ಳಲು ನೆರವಾಗುತ್ತದೆ. ರಸ್ತೆಗಳ, ಮೋರಿಗಳ ದುರಸ್ತಿಯಾಗದೆ ಸಾಂಕ್ರಾಮಿಕ ರೋಗಗಳು ಹರಡುತ್ತಿವೆ. ಮೂಲಭೂತವಾಗಿ National Highways Authority of India ದವರು ಇದಕ್ಕೆ ಕಾರಣ. ಬೆಂಗಳೂರು-ಮೈಸೂರು ರಸ್ತೆಯ natural flow ಸರಿಯಾಗಿ ಮಾಡದೆ ಸ್ವಾಭಾವಿಕವಾಗಿ ಹರಿಯುತ್ತಿದ್ದಂತಹ ನೀರನ್ನು ತಪ್ಪಿಸಿ, ಅಡ್ಡಾದಿಡ್ಡಿಯಾಗಿ ನೀರನ್ನು ಬಿಟ್ಟಂತಹ ಹಿನ್ನೆಲೆಯಲ್ಲಿ ಕೆರೆ ಕೋಡಿ ಒಡೆಯುವಂತಾಯಿತು. ಇದಕ್ಕೆ ಕ್ರಮ ಕೈಗೊಳ್ಳುವವರು ಯಾರು? ಸಂದರ್ಭ ಸಿಕ್ಕಿದಾಗ ಮಾತನಾಡಲಿಲ್ಲ ಅಂದರೆ ನಾವು ಇನ್ನು ಯಾವಾಗ ಮಾತನಾಡಬಹುದು? ಇನ್ನು ಯಾರ ಹತ್ತಿರ ಹೇಳಿಕೊಳ್ಳುವುದು? ಕೇವಲ ತೌಡು ಕುಟ್ಟುವಂತೆ ಆಗಬಾರದಲ್ಲವೆ?

**ವೈಸ್ ಛೇರ್ಮನ್:-** ಮಾನ್ಯ ರವಿಯವರೇ, ನೀವು ಮಾತನಾಡುತ್ತಿರುವ ಬಗ್ಗೆ ನಾವೇನು ಹೇಳುತ್ತಿಲ್ಲ. ಇನ್ನೂ ಅನೇಕರು ಮಾತನಾಡುವವರಿದ್ದಾರೆ. ನೀವು ವಿಷಯವನ್ನು ಬಹಳ ಚೆನ್ನಾಗಿ ಪ್ರಸ್ತುತ ಪಡಿಸಿದ್ದೀರಿ. ರಾಮನಗರವನ್ನೇ ತಂದು ಈ ಸದನದ ಒಳಗೆ ನಿಲ್ಲಿಸುವ ರೀತಿಯಲ್ಲಿ ವಿವರಣೆಯನ್ನು ಕೊಟ್ಟಿದ್ದೀರಿ. ಎಲ್ಲರಿಗೂ ಮನವರಿಕೆಯಾಗಿದೆ. ದಯಮಾಡಿ ಬೇರೆಯವರಿಗೂ ಅವಕಾಶ ಮಾಡಿಕೊಡಬೇಕು.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಸಮಸ್ಯೆಯ ತೀವ್ರತೆಯನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಚನ್ನಪಟ್ಟಣದ ಪರಿಸ್ಥಿತಿಯೂ ಭೀಕರವಾಗಿತ್ತು. ಬೀಡಿ ಕಾಲೋನಿಯವರ ಕಥೆ ಇನ್ನೂ ಘೋರ.

ನಾನು ಕೇಳುವ ಪ್ರಶ್ನೆ ಸಹೃದಯಿ ಸರ್ಕಾರ, ಡಬಲ್ ಇಂಜಿನ್ ಸರ್ಕಾರ ಸ್ಪಂದಿಸಿದ ರೀತಿ ಏನು? ಮುಖ್ಯಮಂತ್ರಿಗಳು ಬಂದು ಹೋದ ಮೇಲೆ ಪರಿಹಾರವೇನು? ಕೊಡಬೇಕಲ್ಲವೆ? ನಮ್ಮ ಕಡೆ ಹೇಳುತ್ತಾರೆ. "ಗೌಡ" ಎಂದು ಕರೆದರೆ "ಓ" ಎಂದನಂತೆ, "ಮೂರಾಳಿಗೆ ಊಟ" ಎಂದರೆ ಆ ಕಡೆಯಿಂದ ಧ್ವನಿಯೇ ಬರಲಿಲ್ಲವಂತೆ. "ಗೌಡ" ಎಂದು ಹೇಳಿದ ತಕ್ಷಣ ಉಬ್ಬಿಹೋಗಿ "ಓ" ಎಂದನಂತೆ. "ಮೂರಾಳಿಗೆ ಊಟ" ಎಂದ ತಕ್ಷಣ ಒಳಗಡೆಯಿಂದ ಧ್ವನಿಯೇ ಬರಲಿಲ್ಲವಂತೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಪ್ರವಾಹ ಪರಿಸ್ಥಿತಿ ಉತ್ತರ ಕನ್ನಡ ಜಿಲ್ಲೆ, ಭಟ್ಕಳ ಹೀಗೆ ಇಡೀ ರಾಜ್ಯದಲ್ಲಿ ಉಂಟಾಗಿದೆ. ನಾನು ನೋಡಿದಂತೆ ಯಾವುದೇ ಪಕ್ಷದವರಾಗಿದ್ದರೂ ಎಲ್ಲಾ ಶಾಸಕರೂ ಕೂಡ ಆ ಸಮಸ್ಯೆಗಳ ಬಗ್ಗೆ ಹೋರಾಟ ಮಾಡಿದ್ದಾರೆ. ಆಕಸ್ಮಿಕವಾಗಿ ಅವರ ಮನೆಗಳಿಗೆ ನೀರು ನುಗ್ಗಿದೆ. ಅವರ ಮನೆಯಲ್ಲಿದ್ದಂತಹ ದಾಖಲೆಗಳು ಆಧಾರ್ ಕಾರ್ಡ್, ವೋಟರ್ ಕಾರ್ಡ್, ರೇಷನ್ ಕಾರ್ಡ್ ಯಾವುದೇ ಇರಬಹುದು, ವಾಸ್ತವಾಂಶ ಇದ್ದರೆ ತಕ್ಷಣವೇ 24 ಗಂಟೆಗಳಲ್ಲಿ ರೂ.10,000ಗಳನ್ನು ಅವರ ಖಾತೆಗೆ ಹಾಕುವಂತಹ ಕ್ರಮ ಜರುಗಿಸುವಂತೆ ತಹಶೀಲ್ದಾರ್‌ಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಕೆಲವು ಬಡವರ ಮನೆಗಳಲ್ಲಿ ಗೋಡೆ ಬಿದ್ದು ಹೋಗಿರುತ್ತದೆ. ಅದಕ್ಕೆ ರೂ.50,000/- ಕೊಡುತ್ತೇವೆ. ಶೇ.50ಕ್ಕಿಂತಲೂ ಜಾಸ್ತಿ ಬಿದ್ದಿದ್ದರೆ ತಕ್ಷಣ ರೂ.95,000/-ಕೊಟ್ಟು, ಲಭ್ಯವಿರುವ ದಾಖಲೆಗಳ ಆಧಾರದಲ್ಲಿ ರೂ.5 ಲಕ್ಷಗಳನ್ನು ಮನೆ ಕಟ್ಟಲು ನೀಡುವ ಪ್ರಾವಿಷನ್ ಅನ್ನು ಮಾಡಲಾಗಿದೆ. ಇಡೀ ರಾಜ್ಯದಲ್ಲಿ ಇದು ಅನುಷ್ಠಾನವಾಗುತ್ತಿದೆ. ಎಲ್ಲಿ ಅನುಷ್ಠಾನವಾಗಿಲ್ಲವೋ ಅಲ್ಲಿ ಬೇಕಿದ್ದರೆ ಅವರು ಹೇಳಲಿ, ಯಥಾವತ್ತಾಗಿ ಮುಂದುವರೆಸುವಂತಹ ಕೆಲಸವನ್ನು ಮಾಡೋಣ. ಈ ಪ್ರವಾಹ ಎನ್ನುವುದು ಸಾರ್ವಜನಿಕ ದುರಂತಗಳು. ಇಲ್ಲಿ ಯಾವುದೇ ಪಕ್ಷ ಭೇದ ಇರುವುದಿಲ್ಲ. ಸರ್ಕಾರವಾಗಿ ನಾವು ಅವರ ಜೊತೆ ನಿಲ್ಲುತ್ತೇವೆ. ಏನೇ ಸಮಸ್ಯೆಗಳಿದ್ದರೂ ಹೇಳಲಿ.

**ವೈಸ್ ಛೇರ್ಮನ್:-** ಮಾನ್ಯ ರವಿಯವರೇ, ದಯಮಾಡಿ ಐದು ನಿಮಿಷದೊಳಗೆ ಮುಗಿಸಿ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ರಾತ್ರಿ 11-12 ಗಂಟೆಯ ಸಮಯದಲ್ಲಿ ಈ ಘಟನೆ ನಡೆದಿದ್ದರೆ ನೂರಾರು ಜನ ಸತ್ತು ಹೋಗಿರುತ್ತಿದ್ದರು. ಮಕ್ಕಳು-ಮರಿಗಳ, ಅಮಾಯಕರ ಜೀವಹಾನಿಯಾಗುತ್ತಿತ್ತು. ಬೆಳಗ್ಗೆ 6 ಗಂಟೆಗೆ ಘಟನೆ ಸಂಭವಿಸಿದರ ಪರಿಣಾಮವಾಗಿ ಜನರ ಜೀವಹಾನಿ ಆಗಲಿಲ್ಲ.

**(...ಮುಂದು)**

**(೮೮೮) 16-09-2022 (1.20) ಕೆಜಿ-ಜಿಆರ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಎಸ್. ರವಿ (ಮುಂದು)**:-

ಜೀವ ಹಾನಿ ಏನಾದರೂ ಮಧ್ಯ ರಾತ್ರಿಯಾಗಿದ್ದರೆ, ಆ ಜನರು ಬದುಕುತ್ತಿರಲಿಲ್ಲ. ಅಲ್ಲಿನ ಜನರು ಆ ನೀರನ್ನು ನೋಡಿ ಎಲ್ಲಿಗೆ ಹೋಗಬೇಕು, ಏನು ಮಾಡಬೇಕೆಂದು ತಬ್ಬಿಬ್ಬು ಆಗಿಬಿಡುತ್ತಿದ್ದರು. ಅವರಿಗೆ ಆ ಸಂದರ್ಭದಲ್ಲಿ ಯೋಚನೆ ಮಾಡುವುದಕ್ಕೆ ಅವಕಾಶ ಸಿಗುತ್ತಿರಲಿಲ್ಲ. ಆ ಸಂದರ್ಭದಲ್ಲಿ 100% ಕರೆಂಟ್ ಹೊರಟು ಹೋಗುತ್ತಿತ್ತು. ಆಗ ಅವರು ಎಲ್ಲಿಗೂ ಓಡಾಡುವುದಕ್ಕೂ ಸಹ ಆಗುತ್ತಿರಲಿಲ್ಲ. ಆ ಜೀವ ಹಾನಿಯ ಪ್ರಮಾಣವನ್ನು ನಿರೀಕ್ಷೆ ಮಾಡಿದರೆ ಅದೊಂದು ಆಗಾಧವಾಗುತ್ತದೆ. ಆ ದೇವರು ಕಾಪಾಡಿದ್ದಾನೆ. ಆ ದೇವರು ಇನ್ನೊಂದು ರೂಪದಲ್ಲಿ ರಾಜ್ಯ ಸರ್ಕಾರವನ್ನು ಕಾಪಾಡಿದ್ದಾನೆ ಅಂದುಕೊಳ್ಳಿ.

ಮಾನ್ಯ ಸಭಾಪತಿಯವರೇ, ನಾನು ನಮ್ಮ ಜಿಲ್ಲೆ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ನಮ್ಮ ಜಿಲ್ಲೆ ಮಳೆ ಆಧಾರಿತ ಜಿಲ್ಲೆ ಎಂದು ಹೇಳಿದ್ದೇನೆ. ನಾನು ಭಟ್ಕಳದಲ್ಲಿ ಹಾನಿಯಾಗಿಲ್ಲ, ಅಲ್ಲಿಗೆ ಪರಿಹಾರ ಕೊಡಬೇಡಿ ಎಂದು ಹೇಳಿಲ್ಲ. ನಾನು ಸೀಮಿತವಾಗಿ ಮಾತನಾಡುತ್ತೇನೆ. ನಾನು ಸುತ್ತಿ ಬಳಸಿ ಮಾತನಾಡುವುದಿಲ್ಲವೆಂದು ಮೊದಲೇ ಹೇಳಿದ್ದೇನೆ. ನಾನು ಕಣ್ಣಿನಿಂದ ನೋಡಿದ್ದನ್ನು ಪ್ರತ್ಯಕ್ಷದರ್ಶಿಯಾಗಿ ನನಗೆ ಅನುಭವ ಇರುವಷ್ಟು ಮಾತನಾಡುತ್ತೇನೆ. ನಾನು ಬೇರೆ ಏನೇನೂ ಮಾತನಾಡುವುದಕ್ಕೆ ಹೋಗುವುದಿಲ್ಲ. ಇಡೀ ರಾಜ್ಯಕ್ಕೆ ಪರಿಹಾರ ಕೊಡಲಿ. ನಾನು ಪರಿಹಾರ ಕೊಡಬೇಡಿ ಎಂದು ಹೇಳುತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ ಬಿತ್ತನೆ ಬೀಜವನ್ನು ಬಿತ್ತಲೆ ಇಲ್ಲ. ಹೆಚ್ಚಿನ ಮಳೆಯ

ಪ್ರಭಾವದಿಂದಾಗಿ ಬಿತ್ತನೆ ಬೀಜವನ್ನು ಬಿತ್ತುವುದಕ್ಕೆ ಅವಕಾಶ ಕೊಡಲೇ ಇಲ್ಲ. ಭೂಮಿಯನ್ನು ಸರಿಪಡಿಸಿಕೊಳ್ಳುವುದಕ್ಕೆ ಅವಕಾಶ ಸಿಗಲಿಲ್ಲ. ನಾವು ಪಾರಂಪಾರಿಕವಾಗಿ ಬೆಳೆಯುತ್ತಿದ್ದ ರಾಗಿ, ಕಡಲೆಕಾಯಿ ಮತ್ತು ಸಾಲು ಬೆಳೆಗಳನ್ನು ಬೆಳೆಯುವುದಕ್ಕೆ ಅವಕಾಶವೇ ಸಿಗಲಿಲ್ಲ. ಆಧುನಿಕ ತಂತ್ರಜ್ಞಾನ ಬಂದಿರುವಂತಹ ಹಿನ್ನೆಲೆಯಲ್ಲಿ rotator ಮೂಲಕ ಭೂಮಿಯನ್ನು ಉಳಮೆ ಮಾಡಿ ಅದರಲ್ಲಿದ್ದಂತಹ ಕಳೆಯನ್ನು ತೆಗೆದು ಹಾಕಿ ಸಾಲು ಬೆಳೆಯನ್ನಾದರೂ ಮಾಡಬಹುದಾಗಿತ್ತು. ಆದರೆ, ಬಿತ್ತನೆ ಮಾಡಿದ್ದ ಬೀಜ ಆಗಾಧವಾದ ಮಳೆಯಿಂದ ಭೂಮಿಯಲ್ಲಿಯೇ ಕೊಳೆತು ಹೋಯಿತು. ನಮ್ಮಲ್ಲಿ ಕಳೆಯನ್ನು ನಾಶ ಮಾಡಲಿಕ್ಕೆ ಆಗಲಿಲ್ಲ. ಬೆಳೆಗಿಂತ ಕಳೆಯೇ ಜಾಸ್ತಿ ಇದೆ.

ಮಾನ್ಯ ಸಭಾಪತಿಯವರೇ, ಒಟ್ಟಾರೆಯಾಗಿ, ನಾವು ಮಳೆ ಆಧಾರಿತವಾದ ಕೃಷಿ ಬೆಳೆಗಳನ್ನು ಬೆಳೆಯುವುದಕ್ಕೆ ಆಗಲಿಲ್ಲ. ಇಷ್ಟು ಮಳೆಯಾಗಿದೆ, ಮಳೆಯಿಂದ ಅಂತರ್ಜಲ ಹೆಚ್ಚಿಗೆ ಆಯಿತು. ನಾವು ಇಂತಹ ಸಂದರ್ಭದಲ್ಲಿ ಬೆಳೆಯನ್ನು ಬೆಳೆಯಬೇಕಾಗಿತ್ತು. ಆದರೆ, ಬೆಳೆಯನ್ನು ಬೆಳೆಯುವುದಕ್ಕೆ ಆಗಲಿಲ್ಲ. ಈ ವರ್ಷ ನಮ್ಮ ಜಿಲ್ಲೆಯಲ್ಲಿ ಸುಮಾರು 75% ಬೆಳೆ ಇಲ್ಲವಾಗಿದೆ. ಎಲ್ಲಾ ಬೆಳೆಗಳು ಸರ್ವನಾಶವಾಗಿವೆ. ಮುಂದಿನ ದಿನಮಾನಗಳಲ್ಲಿ ನಮ್ಮ ರೈತರ ದನಕರುಗಳಿಗೆ ಒಣಮೇವು ಇರುವುದಿಲ್ಲ. ಹೈನು ಉದ್ಯಮದಲ್ಲಿ ನಮ್ಮ ಚನ್ನಪಟ್ಟಣ ತಾಲ್ಲೂಕಿನಲ್ಲಿ ಸುಮಾರು 3 ಲಕ್ಷ ಲೀಟರ್ ಹಾಲು ಸಂಗ್ರಹಣೆಯಾಗುತ್ತದೆ. ಬೆಂಗಳೂರು ಹಾಲು ಒಕ್ಕೂಟಕ್ಕೆ ಸುಮಾರು 20 ಲಕ್ಷ ಲೀಟರ್ ಹಾಲು ಹೋಗುತ್ತದೆ. ಇದರಲ್ಲಿ ನಮ್ಮ ಜಿಲ್ಲೆ ಒಂದರಲ್ಲಿಯೇ 12 ಲಕ್ಷ ಲೀಟರ್ ಹಾಲು ಸಂಗ್ರಹಣೆ ಮಾಡಲಾಗುತ್ತದೆ. ಅಂದರೆ, ನಮ್ಮ ಜಿಲ್ಲೆ ಹೆಚ್ಚು ಹಾಲು ಉತ್ಪಾದನೆಯಲ್ಲಿ ರಾಜ್ಯದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ. ಆದರೆ, ಇವತ್ತಿನ ದಿನಮಾನಗಳಲ್ಲಿ ಹೈನು ಉದ್ಯಮ ಕುಸಿದು ಹೋಗಿದೆ. ಹಾಲಿನ ಸಂಗ್ರಹಣೆ ಕುಸಿದು ಹೋಗಿದೆ. ಏಕೆಂದರೆ, ದನಗಳಿಗೆ ಹಾಕುವಂತಹ ಮೇವಿನಲ್ಲಿ ನೀರಿನಾಂಶ ಇದೆ. ಮೇವವನ್ನು ಸಂಗ್ರಹಣೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ದನಕರುಗಳನ್ನು ಮೇಯಿಸುವುದಕ್ಕೆ ಸಾಧ್ಯವಾಗಲಿಲ್ಲ. ಮೇವಿನಲ್ಲಿ ನೀರಿನಾಂಶ ಹೆಚ್ಚಿಗೆ ಆಗಿದ್ದರಿಂದ ಹಾಲಿನಲ್ಲಿ ಕೊಬ್ಬಿನಾಂಶ ಬರಲಿಲ್ಲ. ಹಾಗಾಗಿ, ಹಾಲಿನ ದರ ಕುಸಿದು ಹೋಯಿತು. ಇದರಿಂದಲೂ ಸಹ ತೊಂದರೆ ಆಯಿತು.

ಮಾನ್ಯ ಸಭಾಪತಿಯವರೇ, ನಮ್ಮ ರೈತರಿಗೂ ಮತ್ತು Reelers ಗೂ ಯಾವ ರೀತಿ connection ಇದೆ ಎಂದು ಹೇಳಿದ್ದೇನೆ. ಮಳೆ ಬರುವವರೆಗೂ Cross Breed ರೇಷ್ಮೆ ಗೂಡು

ಪ್ರತಿ ಕೆ.ಜಿ.ಗೆ ರೂ.600/- ಗಳು ಇತ್ತು. Reelers ನವರು ರೈತರು ಬೆಳೆದಂತಹ ರೇಷ್ಮೆ ಗೂಡಿಗೆ ಪ್ರತಿ ಕೆಜಿಗೆ ರೂ.500/- ಗಳಿಂದ 600/-ಗಳನ್ನು ಕೊಟ್ಟು ಖರೀದಿ ಮಾಡುತ್ತಿದ್ದರು. ನಮ್ಮ ರಾಮನಗರದ ಟೌನ್‌ನಲ್ಲಿ ಆದಂತಹ ಅವಘಡದಿಂದ ಮಾರನೇ ದಿವಸವೇ ಕೆಜಿ ರೇಷ್ಮೆ ಗೂಡು ರೂ.300/-ಗಳಿಗೆ ಬಂತು. ರೇಷ್ಮೆಗೂಡನನ್ನು ಖರೀದಿ ಮಾಡಿದವರಿಗೆ reeling ಮಾಡಿದರೆ ಮಾತ್ರ ರೈತರಿಗೆ ಹಣ ಸಿಗುತ್ತದೆ. ಹಾಗಾಗಿ, ರೈತರ ಬದುಕು ನಾಶವಾಯಿತು. ಇನ್ನೂ ಸಾಂಪ್ರಾಯಿಕ ಬೆಳೆಗಳನ್ನು ಬೆಳೆಯುತ್ತಿದ್ದ ರೈತರಿಗೆ ಈ ವರ್ಷ ಬೆಳೆ ಇಲ್ಲದಂತಾಗಿದೆ. ಈಗಾಲಾದರೂ ಸಹ ಬಿತ್ತನೆ ಮಾಡೋಣವೆಂದರೆ ಬೀತ್ತನೆ ಮಾಡುವ ಸಮಯ ಮುಗಿದು ಹೋಗಿದೆ. ಇನ್ನೂ ನವೆಂಬರ್-ಡಿಸೆಂಬರ್ ತಿಂಗಳಿಗೆ ಚಳಿಗಾಲ ಪ್ರಾರಂಭವಾಗುತ್ತದೆ. ಹಾಗಾಗಿ, ರಾಗಿ ಮತ್ತು ಕಡಲೆ ಬೆಳೆಯನ್ನು ಬೆಳೆಯುವುದಕ್ಕೆ ಆಗುವುದಿಲ್ಲ. ಕೊನೆಯ ಪಕ್ಷ ಹುರಳಿಕಾಳನ್ನು ಸಹ ಬೆಳೆಯುವುದಕ್ಕೆ ಆಗುವುದಿಲ್ಲ. ಈ ವರ್ಷ ಸಂಪೂರ್ಣವಾಗಿ ನಮ್ಮ ಬದುಕು ಇಲ್ಲದಂತಾಗಿದೆ. ಈ ವರ್ಷ ರೈತರು ಕೃಷಿ ಬೆಳೆಗಳಿಂದ ಆಶಾದಾಯಕವಾಗಿ ಬದುಕುತ್ತೇನೆಂಬ ಮಾತೇ ಇಲ್ಲ. ಹಾಗಾಗಿ, ರೈತರು ಇಂದು ನಟ್ಟನಡುನೀರಿನಲ್ಲಿ ನಿಂತಿದ್ದಾರೆ. ಸರ್ಕಾರ ಅವರಿಗೆ ಇವತ್ತಿನವರೆಗೆ ಏನು ಪರಹಾರ ಘೋಷಣೆ ಮಾಡಿದೆ? ಅಲ್ಲದೇ, ರಾಮನಗರ ಮತ್ತು ಚನ್ನಪಟ್ಟಣಗಳಲ್ಲಿ ಮನೆಗಳು ಕುಸಿದಿವೆ. ಇದಕ್ಕೆ ಸರ್ಕಾರ ತ್ವರಿತವಾಗಿ ಏನಾದರೂ ಪರಿಹಾರ ಘೋಷಣೆ ಮಾಡಬೇಕಲ್ಲವೇ? ನಾನು ಕೇಂದ್ರ ಸರ್ಕಾರ ಸಮೀಕ್ಷೆಯನ್ನು ಮಾಡಿದ್ದನ್ನು ಕಂಡಿಲ್ಲ, ಯಾವ ವಿಮಾನದಲ್ಲಿಯೂ ಸಮೀಕ್ಷೆ ಮಾಡಿದ್ದನ್ನು ಕಂಡಿಲ್ಲ. ಯಾವ Helicopter ನಲ್ಲಿಯೂ ಸಮೀಕ್ಷೆ ಮಾಡಿದ್ದನ್ನು ನಾನು ಕಂಡಿಲ್ಲ. ಯಾರೂ ಬಂದು ಸಮೀಕ್ಷೆಯನ್ನು ಮಾಡಿದ್ದನ್ನು ನೋಡಿಲ್ಲ. ಈ ಸರ್ಕಾರ ಕೇಂದ್ರ ಸರ್ಕಾರಕ್ಕೆ ಎಷ್ಟು ಕೋಟಿ ರೂಪಾಯಿಗಳ ಅನುದಾನಕ್ಕೆ ಅಂದಾಜು ಕಳುಸಿದ್ದಾರೋ ಗೊತ್ತಿಲ್ಲ. ಇವರು ಎಷ್ಟು matching fund ಕೊಡುತ್ತಾರೋ ಗೊತ್ತಿಲ್ಲ. ಯಾವಾಗ ಹಣ ಕೊಡುತ್ತಾರೋ ಗೊತ್ತಿಲ್ಲ. ಅಲ್ಲಿನ ಜನರು ಗಂಜಿ ಹಂಬಲಿ ಕುಡಿದುಕೊಂಡು ಜೀವನ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತಾರೆಯೋ ಗೊತ್ತಿಲ್ಲ. "ಉತ್ತರನ ಪೌರುಷ ಒಲೆಯ ಮುಂದೆ" ಎನ್ನುವ ಗಾದೆ ಮಾತಿನಂತೆ ಸರ್ಕಾರ ಪ್ರಾರಂಭದಲ್ಲಿ ಎಲ್ಲವನ್ನು ಹೇಳಿತ್ತು.

ಮಾನ್ಯ ಸಭಾಪತಿಯವರೇ, ಈಗ ಸದನದಲ್ಲಿ ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರು ಇದ್ದಿದ್ದರೆ ಬಹಳ ಚೆನ್ನಾಗಿ ಇರುತ್ತಿತ್ತು. ಏಕೆಂದರೆ, ಮಾನ್ಯ ಸಚಿವರು ರಾಮನಗರವನ್ನು ಸ್ವಚ್ಛ ಮಾಡಿಬಿಡುತ್ತೇನೆಂದು ಹೇಳುತ್ತಿದ್ದರು. ಈಗ ಸ್ವಚ್ಛ ಮಾಡುವುದಕ್ಕೆ ಅವರಿಗೆ ಅವಕಾಶ ಇದೆ, ಮಾಡಿ

ಎಂದು ಹೇಳುತ್ತಿದ್ದೆ. ಇದರಲ್ಲಿ ದಯಮಾಡಿ ರಾಜಕೀಯ ಬೇಡ, ಈಗ ರಾಮನಗರ ಜನರ ಸೇವೆ ಮಾಡುವುದಕ್ಕೆ ಒಂದು ಅವಕಾಶ ಇದೆ ಮಾಡಿ ಎಂದು ಹೇಳುತ್ತಿದ್ದೆ. ಆದರೆ, ಅದರ ಬಗ್ಗೆ ಆ ಜಿಲ್ಲೆಯಲ್ಲಿ ಯಾವ ಸಭೆಯನ್ನು ಮಾಡಿದ್ದು ಕಂಡಿಲ್ಲ. ಈ ರೀತಿಯಾದರೆ ಹೇಗೆ ಸ್ವಾಮಿ? ಇದಕ್ಕೆ ಸರ್ಕಾರ ಸ್ಪಂದಿಸಬೇಕಲ್ಲವೇ? ನೊಂದ ಜರನ ಕಣ್ಣಿರನ್ನು ಹೊರೆಸುವಂಥದ್ದು ಯಾರ ಕರ್ತವ್ಯ? ಯಾವಾಗ ಹೊರಸಬೇಕು? ಇದಕ್ಕೆ ಒಂದು ಸಮಯ, ಗೊತ್ತು, ಗಳಿಗೆ, ಟೈಮ್‌ಟೇಬಲ್ ಹಾಕಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೇ? ಇಂತಹದ್ದನ್ನು ತ್ವರಿತವಾಗಿ ಮಾಡಬೇಕು. ನೆರೆ ಬಂದಂತಹ ಸಂದರ್ಭದಲ್ಲಿ ಯುದ್ಧೋಪಾದಿಯಲ್ಲಿ, ಪ್ರವಾಹೋಪಾದಿಯಲ್ಲಿ ಅಂದರೆ, ಪ್ರವಾಹ ಯಾವ ರೀತಿ ಬಂದು ಇಳಿಯುತ್ತದೆಯೋ, ಅದೇರೀತಿಯಲ್ಲಿ ನೆರವು ಸಹ ಯುದ್ಧೋಪಾದಿಯಲ್ಲಿ, ಪ್ರವಾಹೋಪಾದಿಯಲ್ಲಿ ಜನರ ನೆರವಿಗೆ ಹೋದಾಗ ಮಾತ್ರ ಅದನ್ನು ಸಮರ್ಥ ಸರ್ಕಾರ ಎಂದು ಹೇಳಬೇಕಾಗುತ್ತದೆ. ಇಲ್ಲವೆಂದರೆ, ನಾವು ಸರ್ಕಾರವನ್ನು ಏನೆಂದು ಹೇಳಬೇಕು? ವಿಫಲವಾದಂತಹ ಸರ್ಕಾರ, ಜನರ ನಿರೀಕ್ಷೆಯನ್ನು ತಲುಪುವುದಕ್ಕೆ ಸಾಧ್ಯವಾಗದಂತಹ ಒಂದು ಅಸಮರ್ಥ ಸರ್ಕಾರವೆಂದು ಹೇಳಬೇಕಲ್ಲವೆ? ಇಂತಹ ಅಸಮರ್ಥವಾದ ಸರ್ಕಾರವನ್ನು ಮಾಡಿಕೊಂಡು ಜನರ ಕಣ್ಣೀರನ್ನು ಒರೆಸುವಂಥದ್ದಕ್ಕೆ ಮಾತನಾಡಿಕೊಂಡು ಕುಳಿತುಕೊಂಡರೆ ಹೇಗೆ? ಮಾನ್ಯ ಮುಖ್ಯ ಮಂತ್ರಿಯವರು ಅಲ್ಲಿಗೆ ಬಂದು ಹೋಗಿದ್ದರೂ ಸಹ, ಇಲ್ಲಿಯವರಿಗೆ ಆ ಜನರಿಗೆ ಪರಿಹಾರ ಸಿಗಲಿಲ್ಲವೆಂದರೆ ನಾವು ಏನು ಮಾಡಬೇಕು?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಮ್ಮ ಕಡೆಗೆ ನೋಡಬಾರದೆ.,

(ಗೊಂದಲ)

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಅವರ ಕಡೆಗೆ ನೋಡಿ ಏನು ಪ್ರಯೋಜನ? ಮಾನ್ಯ ಸಭಾನಾಯಕರು ಬಹಳ ಚೆನ್ನಾಗಿ ಮಾತನಾಡುತ್ತಾರೆ. ನಾನು ಅವರ ಮಾತು ಕೇಳಿ ಏನು ಮಾಡಲಿ?

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಹಾಗೆಂದು ಮಾತು ಇಲ್ಲದೆ ಉತ್ತರ ಕೊಡುವುದಕ್ಕೆ ಆಗುತ್ತದೆಯೇ?

**(ಗೊಂದಲ)**

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಹಾಗಾದರೆ, ಮಾನ್ಯ ಸಭಾನಾಯಕರು ಉತ್ತರ ಹೇಳಲಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬುದ್ಧಿವಂತರಲ್ಲವೇ; ಯಾರಿಗಾದರೂ ಮಾತನಾಡದೆ ಉತ್ತರ ಕೊಡುವುದಕ್ಕೆ ಆಗುತ್ತದೆಯೇ? ಇಡೀ ನಮ್ಮ ರಾಜ್ಯಕ್ಕೆ ಒಂದೇ ಮಾನದಂಡ. ರಾಮನಗರವು ಸೇರಿದಂತೆ, ಯಾವ ಪ್ರದೇಶದಲ್ಲಿಯಾದರೂ ಸಹ ಅಧಿಕಾರಿಗಳ ಮೂಲಕ, ತಹಶೀಲ್ದಾರ್‌ರವರ ಮೂಲಕ V.A., R.I., ರವರ ರಿಪೋರ್ಟ್ ಮೂಲಕ ಪರಿಹಾರ ಒದಗಿಸುವಂತಹ ಕ್ರಮ ಇದೆ. ಈ ಹಿನ್ನೆಲೆಯಲ್ಲಿ ಎಲ್ಲಿಯಾದರೂ ಪರಿಹಾರ ಕೊಡುವುದು ನಿಂತಿದ್ದರೆ, ಮತ್ತೆ ಪರಿಶೀಲನೆ ಮಾಡುತ್ತೇವೆ. ಆ ಜಿಲ್ಲೆಯ ಜಿಲ್ಲಾಧಿಕಾರಿಯವರಿಗೆ ಸೂಚನೆ ಕೊಟ್ಟು, ಮಾನ್ಯ ಸದಸ್ಯರು ನೀಡಿರುವಂತಹ ಎಲ್ಲಾ ಅಂಕಿ-ಅಂಶಗಳನ್ನು ಕೊಟ್ಟು ಎಲ್ಲಿ ಆ ರೀತಿಯಾಗಿದೆ ಪರಿಹಾರವನ್ನು ಕೊಡಿ ಎಂದು ಆದೇಶವನ್ನು ಕೊಡುತ್ತೇವೆ. ಆ ಆದೇಶವನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುವಂತಹ ಸಂದರ್ಭದಲ್ಲಿ ಲೋಪಗಳು ಆಗಿದ್ದರೆ ಹೇಳಲಿ, ಸರ್ಕಾರ ಮಾಡಿದ್ದೇ ತಪ್ಪು ಎಂದು ಹೇಳಿದರೆ ಹೇಗೆ? ಇದರಲ್ಲಿ ಸರ್ಕಾರ ಹೇಗೆ ಅಸಮರ್ಥ? ಎಲ್ಲಾದರೂ ತಪ್ಪುಗಳು ಆಗಿದ್ದರೆ ಹೇಳಲಿ? ಅದನ್ನು ಸರಿಪಡಿಸುವಂತಹ ಕರ್ತವ್ಯ ನಮ್ಮದು ಮತ್ತು ಅವರದು ಒಟ್ಟಿಗೆ ಇದೆ. ಇದರಲ್ಲಿ ಯಾವುದೇ ಆತಂಕ ಬೇಡ. ನಾವು ಅವರ ಟೀಕೆಗಳನ್ನು ಸ್ವಾಗತ ಮಾಡುತ್ತೇವೆ. ತಪ್ಪುಗಳನ್ನು ತಿದ್ದಿಕೊಳ್ಳುವುದಕ್ಕೆ ಆಗುತ್ತದೆ. ವಿಚಾರಗಳು ಇದ್ದರೆ ಹೇಳಲಿ? ಅದನ್ನು ಬಿಟ್ಟು ಸರ್ಕಾರ ಅಸಮರ್ಥ ಎಂದು ಹೇಳಿದರೆ ಹೇಗೆ?

**ವೈಸ್ ಛೇರ್ಮನ್:-** ಮಾನ್ಯ ರವಿಯವರೇ, ತಾವು ಬೇಗ ಮಾತನಾಡಿ ಮುಗಿಸಿ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಆಯಿತು, ಬೇಗ ಮಾತನಾಡಿ ಮುಗಿಸುತ್ತೇನೆ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಬಹಳ ಸಂಭಾವಿತ ಸಚಿವರೆಂದು ಅವರ ಬಗ್ಗೆ ನನಗೆ ಅಪಾರವಾದಂತಹ ಗೌರವ ಇದೆ. ಮಾನ್ಯ ಸಚಿವರು ಸರ್ಕಾರವನ್ನೇ ತಪ್ಪು ಎಂದು ಮಾತನಾಡುವುದು ಸರಿಯೇ ಎಂದು ಕೇಳಿದ್ದಾರೆ. ನಾನು ಮಾತನಾಡಿದ್ದು ಸರಿ ಇದೆ. ಏಕೆಂದರೆ, ಸರ್ಕಾರ ತಪ್ಪೇ ಮಾಡಿಲ್ಲ.

ಹೆಚ್ಚು ಕೆಲಸ, ತಪ್ಪುಗಳು ಜಾಸ್ತಿ, ಸ್ವಲ್ಪ ಕೆಲಸ, ಸ್ವಲ್ಪ ತಪ್ಪುಗಳು. No work, no mistake. ಕೆಲಸವನ್ನೇ ಮಾಡದವರನ್ನು ಕೆಲಸ ಮಾಡಿದ್ದೀರಿ ಎಂದು ಹೇಳುವುದು ಎಲ್ಲಿಂದ ಬಂತು? ಕೆಲಸ ಮಾಡಿದ್ದರೆ ತಾನೆ, ತಪ್ಪುಗಳು ಆಗುವುದು, ನಡೆದಾಡಿದರೆ ತಾನೆ ಎಡವಿ ಬೀಳುವುದು, ಅವರು ಪುಣ್ಯಾತ್ಮರು ನಡೆಯಲೇ ಇಲ್ಲ. ಜೋಪಾನವಾಗಿದ್ದಾರೆ.

**ವೈಸ್ ಛೇರ್ಮನ್:-** ಮಾನ್ಯ ಸದಸ್ಯರೇ ಮಾನ್ಯ ಮುಖ್ಯಮಂತ್ರಿಯವರು ಬಂದು ಪರಿಶೀಲನೆ ಮಾಡಿದರು ಎಂದು ತಾವೇ ಹೇಳಿದ್ದೀರಿ ಅಲ್ಲವೇ; ಅದೇರೀತಿ ಪರಿಹಾರ ಬಿಡುಗಡೆಯಾಗಿದ್ದನ್ನು ಸಹ ಹೇಳಿದ್ದೀರಿ ಅಲ್ಲವೇ;

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಬಂದು ನೋಡಿ ಹೋದರು ಅಷ್ಟೇ, ನಮ್ಮ ಕಡೆ "ಹೋದ ಪುಟ್ಟ ಬಂದ ಪುಟ್ಟ" ಎಂಬ ಗಾದೆ ಮಾತನ್ನು ಹೇಳುತ್ತಾರೆ. ಸದನದಲ್ಲಿ ಈಗ ಎಷ್ಟು ಜನ ಸಚಿವರು ಇದ್ದಾರೆ ನೋಡಿ. ಈಗ ಮಹತ್ವ ಪೂರ್ಣವಾದ ಚರ್ಚೆ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಸಚಿವರು, ಅಧಿಕಾರಿಗಳು ಸದನಲ್ಲಿ ಕುಳಿತುಕೊಂಡು ಸಮಸ್ಯೆಗಳನ್ನು ಆಲಿಸಿ, ಅಲ್ಲಿನ ಜನರ ನೈಜವಾದಂತಹ ಸಮಸ್ಯೆಗಳಿಗೆ ಸಕರಾತ್ಮಕವಾಗಿ ಸ್ಪಂದಿಸುವಂತಹ ಕೆಲಸವನ್ನು ಮಾಡಬೇಕು. ಇವತ್ತು ಸದನದಲ್ಲಿ ಇಬ್ಬರು ಸಚಿವರು ಮಾತ್ರ ಇದ್ದಾರೆ. ಕೊನೆಯ ಪಕ್ಷ ಈ ಇಬ್ಬರು ಸಚಿವರಾದರೂ ಇದ್ದಾರಲ್ಲ, ಅದು ನಮ್ಮ ಪುಣ್ಯವೆಂದು ತಿಳಿದುಕೊಂಡು ಮಾತನಾಡಬೇಕಾಗಿದೆ. ನಮಗೆ ಬೇರೆ ವಿಧಿ ಇಲ್ಲ. ಮಾತನಾಡಬೇಕಾಗಿದೆ.

**ವೈಸ್ ಛೇರ್ಮನ್:-** ಮಾನ್ಯ ಸದಸ್ಯರೇ, ಸದನದಲ್ಲಿ ಮೂರು ಜನ ಸಚಿವರು ಹಾಜರಿದ್ದಾರೆ. ಅವರೆಲ್ಲರೂ powerful ಸಚಿವರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ವಾಸ್ತವಿಕ ಸ್ಥಿತಿಯನ್ನು ನೋಡುವುದೇ ಇಲ್ಲ. ಅವರಿಗೆ ನಮ್ಮ ಮೇಲೆ ಇರುವಂತಹ ಕೋಪಕ್ಕೆ ವಾಸ್ತವಿಕ ಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ಸದನದಲ್ಲಿ ನಾವು ಮೂರು ಜನ ಸಚಿವರು ಇದ್ದೇವೆ. ಆದರೆ, ಅವರು ಇಬ್ಬರು ಸಚಿವರು ಇದ್ದಾರೆಂದು ಹೇಳುತ್ತಿದ್ದಾರೆ. ನಾವು ಅಲ್ಲಿಗೆ ಪರಿಹಾರ ಕೊಟ್ಟಿದ್ದೇವೆ. ಆದರೆ, ಅವರು ಆ ಕಡೆಗೆ ನೋಡುವುದೇ ಇಲ್ಲ. ಅವರು ಪರಿಹಾರವನ್ನು ಕೊಡಲಿಲ್ಲ

ಎನ್ನುವುದರ ಬಗ್ಗೆ ಮಾತ್ರ ಮಾತನಾಡುತ್ತಾರೆ. ಅವರು ವಾಸ್ತವಿಕವಾದ ವಿಚಾರಗಳ ಬಗ್ಗೆ ಹೇಳಿದ್ದಕ್ಕೆ ಸರ್ಕಾರ ಸ್ಪಂದನೆ ಕೊಡುತ್ತದೆ. ಇದರಲ್ಲಿ ಯಾವುದೇ ಅನುಮಾನ ಇಲ್ಲ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ನಾನು ಸಹಕಾರಿ ಸಂಸ್ಥೆಯಲ್ಲಿ ಸಹಕಾರಿಯಾಗಿ ಕೆಲಸ ಮಾಡುತ್ತಿದ್ದೇನೆ. ನಾವು ನಮ್ಮ ಡಿ.ಸಿ.ಸಿ., ಬ್ಯಾಂಕಿನಲ್ಲಿ ಒಂದು Resolution ಮಾಡಿದೇವು. ಈಗ ಪರಿಸ್ಥಿತಿ ಈ ರೀತಿಯಾಗಿದೆ, ಇದು ನಮ್ಮ ಕಾರ್ಯವ್ಯಾಪ್ತಿಯ ಕ್ಷೇತ್ರವಾಗಿದ್ದು, ಕೊನೆಯ ಪಕ್ಷ ನಿರಾಶ್ರಿತರಿಗೆ ಒಂದು Gas stove, cooker ಈ ರೀತಿ ಏನಾದರೂ ಕೊಡೋಣ, ಜಿಲ್ಲಾಧಿಕಾರಿಯವರ ಮತ್ತು ನಗರಸಭೆಯಲ್ಲಿ ನಿರಾಶ್ರಿತರ ಪಟ್ಟಿ ಇರುತ್ತದೆ, ಅದನ್ನು ತೆಗೆದುಕೊಂಡು ಹಂಚಿಕೆ ಮಾಡೋಣ. ಅಲ್ಲದೇ, ಇದನ್ನು ಬ್ಯಾಂಕಿಗೆ ಬಂದಿರುವಂತಹ ಲಾಭಾಂಶದಲ್ಲಿ ಸುಮಾರು 25 ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಿ ಮಾಡೋಣವೆಂದು ಹೇಳಿದೆ. ಇದೇರೀತಿ Bamul ನವರಿಗೂ ಹೇಳಿದೆ. ಎಲ್ಲವೂ ಸೇರಿಸಿ ಏನಾದರೂ ಮಾಡೋಣವೆಂದು ಹೇಳಿದೆ. ಕೊನೆಗೆ, ಇದನ್ನು ಮಾಡುವುದಕ್ಕೆ R.C.S., ರವರ ಅನುಮತಿ ಬೇಕೆಂದು ಹೇಳಿದರು. ಸರ್ಕಾರದ ಅನುಮತಿ ಬೇಕೆಂದು ಹೇಳುತ್ತಾರೆ. ಈಗ ಸಹಕಾರಿ ಸಂಸ್ಥೆಗಳು ಅದರ ಲಾಭಾಂಶದಲ್ಲಿ ಇಂತಹ ಸಂದರ್ಭದಲ್ಲಿ ನಿರಾಶ್ರಿತರ ನೆರವಿಗೆ ಧಾವಿಸುವುದಕ್ಕೆ ಏಕೆ ಕಾನೂನಿನ ತೊಡಕು? ಇದರ ಬಗ್ಗೆ ನಾನು ಸಹಕಾರ ಸಚಿವರಲ್ಲಿ ಕೇಳಿದೆ. ಅದಕ್ಕೆ ಸಚಿವರು ನಾಳೆಯೇ ಆದೇಶ ಹೊರಡಿಸುತ್ತೇನೆಂದು ಹೇಳಿದರು. ಕೋವಿಡ್–19 ಬಂದಂತಹ ಸಂದರ್ಭದಲ್ಲಿ ಸಹಕಾರಿ ಸಂಸ್ಥೆಗಳ ಲಾಭಾಂಶದಲ್ಲಿ ನಿರಾಶ್ರಿತರ ನೆರಿವಿಗೆ ಧಾವಿಸಬಹುದೆಂದು ಇಡೀ ರಾಜ್ಯಕ್ಕೆ ಆದೇಶ ಅನ್ವಯವಾಗಿತ್ತು. ಮಾನ್ಯ ಸಚಿವರು ದಯಮಾಡಿ ಇದನ್ನು ನೋಟ್ ಮಾಡಿಕೊಂಡು ಮಾನ್ಯ ಸಹಕಾರ ಸಚಿವರಿಗೆ ಹೇಳುತ್ತಿರೋ, ಅಧಿಕಾರಿಗಳಿಗೆ ಹೇಳುತ್ತಿರೋ, R.C.S., ನವರಿಗೇ ಹೇಳುತ್ತೀರೋ ದಯವಿಟ್ಟು ಒಂದು ಆದೇಶವನ್ನು ಹೊರಡಿಸಿ. ಸರ್ಕಾರ ಮಾಡುವಂತಹ ಕೆಲಸವನ್ನು ಮಾಡಲಿ. ತುರ್ತಾಗಿ ಸಹಕಾರಿ ಸಂಸ್ಥೆಗಳು ಅಂತವರ ನೆರವಿಗೆ ಧಾವಿಸಲಿ. ಇದಕ್ಕೆ ಇರುವಂತಹ ಅಡತಡೆಗಳು ಏನೇ ಇರಲಿ, ಸಹಕಾರ ಸಂಸ್ಥೆಗಳು ಅದರ ಲಾಭಾಂಶದಲ್ಲಿ ಸ್ವಲ್ಪ ಭಾಗವನ್ನು ನಿರಾಶ್ರಿತರ ನೆರವಿಗೆ ಧಾವಿಸುವುದಕ್ಕೆ ಒಂದು ಅವಕಾಶವನ್ನು ಕೊಡಿ.

(ಮುಂದು.,)

**(889) 16-09-2022 (1.30) ಎಂ.ವಿ-ಎಂಡಿ(ವಿಕೆ) (ವೈಸ್ ಛರ್ಮನ್‌ರವರ ಉಪಸ್ಥಿತಿ)**

**ಶ್ರೀ ಎಸ್.ರವಿ (ಮುಂದು):-**

ಅದನ್ನು ಮಾಡುವುದಕ್ಕೆ ಕಾನೂನು ತೊಡಕು ಏಕೆ? ಇದನ್ನು ನೋಟ್ ಮಾಡಿಕೊಂಡು ಅದನ್ನು ಮಾಡಲಿ.

**ವೈಸ್ ಛೇರ್ಮನ್:-** ಮಾನ್ಯ ಸಭಾನಾಯಕರೆ, ತಾವು ಅದನ್ನು ನೋಟ್ ಮಾಡಿಕೊಂಡು ಇಲಾಖೆಯವರಿಗೆ ತಿಳಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಹಕಾರ ಸಂಘದ ಲಾಭಾಂಶದಲ್ಲಿ ಪ್ರವಾಹದಿಂದ ಸಂತ್ರಸ್ತರಾದವರಿಗೆ ನೆರವು ಕೊಡುತ್ತೇವೆಂದರೆ, ಅದಕ್ಕೆ ಸಹಕಾರವನ್ನು ಕೊಡಬಹುದು. ಸಹಕಾರ ಸಚಿವರ ಜೊತೆ ಮಾತನಾಡಿ, ಈ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆ. ಮಾನ್ಯ ಸದಸ್ಯರಿಗೆ ಇದು ಗೊತ್ತಿರಲಿ ಎಂದು ಹೇಳುತ್ತಿದ್ದೇನೆ. ನಾವು ಆ ಇಲಾಖೆ ಮತ್ತು ಈ ಇಲಾಖೆ ಎಂದು ನೋಡುವುದಿಲ್ಲ. ಈಗ ಕೆಲವು ಕಡೆಗಳಲ್ಲಿ ಪರಿಶಿಷ್ಟ ಜಾತಿಯ ಕೇರಿಗಳಲ್ಲಿ ಮನೆಗಳಿಗೆ ನೀರು ನುಗ್ಗಿ ಅವರ ಮನೆಗಳು ಬಿದ್ದಿವೆ ಹಾಗೂ ಇನ್ನಿತರೆ ಅನಾಹುತಗಳಾಗಿವೆ. ಬಿ.ಬಿ.ಎಂ.ಪಿ.ಯವರ ಜೊತೆಯಲ್ಲಿ ಮಾತನಾಡಿ, ಇಂತಹ ಕೇರಿಗಳಿಗೆ ನಮ್ಮ ಇಲಾಖೆಯ ವತಿಯಿಂದ ಸುಮಾರು ಎರಡು ಕೋಟಿ ರೂಪಾಯಿ ಹಣ ಬಿಡುಗಡೆ ಮಾಡಿದ್ದೇವೆ. ಪೌರ ಕಾರ್ಮಿಕರು ಇರುವಂತಹ ಕಡೆಗಳಲ್ಲಿ ಅವರ ಮನೆಗಳಿಗೆ ನೀರು ನುಗ್ಗಿ ಬಿಟ್ಟಿದೆ. ಸರ್ಕಾರ ಮತ್ತು ಬಿಬಿಎಂಪಿ ಕಡೆಯಿಂದ ಸಮಸ್ಯೆಯಾಗಬಾರದು ಎಂದು ನಮ್ಮ ಇಲಾಖೆಯಿಂದ ಎರಡು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ, ಅವರಿಗೆ ಬೇಕಾದಂತಹ ಆಹಾರದ ಪೊಟ್ಟಣ ಮತ್ತು ಪುನರ್ವಸತಿಯ ಕೆಲಸಗಳನ್ನು ಮಾಡುತ್ತಿದ್ದೇವೆ. ಈಗ ಇದಕ್ಕೆ ಸಹಕಾರಿ ಕ್ಷೇತ್ರ ಮತ್ತು ಇಲಾಖೆ ಎಂದು ಇಲ್ಲ. ಇದಕ್ಕೆ ಎಲ್ಲರೂ ಸಹ ಒಟ್ಟಾಗಿ ಧಾವಿಸಬೇಕಾಂದತಹ ಅನಿವಾರ್ಯತೆ ಇದೆ. ಮಾನ್ಯ ಸದಸ್ಯರಾದ ಶ್ರೀ ಎಸ್.ರವಿಯವರು ಹೇಳುವುದು ಸರಿಯಿದೆ.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಯವಿಟ್ಟು ಇದಕ್ಕೆ ಒಂದು time bound ಹಾಕಿಕೊಳ್ಳಲಿ. ಇದಕ್ಕೆ ತಡ ಮಾಡುವುದು ಬೇಡ. ಜಿಲ್ಲಾ ಉಸ್ತುವಾರಿ ಸಚಿವರು ಟೇಬಲ್ ತಟ್ಟಿಬಿಟ್ಟು, ಹೇ ಎಂದು ಅವಾಜ್ ಹಾಕಿಕೊಂಡು, ಮತ್ತೊಂದು ಮಾಡಿದರೆ

ಕೆಲಸವಾಗುವುದಿಲ್ಲ. ಕೆಲಸ ಮಾಡಿ ತೋರಿಸಬೇಕು. ಯಾರೋ ಪುಣ್ಯಾತ್ಮ ಮಂತ್ರಿ ಇದ್ದಾರೆ, ಅವರಿಗೆ ಸರಿಯಾದಂತಹ ಸೂಚನೆ ಕೊಟ್ಟು, ಅಧಿಕಾರಿಗಳ ಕಿವಿ ಹಿಂಡಿ, ಕಾನೂನು ಕಟ್ಟಳೆಗಳನ್ನು ಬಿಟ್ಟು ಆ ನೊಂದ ಜನರ ಬಳಿಗೆ ಧಾವಿಸುವಂಥದ್ದಾಗಲಿ. ರಾಜ್ಯ ಸರ್ಕಾರದಿಂದ ಹಣ ಬಿಡುಗಡೆ ಮಾಡುತ್ತಾರೆಂದು ಹೇಳಲಿ. ಅದೇ ರೀತಿ ಕೇಂದ್ರ ಸರ್ಕಾರದ ಕಥೆ ಏನು? ಕೇಂದ್ರ ಸರ್ಕಾರದವರಿಗೆ ಎಷ್ಟು estimation ಕಳುಹಿಸಿದ್ದಾರೆ. ಇವರು ಕಳುಹಿಸಿರುವಂತಹ estimation ಗೆ ಸ್ಪಂದಿಸುತ್ತಿದ್ದಾರೆಯೇ? ಇಷ್ಟು ದಿವಸಗಳಾದರೂ ಕೇಂದ್ರದಿಂದ ಯಾರಾದರೂ ಬಂದು ಭೇಟಿ ನೀಡಿದ್ದಾರೆಯೇ? ಇಷ್ಟು ದಿವಸವಾದರೂ ಸಹ ಇದುವರೆವಿಗೂ ಯಾರೂ ಬಂದಿಲ್ಲ.

**ಶ್ರೀ ಸಿ.ಎಂ.ಲಿಂಗಪ್ಪ:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದಿಂದ ಅಧಿಕಾರಿಗಳು ಬಂದಿದ್ದರು.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಸಿ.ಎಂ.ಲಿಂಗಪ್ಪನವರು ಕೇಂದ್ರ ಸರ್ಕಾರದಿಂದ ಯಾರೋ ಬಂದಿದ್ದರು ಎಂದು ಹೇಳಿದರು. ಆದರೆ, ನಾನು ಯಾರನ್ನು ಸಹ ನೋಡಿಲ್ಲ ಮತ್ತು ಯಾರು ಬಂದಿದ್ದರು ಎಂದು ಗೊತ್ತಿಲ್ಲ. ಆದರೆ, ಪತ್ರಿಕೆಯಲ್ಲಿ ಬಂದಿರುವುದನ್ನು ಓದಿದ್ದೇನೆ. ಆಯಿತು ಅವರು ಬಂದಿದ್ದರೆ ಬಹಳ ಸಂತೋಷ. ಆದರೆ, ಮಂತ್ರಿಗಳ ಮಟ್ಟದಲ್ಲಿ ಯಾರು ಬಂದಿಲ್ಲ. ಆದರೆ, ಅಧಿಕಾರಿಗಳ ಮಟ್ಟದಲ್ಲಿ ಬಂದಿರಬಹುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇದನ್ನು ಪರಿಶೀಲನೆ ಮಾಡುವುದಕ್ಕೆ ಕೇಂದ್ರದಿಂದ ಒಂದು ತಂಡ ಬಂದಿದೆ. ಅವರು ಇಡೀ ರಾಜ್ಯದಲ್ಲಿ ಸುತ್ತಾಟ ಮಾಡಿದ್ದಾರೆ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಸಾಧ್ಯವಾದರೆ, ದೇಶದ ಪ್ರಧಾನಮಂತ್ರಿಗಳನ್ನೋ ಅಥವಾ ಸಂಬಂಧಪಟ್ಟಂತಹ ಮಂತ್ರಿಗಳನ್ನೋ ಕರೆಯಿಸಲಿ. ಏಕೆಂದರೆ, ಇದು ಅಷ್ಟೊಂದು ತೀವ್ರತೆ ಇದೆ. ಅವರನ್ನು ಕರೆಯಿಸಿದಾಗ, ಅದನ್ನು ನೋಡಲಿ. ಅದನ್ನು ನೋಡಿದಾಗ ನಮ್ಮ ರಾಜ್ಯಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಆ ಕೆಲಸವನ್ನು ಮಾಡಬೇಕೆಂದು ತಮ್ಮ ಮೂಲಕ ಕೋರಿಕೊಳ್ಳುತ್ತೇನೆ. ಈ ಸಮಸ್ಯೆಯನ್ನು ಯಾವಾಗ ಪರಿಹರಿಸುತ್ತಾರೆಂದು, ಅವರು ನೀಡುವ ಉತ್ತರದಲ್ಲಿ ಬಹಳ ಸ್ಪಷ್ಟವಾಗಿ ಹೇಳಲಿ. ಏಕೆಂದರೆ, ಸಂತ್ರಸ್ತರು ಮಲಗಿಕೊಳ್ಳುವುದಕ್ಕೆ ಮನೆಗಳಿಲ್ಲ ಮತ್ತು ಅವರು ಅಡುಗೆ ಮಾಡಿಕೊಳ್ಳುವುದಕ್ಕೆ ಪಾತ್ರೆಗಳೇ ಇಲ್ಲ. ನಾವು ಈ ರೀತಿಯ ಗೋಳನ್ನು ನೋಡಿಕೊಂಡು ಇರುವುದು. ದಯವಿಟ್ಟು ಸಕಾರಾತ್ಮಕವಾಗಿ ಸ್ಪಂದಿಸುವಂತಹ ಹೃದಯವಂತ

ಸರ್ಕಾರವಾಗಲಿ. ಇಲ್ಲದೇ ಹೋದರೆ, ಇಂತಹ ನಿಷ್ಪ್ರಯೋಜಕ ಮತ್ತು ಅಸಮರ್ಥ ಸರ್ಕಾರವೆಂದು ಏನು ಹೇಳಿದ್ದೇನೆ, ಅದಕ್ಕೆ ಬದ್ಧನಾಗಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿಯಮ 68ರ ಅಡಿಯಲ್ಲಿ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು. ಕಳೆದ ಬಾರಿಯ ಅಧಿವೇಶನದಲ್ಲಿ ಎರಡು-ಮೂರು ಬಾರಿ ಮಾತನಾಡಬೇಕಾದಂತಹ ಸಂದರ್ಭದಲ್ಲಿ ತಾವೇ ಪೀಠದಲ್ಲಿ ಕುಳಿತ್ತಿದ್ದಿರಿ. ಇವತ್ತು ಸಹ ತಾವೇ ಪೀಠದಲ್ಲಿ ಕುಳಿತ್ತಿದ್ದೀರಿ. ಮಾನ್ಯ ಸದಸ್ಯರಾದ ಶ್ರೀ ಎಸ್.ರವಿಯವರು ರಾಮನಗರ ಜಿಲ್ಲೆಯ ಒಂದು ಚಿತ್ರಣವನ್ನು ನಮ್ಮ ಮುಂದೆ ಇಟ್ಟರು. ಆದರೆ, ನಾನು ಅಷ್ಟೊಂದು ದೀರ್ಘವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಮಲೆನಾಡಿನಲ್ಲಿ ಹುಟ್ಟಿದರೂ ಸಹ ಕರಾವಳಿಯಲ್ಲಿ ಬೆಳೆದಂತಹವನು. ನಾನು ಮೊನ್ನೆಯ ದಿವಸ ಕನ್ನಡಪ್ರಭ ಪತ್ರಿಕೆಯನ್ನು ನೋಡಿದಾಗ, ಎರಡು ತಿಂಗಳಿನಲ್ಲಿ ಮಳೆ ಅನಾಹುತಕ್ಕೆ 96 ಬಲಿ, 7,548 ಕೋಟಿ ರೂಪಾಯಿ ನಷ್ಟವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಮತ್ತೆ ಮಾನ್ಯ ಮಂತ್ರಿಗಳು, ನಾವು ಕೇಂದ್ರಕ್ಕೆ ಸುಮಾರು 1,012 ಕೋಟಿ ರೂಪಾಯಿಗಳ ಪರಿಹಾರಕ್ಕೆ ಮೊರೆ ಹೋಗಿದ್ದೇವೆಂದು ತಿಳಿಸಿದ್ದಾರೆ. ಆದರೆ, ಕೇಂದ್ರದಿಂದ ಎಷ್ಟು ಬಂದಿದೆ ಎಂದು ನಮಗೆ ಗೊತ್ತಿಲ್ಲ. ನಾನು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ಸೀಮಿತವಾಗಿ ಮಾತನಾಡುತ್ತೇನೆ. ನಾನು ಈ ಎರಡೂ ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಮಾತನಾಡಿ, ನಮ್ಮ ಜಿಲ್ಲೆಗೆ ಎಷ್ಟು ನಷ್ಟವಾಗಿದೆ, ಅದಕ್ಕೆ ಪರಿಹಾರವೇನು ಎಂದು ಒಂದು ಚಿತ್ರಣವನ್ನು ತೆಗೆದುಕೊಂಡೆ. ಮಾರನೇಯ ದಿವಸ ಬೆಂಗಳೂರಿನಲ್ಲಿ ಮಳೆ ಹಾನಿ, ತಡೆಗೆ ಸಿ.ಎಂ.ರವರಿಂದ ಮಾಸ್ಟರ್ ಪ್ಲಾನ್ ಎಂದು ಕನ್ನಡಪ್ರಭ ಪತ್ರಿಕೆಯಲ್ಲಿ ಬಂದಿದೆ. ನಾನು ಇದನ್ನು ನೋಡಿದಾಗ, ನನಗೆ ಅನಿಸುವುದು ಏನೆಂದರೆ, ಈಗ ಸುಮಾರು ಏಳು ಸಾವಿರ ಕೋಟಿ ನಷ್ಟವಾಗಿದೆ ಎಂದು ಹೇಳುತ್ತಿದ್ದಾರೆ. ಆದರೆ, ಸಾವಿರ ಕೋಟಿ ರೂಪಾಯಿಗಳಿಗೆ ಕೇಂದ್ರಕ್ಕೆ ಮೊರೆ ಹೋಗಿದ್ದಾರೆ. ಆದರೆ, ಎಷ್ಟು ಬಂದಿದೆ ಎಂದು ಗೊತ್ತಿಲ್ಲ. ಇದೇ ರೀತಿ ಎರಡೂ ಜಿಲ್ಲೆಗಳ ಚಿತ್ರಣವನ್ನು ನೋಡಿದಾಗ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 320 ಕೋಟಿ ರೂಪಾಯಿ ನಷ್ಟವಾಗಿದೆ. ಆದರೆ, ಅವರಿಗೆ ಇಲ್ಲಿಯವರೆಗೆ ಸುಮಾರು 30 ಕೋಟಿ ರೂಪಾಯಿ ಬಂದಿದೆ. ಅಂದರೆ, as per the norms, ಅವರು ನಷ್ಟವಾಗಿದೆ ಎಂದು ಹೇಳುತ್ತಿದ್ದಾರೆ as per the norms 30 ಕೋಟಿ ರೂಪಾಯಿ ಎಂದು ಹೇಳುತ್ತಿದ್ದಾರೆ. ಉಡುಪಿ ಜಿಲ್ಲೆಯಲ್ಲಿ 255 ಕೋಟಿ ರೂಪಾಯಿ ಹಾನಿಯಾಗಿದೆ ಎಂದು ಹೇಳುತ್ತಾರೆ. ಆದರೆ, as per the norms 25 ಕೋಟಿ ರೂಪಾಯಿಗಳು ಎಂದು ಇದೆ. ನಾನು ಇದು ಯಾವುದು as per the norms ಎನ್ನುವಂತಹ ಚಿತ್ರಣವನ್ನು

ನೋಡಿದಾಗ, ಎಸ್.ಡಿ.ಆರ್.ಎಫ್ ಮತ್ತು ಎನ್.ಡಿ.ಆರ್.ಎಫ್.ನವರು ಒಂದು norms ಅನ್ನು ನೀಡಿದ್ದಾರೆ. ಅವರು ಈ norms ಅನ್ನು ಯಾವಾಗ ನೀಡಿದ್ದಾರೆಂದರೆ, ಅವರು 2015ರಲ್ಲಿ ಒಂದು ದರವನ್ನು ಪರಿಷ್ಕರಣೆ ಮಾಡಿದ್ದಾರೆ. ಕಳೆದ ಏಳು ವರ್ಷಗಳಿಂದ ಅದರ ದರವನ್ನು ಪರಿಷ್ಕರಣೆ ಮಾಡಿಲ್ಲವೆನ್ನುವುದು ನನಗೆ ತಿಳಿದಿರುವ ಮಾಹಿತಿ. ಆದರೆ, ನನಗೆ ಸರ್ಕಾರದ ಬಗ್ಗೆ ಗೊತ್ತಿಲ್ಲ. ನನಗೆ ಗೊತ್ತಿರುವ ಪ್ರಕಾರ ಕಳೆದ ಏಳು ವರ್ಷದಿಂದ ಅದರ ದರವನ್ನು ಪರಿಷ್ಕರಣೆ ಮಾಡಿಲ್ಲ. ಕಳೆದ ಏಳು ವರ್ಷದಲ್ಲಿ ಎಷ್ಟು ಬೆಲೆ ಏರಿಕೆಯಾಗಿದೆ? ಅವತ್ತು ಕಬ್ಬಿಣ ಮತ್ತು ಸಿಮೆಂಟ್‌ನ ಬೆಲೆ ಎಷ್ಟು ಇತ್ತು? ಇವತ್ತು ಕಬ್ಬಿಣ ಮತ್ತು ಸಿಮೆಂಟ್‌ನ ಬೆಲೆ ಎಷ್ಟು ಇದೆ? ಕಳೆದ ಏಳು ವರ್ಷದ ದರವನ್ನು ನಮೂದಿಸಿ ನಮಗೆ ಪರಿಹಾರ ಕೊಡುವುದಾದರೆ, ಇವತ್ತು ಸರ್ಕಾರವೇ ಸುಮಾರು ಏಳು ಸಾವಿರ ಕೋಟಿ ರೂಪಾಯಿಗಳಷ್ಟು ಅಂದಾಜು ಮಾಡಿ, ಕೇಂದ್ರ ಸರ್ಕಾರಕ್ಕೆ ಕೇವಲ ಒಂದು ಸಾವಿರ ರೂಪಾಯಿಗಳನ್ನು ಕೇಳಿದರೆ, ಇನ್ನು ಎಷ್ಟು ಹಣ ನೀಡಿದ್ದಾರೆ ಎಂಬುದು ಗೊತ್ತಿಲ್ಲ. ಇದು ಒಂದು ಕಡೆ. ನಾನು ಸರ್ಕಾರದ ಹಿರಿಯ ಮಾನ್ಯ ಸಚಿವರಾದ ಶ್ರೀ ಜೆ.ಸಿ.ಮಾಧುಸ್ವಾಮಿಯವರ ಮುಖಾಂತರ ಮನವಿ ಮಾಡಿಕೊಳ್ಳುವುದೇನೆಂದರೆ, ಸರ್ಕಾರ ಏನು as per the norms rate ಇದೆ. ಸರ್ಕಾರ ಇದನ್ನು ಏಕೆ ಪ್ರತಿ ಎರಡು ವರ್ಷಕ್ಕೊಮ್ಮೆ ನವೀಕರಿಸುವುದಿಲ್ಲ. ಇದಕ್ಕೆ ಏಕೆ ಐದು ವರ್ಷ ಕಾಯಬೇಕು? ಈಗ ಐದು ವರ್ಷ ಮುಗಿದು ಏಳು ವರ್ಷವಾದರೂ ಮಾಡುವುದಿಲ್ಲ ಏಕೆ?

ಎರಡನೆಯದಾಗಿ, ನಾನು ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳಲ್ಲಿ ಹುಟ್ಟಿದಂತಹವನು. ನಮಗೆ ಮಳೆಗಾಲ ಬರುತ್ತದೆ ಎಂದು ಗೊತ್ತಾದಾಗ, ಆ ಮಳೆಗಾಲದ ಚಿತ್ರಣ ನಮ್ಮ ಬಳಿ ಇರುತ್ತದೆ. ನಮ್ಮ ಹಿರಿಯರು ಎರಡು-ಮೂರು ತಿಂಗಳಿಗೆ ಏನು ಬೇಕು ಎನ್ನುವುದನ್ನು ತಿಳಿದುಕೊಂಡು ಎಲ್ಲಾ ಸೌಲಭ್ಯಗಳನ್ನು ಮಾಡಿಕೊಂಡಿರುತ್ತಾರೆ. ಮಳೆಗಾಲದಲ್ಲಿ ಯಾವ್ಯಾವ ಗದ್ದೆಗಳಿಗೆ ನೀರು ಬರುತ್ತದೆ. ಹಾಗೆ ಎಲ್ಲೆಲ್ಲಿ ಮನೆಗಳು ಸೋರುತ್ತವೆ ಎನ್ನುವುದನ್ನು ತಿಳಿದುಕೊಂಡು, ಅದಕ್ಕೆ ಬೇಕಾದಂತಹ ಸೌಕರ್ಯಗಳನ್ನು ಮಾಡಿರುತ್ತೇವೆ. ಈಗ ಇಷ್ಟು ದೊಡ್ಡ ಸರ್ಕಾರ ಮತ್ತು ಇಷ್ಟೊಂದು ಅಧಿಕಾರಿಗಳು ಇದ್ದಾರೆ. ಮತ್ತೆ ಪ್ರತಿ ವರ್ಷ ಮಳೆ ಬರುತ್ತಿದೆ. ಆದರೆ, ಏಕೆ ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳುತ್ತಿಲ್ಲ. ಈಗ ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳುತ್ತಿಲ್ಲವೆಂದು ಹೇಳುತ್ತಿಲ್ಲ. ಅದನ್ನು ಒಂದು ನಿರ್ದಿಷ್ಟ ಮಟ್ಟದ ಯೋಚನಾ ಮಟ್ಟಕ್ಕೆ ತೆಗೆದುಕೊಳ್ಳುತ್ತಿದ್ದಾರೆಯೇ? ಏಕೆಂದರೆ, ಇವತ್ತಿನ ದಿವಸ ತಾಂತ್ರಿಕತೆ ಇಷ್ಟೊಂದು ಮಟ್ಟಕ್ಕೆ ಬೆಳೆದಿದೆ ಎಂದರೆ, ಮಳೆ ಎಲ್ಲಿ ಬರುತ್ತಿದೆ ಎಂದು ಗೊತ್ತಾಗುತ್ತದೆ. ಮಾನ್ಯ ಸಚಿವರು ಮಂಗಳೂರಿನ ಎರಡು-ಮೂರು ಜಾಗದ ಹೆಸರುಗಳನ್ನು ಹೇಳುತ್ತಿದ್ದರು. ಮೊದಲು ಅಲ್ಲಿ ಏನು ಇತ್ತು?

ಈಗ ಅಲ್ಲಿ ಏನಾಗಿದೆ? ಎಲ್ಲಾ ಕೆರೆಗಳನ್ನು ಒತ್ತುವರಿ ಮಾಡಿಕೊಂಡಿರುವಂಥದ್ದು, ಇವತ್ತು ಎಲ್ಲಿ ಮಳೆ ಬಿದ್ದಿದೆ, ಮನೆ ಬಿದ್ದಿದೆ. ಈ ರೀತಿ ಇದ್ದರೂ ಸಹ ಪಕ್ಕದಲ್ಲಿ ಅಪಾರ್ಟ್‌ಮೆಂಟ್ ಕಟ್ಟುವುದಕ್ಕೆ ಅನುಮತಿ ನೀಡಲಾಗುತ್ತಿದೆ. ಅಲ್ಲಿ ನೀರು ಹೋಗುವುದಕ್ಕೆ ಏನಾದರೂ ವ್ಯವಸ್ಥೆ ಇದೆಯೇ? ಅಲ್ಲಿ ಒಳಚರಂಡಿಗಳ ವ್ಯವಸ್ಥೆ ಇದೆಯೇ? ಇದಕ್ಕೆ ಯಾರು ಹೊಣೆ? ನಾವು ಚುನಾಯಿತ ಪ್ರತಿನಿಧಿಗಳು ಐದು ವರ್ಷ ಅಥವಾ ಹತ್ತು ವರ್ಷ ಇರುತ್ತೇವೆ. ನಾವು ಬರುತ್ತೇವೆ ಮತ್ತು ಹೋಗುತ್ತೇವೆ. ಆದರೆ, ಅಧಿಕಾರಿಗಳು ಸುಮಾರು 35 ವರ್ಷ ಅಲ್ಲಿ ಇರುತ್ತಾರೆ. ನೀವು ಏಕೆ ಅವರನ್ನು ಹೊಣೆಗಾರರನ್ನಾಗಿ ಮಾಡುವುದಿಲ್ಲ? ಇಷ್ಟೊಂದು ಅನಾಹುತ ಆಗುತ್ತಿದೆ ಎಂದರೆ, ಅದಕ್ಕೆ ಯಾವ ಅಧಿಕಾರಿ ಅನುಮತಿ ನೀಡಿರುತ್ತಾನೆ? ಯಾರು ಅದನ್ನು ಒತ್ತುವರಿ ಮಾಡಿರುತ್ತಾರೆ? ಈಗ ಯಾವುದೇ ಸರ್ಕಾರ ಬರಬಹುದು ಮತ್ತು ಯಾರೇ ಮಂತ್ರಿಗಳು ಇರಬಹುದು. ನಾವು ಇದರ ಬಗ್ಗೆ ಏಕೆ ಯೋಚನೆ ಮಾಡುವುದಿಲ್ಲ. ನಾವು ಇದರ ಬಗ್ಗೆ ಯೋಚನೆ ಮಾಡಿದಾಗ, ಮುಂದೆ ಏನು ತೊಂದರೆಯಾಗುತ್ತದೆ ಎಂಬುದನ್ನು ತಿಳಿದುಕೊಂಡು ಅದನ್ನು ನಿಲ್ಲಿಸಬಹುದಲ್ಲವೆ. ಅವರು ಅದನ್ನು ಮಾಡಲಿ. ಆಮೇಲೆ ಒಂದು ಬಹಳ ಆಶ್ಚರ್ಯವೆಂದರೆ, ಮಳೆಗಾಲ ಬಂದಾಗ ಮಂತ್ರಿಗಳು ಬರುತ್ತಾರೆ, ಅಧಿಕಾರಿಗಳು ಬರುತ್ತಾರೆ, ಸಭೆಗಳನ್ನು ಮಾಡುತ್ತಾರೆ. ಅದಾದ ನಂತರ ಏನಾಗಿದೆ? ನಾನು ಎಷ್ಟೋ ಅಧಿಕಾರಿಗಳನ್ನು ಕೇಳಿದಾಗ, ಹಣ ಬಿಡುಗಡೆಯಾಗಿದೆ ಎಂದು ತಿಳಿಸುತ್ತಾರೆ. ಆದರೆ, ಇನ್ನೊಂದು ಮಳೆಗಾಲ ಬಂದಾಗಲೂ ಸಹ ಆ ಹಣ ಸಿಕ್ಕಿರುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಿಯಮ ಹೇಗೆ ಇದೆ ಎಂದರೆ, ನನ್ನ ಉಸ್ತುವಾರಿ ಜಿಲ್ಲೆಯಲ್ಲಿ ಪ್ರವಾಹ ಬಂತು. ಒಂದೇ ದಿವಸ ಸುಮಾರು ಎರಡು ಸಾವಿರ ಮನೆಗಳಿಗೆ ನೀರು ನುಗ್ಗಿದಂತಹ ಪರಿಸ್ಥಿತಿ ಉಂಟಾಯಿತು. ಅದನ್ನು 24 ಗಂಟೆಗಳಲ್ಲಿ ಸರ್ವೇ ಮಾಡುವುದು ಕಷ್ಟ. ಎಲ್ಲಾ ಇಲಾಖೆಯ ಅಧಿಕಾರಿಗಳನ್ನು ನಿಯೋಜಿಸಿದರೂ ಕೂಡ ಸರ್ವೇ ಮಾಡುವುದಕ್ಕೆ ಸುಮಾರು 48 ಗಂಟೆ ಬೇಕಾಯಿತು. ಆ ರೀತಿ ಸರ್ವೇ ಮಾಡಿದ 24 ಗಂಟೆಯೊಳಗೆ ಶೇಕಡಾ 75ರಷ್ಟು ಜನರಿಗೆ ಹಣ ಪಾವತಿ ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಮನೆಗಳು ಬಿದ್ದಿರುವುದಕ್ಕೆ ನಿರಾಶ್ರಿತರಿಗೆ ಪಕ್ಕದ ಶಾಲೆಯಲ್ಲಿ ಕಾಳಜಿ ಕೇಂದ್ರಗಳನ್ನು ತೆರೆದಿದ್ದೇವೆ. ಅವರಿಗೆ ಊಟದ ವ್ಯವಸ್ಥೆ, ರಗ್ಗು ಮತ್ತು ಬಟ್ಟೆಗಳನ್ನು ನೀಡುತ್ತೇವೆ. ಆ ರೀತಿಯ ಕೆಲಸವಾಗಿದೆ. ಆದರೆ, ಇದಕ್ಕೆ ಒಂದು ವರ್ಷದವರೆಗೆ ಕಾಯುವಂತಹ ಪರಿಸ್ಥಿತಿ ಇಲ್ಲ. ಈಗ ಅನಿವಾರ್ಯವಾಗಿ ಹೊಸದಾಗಿ ಮನೆ ಕಟ್ಟಬೇಕು ಎಂದಾಗ ಅದಕ್ಕೆ ಒಂದು ವರ್ಷವಾಗಬಹುದು. ಆದರೆ, ಈಗ ಇರುವುದಕ್ಕೆ ಕನಿಷ್ಠಪಕ್ಷ ಮೂರ್ನಾಲ್ಕು

ದಿವಸದಲ್ಲಿ ಪರಿಹಾರ ನೀಡುತ್ತೇವೆ. ಅದು ಮಾನ್ಯ ಸದಸ್ಯರ ಮನಸ್ಸಿನಲ್ಲಿ ಇರಲಿ ಎಂದು ಹೇಳಿದೆ. ಅವರು ಹೇಳಿದ್ದು ತಪ್ಪು ಎಂದು ಹೇಳುವುದಿಲ್ಲ.

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ಪೂರ್ಣ ಅಲ್ಲ ಸ್ವಲ್ಪವಾಗಿರಬಹುದು. ಅದರ ಬಗ್ಗೆ ಏನೂ ಇಲ್ಲ. ಆದರೆ, ನಾನು ಹೇಳುವುದು ಈಗ ಮನೆಗಳದ್ದು ಒಂದು ಕಡೆ, ಮತ್ತೊಂದು ಕಡೆ ಸಾರ್ವಜನಿಕ ಕಟ್ಟಡಗಳು ಮತ್ತು ಸಾರ್ವಜನಿಕ ರಸ್ತೆಗಳು ಶಾಶ್ವತವಾಗಿ ಇರುತ್ತದೆಯೇ? ನಾವು ಇವುಗಳ ಬಗ್ಗೆ ಏಕೆ ಯೋಚನೆ ಮಾಡುತ್ತಿಲ್ಲ. ನಮಗೆ ಅನಾಹುತ ಆಗುವುದು ಎಷ್ಟು ಎಂದರೆ, ಈಗ ದೊಡ್ಡ ಆನೆಯಷ್ಟು ಅನಾಹುತವಾದರೆ, ಒಂದು ಇರುವೆಯಷ್ಟು ಪರಿಹಾರ ಸಿಗುತ್ತದೆ. ಅದರೆ, ಸರ್ಕಾರ ಪೂರ್ತಿ ಪರಿಹಾರವನ್ನು ಕೊಡಬೇಕೆಂದು ನಾನು ಕೇಳುವುದಿಲ್ಲ. ಆದರೆ, ಇರುವಂತಹ ವಾಸ್ತವ ಸ್ಥಿತಿಯನ್ನು ಅವರ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಆದರೆ, ಈ ಎಸ್.ಡಿ.ಆರ್.ಎಫ್ ಮತ್ತು ಎನ್.ಡಿ.ಆರ್.ಎಫ್.ಗಳಲ್ಲಿ ಎಷ್ಟೋ ವಿಷಯಗಳು as per the norms ಬರುವುದಿಲ್ಲವಂತೆ. ನಾನು ಆ ಪಟ್ಟಿಯನ್ನು ನೋಡಬೇಕು ಎಂದಾಗ, ಈಗ ಎಷ್ಟೋ ಅನಾಹುತಗಳಾಗಿರುತ್ತವೆ. ಆ ಪಟ್ಟಿಯಲ್ಲಿ ಪರಿಹಾರ ಬರುವುದಿಲ್ಲ. ಹಾಗಾದರೆ, ಆ ಪಟ್ಟಿಯಲ್ಲಿ ಬರುವುದಿಲ್ಲವೆನ್ನುವುದಾದರೆ, ಅವರಿಗೆ ಪರಿಹಾರ ಸಿಗುವುದಿಲ್ಲವೇ? ನಾವು ಅದರ ಬಗ್ಗೆ ಯೋಚನೆ ಮಾಡಬೇಕಲ್ಲವೇ? ಎಸ್.ಡಿ.ಆರ್.ಎಫ್. ಮತ್ತು ಎನ್.ಡಿ.ಆರ್.ಎಫ್.ಗಳಿಗೆ ಯಾರು ರೂಲ್ಸ್ ಮತ್ತು ರೆಗುಲೇಷನ್‌ಗಳನ್ನು ಮಾಡುತ್ತಾರೆ. ಅದರ ಬಗ್ಗೆ ಅವರು ವಾಸ್ತವ ಸ್ಥಿತಿಯನ್ನು ನೋಡಿಕೊಂಡು ಆ norms ಅನ್ನು adopt ಮಾಡಬೇಕು ಎಂದು ನನ್ನ ಮನವಿ. ಆಮೇಲೆ ನನ್ನ ಮತ್ತೊಂದು ಮನವಿ ಏನೆಂದರೆ, ಕಡಲ್ಕೋರೆತಕ್ಕೆ ಎಸ್.ಡಿ.ಆರ್.ಎಫ್ ಮತ್ತು ಎನ್.ಡಿ.ಆರ್.ಎಫ್. ಸೇರುತ್ತದೆಯೋ ಇಲ್ಲವೋ?

**(ಮುಂದು...)**

(890) 16.09.2022 01.40 LL-MD(VK) **(ವೈಸ್ ಚೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಮಂಜುನಾಥ್ ಭಂಡಾರಿ(ಮುಂದು):-**

ಏಕೆಂದರೆ, ಕಡಲ ಕೊರೆತಕ್ಕೆ ಪರಿಹಾರ ನೀಡುವುದಕ್ಕೆ ಬರುವುದಿಲ್ಲವೆಂದು ಅವರು ಹೇಳುತ್ತಾರೆ. ಹಾಗಾದರೆ, ಕಡಲ ಕೊರೆತ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಯಲ್ಲಿ ಎಷ್ಟು ದಿನಗಳಿಂದ

ಆಗುತ್ತಿದೆ? ಅದು ಯಾವುದೇ ಸರ್ಕಾರದ ಅವಧಿಯಲ್ಲಾದದರೂ ಸರಿ, ಅದು ಆಗುತ್ತಿಲ್ಲವೇ? ಇದಕ್ಕೆ ನಮ್ಮಲ್ಲಿ ವೈಜ್ಞಾನಿಕವಾಗಿ ಮುಂಜಾಗ್ರತಾ ಕ್ರಮಗಳು ಇರುವುದಿಲ್ಲವೇ? ಇದು ಕೇವಲ ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ಮಾತ್ರ ಸಂಬಂಧಿಸಿರುತ್ತದೆಯೇ? ನಮ್ಮ ಭಾಗದಲ್ಲಿ ಮಳೆಗಾಲದಲ್ಲಿ ಕೆಲವು ಜನರಿಗೆ ಬಹಳಷ್ಟು ಸಂತೋಷವಾಗುತ್ತದೆ. ಏಕೆಂದರೆ, ಕಡಲಿಗೆ ಕಲ್ಲು ಹಾಕುವಂತಹ ಕೆಲಸ ಸಿಗುತ್ತಿದೆ ಎನ್ನುವುದಾಗಿದೆ. ಅದು ಯಾವ ರೀತಿ ಸಿಗುತ್ತದೆ ಎಂದು ನನಗೆ ಗೊತ್ತಿಲ್ಲ. ಆದರೆ, ಇನ್ನು ಕೆಲವರು ಮಳೆ ಬಂದು ಯಾವಾಗ ಈ ರೀತಿ ಪ್ರವಾಹ ಆಗುತ್ತದೆ ಎಂದು ಕಾಯುವವರು ಸಹ ಇದ್ದಾರೆ. ಏಕೆಂದರೆ, ಆ ಸಂದರ್ಭದಲ್ಲಿ ಕೂಡಲೇ ನಾವು ಪರಿಹಾರ ಕೊಡಬೇಕಾಗುತ್ತದೆ. ಅದಕ್ಕೆ ಯಾವುದೇ ಟೆಂಡರ್ ಮಾಡುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ನಾವು ಏತಕ್ಕೆ ಒಂದು permanent structure ಮಾಡುವುದಕ್ಕೆ ಆಗುವುದಿಲ್ಲ ಅಥವಾ ಇದರ ಬಗ್ಗೆ ಒಂದು ಆಲೋಚನೆ ಮಾಡುವುಕ್ಕೆ ಆಗುವುದಿಲ್ಲ. ಇವೊತ್ತಿನ ದಿವಸ ಇದಕ್ಕಾಗಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಹಣ ಇದೆ. ಹಾಗಾಗಿ, ನಾನು ಹೇಳುವುದೇನೆಂದರೆ, ಆ ಹಣವನ್ನು ಮುಂಚಿತವಾಗಿ ಬಿಡುಗಡೆ ಮಾಡಿಕೊಡಬೇಕು. ಅವರಿಗೆ ನಾರ್ಮ್ಸ್ ಕೊಡಬೇಕು. ಆ ಪ್ರಕಾರ ಅನುದಾನವನ್ನು ಬಿಡುಗಡೆ ಮಾಡಬೇಕು. ಈ ರೀತಿ ವೈಜ್ಞಾನಿಕವಾಗಿ ಏತಕ್ಕೆ ನಾವು ಯೋಚನೆ ಮಾಡುವುದಿಲ್ಲ? ಪ್ರತಿ ವರ್ಷದ ಜುಲೈ-ಆಗಸ್ಟ್ ತಿಂಗಳನಲ್ಲಿ ಮಳೆ ಬರುತ್ತದೆ. ಅಲ್ಲದೇ, ಬೆಂಗಳೂರಿನಲ್ಲಿ ಯಾವಾಗ ಮಳೆ ಬರುತ್ತದೆ, ಮಂಗಳೂರಿನಲ್ಲಿ ಯಾವಾಗ ಮಳೆ ಬರುತ್ತದೆ ಎನ್ನುವ ಸಂಪೂರ್ಣ ಚಿತ್ರಣ ನಮ್ಮಲ್ಲಿರುತ್ತದೆ. ಇದರ ಬಗ್ಗೆ ನಾವು ಏತಕ್ಕೆ ಯೋಚನೆ ಮಾಡಬಾರದು. ಮಳೆ ಬಂದಾಗ, ಮಾನ್ಯ ಮುಖ್ಯಮಂತ್ರಿಗಳು ಬರುವಂಥದ್ದು, ಮಾನ್ಯ ಮಂತ್ರಿಗಳು ಬರುವಂಥದ್ದು, ಇದು ಸಹಜವಾಗಿ ಆಗುವಂತಹ ಕೆಲಸಗಳಾಗಿವೆ. ಇದಕ್ಕೆ ಒಂದು ಶಾಶ್ವತವಾದ ನೆಲೆಯನ್ನು ನಾವು ಇಡಬೇಕು ಎನ್ನುವುದು ನನ್ನ ಒಂದು ಕೋರಿಕೆಯಾಗಿದೆ.

ಇವೊತ್ತಿನ ದಿವಸ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆದಂತಹ ಅನಾಹುತಗಳ ಬಗ್ಗೆ ನಾನು ಪುನಃ ಒತ್ತಿ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಇತ್ತೀಚೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಅನಾಹುತಗಳು ಆಗಿದೆ ಎನ್ನುವುದಕ್ಕೆ ಆ ಭಾಗದ ಮಂತ್ರಿಗಳು ಈ ಸದನದಲ್ಲಿ ಹಾಜರಿದ್ದು, ಅವರಿಗೆ ಈ ಬಗ್ಗೆ ಚೆನ್ನಾಗಿ

ಗೊತ್ತಿರುತ್ತದೆ. ಆದರೆ, ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದಲ್ಲಿ, ಬೆಳ್ತಂಗಡಿ ಅಥವಾ ಬೈಂದೂರು ತಾಲ್ಲೂಕಿನ ಬಗ್ಗೆ ನಿನ್ನೆಯ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಅದೇನೆಂದರೆ, "ಬೈಂದೂರಿನಲ್ಲಿ ಶಾಲೆಗೆ ಹೋಗುವಂತಹ ಮಗು ಕಾಲುಸಂಕ ದಾಟುವಾಗ ಪ್ರವಾಹದಲ್ಲಿ ಬಿದ್ದು ಮೃತಪಟ್ಟಿರುತ್ತದೆ" ಎಂದು. ನಾವು ಕೇವಲ ಒಂದು ಗ್ರಾಮ ಪಂಚಾಯಿತಿಯಲ್ಲಿ ನೋಡುವುದಾದರೆ, ಸುಮಾರು 10 ರಿಂದ 15 ಕಾಲುಸಂಕಗಳು/ತೂಗು ಸೇತುವೆಗಳು ಅಲ್ಲಿ ಇರುತ್ತವೆ. ಅದನ್ನು ನಾವು ಏತಕ್ಕೆ ಶಾಶ್ವತವಾಗಿ ನಿರ್ಮಾಣ ಮಾಡುವುದಕ್ಕೆ ಆಗುವುದಿಲ್ಲ? ಈ ಬಗ್ಗೆ ನಾನು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು, ಅದರಲ್ಲಿ "ಇಂತಹ ಪ್ರದೇಶದಲ್ಲಿ ಇಂತಹ ಸೇತುವೆಗಳು ಇವೆ, ಅಲ್ಲಿ ತಾವು ಶಾಶ್ವತವಾದ ಕಾಲು ಸೇತುವೆಗಳನ್ನು ನಿರ್ಮಾಣ ಮಾಡಬೇಕೆಂದು" ಹೇಳಿದ್ದೇನೆ. ಇದರ ಬಗ್ಗೆ ನಾವು ಯೋಚನೆ ಮಾಡಬಹುದಲ್ಲವೇ? ನಮಗೆ ಯಾವುದೆಲ್ಲಾ ತೊಂದರೆಗಳಾಗುತ್ತವೆ, ಅದನ್ನು ಮುಂದಾಲೋಚನೆ ಮಾಡಿದಾಗ, ಇಂತಹ ಅನಾಹುತಗಳನ್ನು ನಾವು ತಪ್ಪಿಸಬಹುದು ಎನ್ನುವುದು ನನ್ನ ಭಾವನೆ. ಕಳೆದ ಬಾರಿ ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಒಂದು ಸಭೆ ಕರೆದಿದ್ದರು. ಆ ಸಭೆಯಲ್ಲಿ 30 ರಿಂದ 40 ವಿವಿಧ ಇಲಾಖೆಯ ಅಧಿಕಾರಿಗಳು ಬಂದಿದ್ದರು. ಆ ಸಭೆ ಹೇಗೆ ನಡೆದಿತ್ತೆಂದರೆ, ನಾವು ಸಹ ಒಂದು ಸಭೆ ಮಾಡಿದ್ದೇವೆಂಬ ರೀತಿಯಲ್ಲಿ ನಡೆದಿತ್ತೇ ಹೊರೆತು, ಅದಕ್ಕೆ ಒಂದು ಶಾಶ್ವತವಾದ ಪರಿಹಾರ ಸಿಗುವಂತಹ ಸಭೆ ಆಗಿರಲಿಲ್ಲ ಎನ್ನುವುದು ನನ್ನ ಭಾವನೆ. ಒಂದು ವೇಳೆ ಶಾಶ್ವತವಾದ ಪರಿಹಾರ ಕೊಡಬೇಕೆಂದರೆ, ನಾವು ಏನು ಮಾಡುತ್ತಿದ್ದೇವೆ ಎಂದರೆ, ಈ ವರ್ಷ ಮಳೆ ಬಂದಿದೆ, ಈ ವರ್ಷಕ್ಕೆ ಏನು ಮಾಡಬೇಕೆಂಬ ಬಗ್ಗೆ ಮಾತ್ರ ಯೋಚನೆ ಮಾಡುತ್ತಿದ್ದೇವೆ. ನಾನು ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯುವುದೇನೆಂದರೆ, ಇನ್ನು ಮುಂದಿನ ಐದು ವರ್ಷಗಳ ಕಾಲ ಮಳೆಗಾಲದಿಂದ ಉಂಟಾಗುವ ಪ್ರವಾಹವನ್ನು ನಿಯಂತ್ರಿಸಲು ಏನೇನು ಕಾರ್ಯಕ್ರಮಗಳನ್ನು/ ಯೋಜನೆಗಳನ್ನು ಮಾಡಬೇಕೆಂದು ಒಂದು ಮಾಸ್ಟರ್ ಪ್ಲಾನ್ ಮಾಡಿ, ಈಗ ಏನು ಬೇಕಾಗಿದೆ, ಇನ್ನು ಮುಂದಿನ ಎರಡು ವರ್ಷಕ್ಕೆ ಏನು ಬೇಕಾಗಿರುತ್ತದೆ, ಮೂರು ವರ್ಷಕ್ಕೆ ಏನು ಬೇಕಾಗಿರುತ್ತದೆ ಅಥವಾ ಐದು ವರ್ಷಕ್ಕೆ ಏನು ಬೇಕಾಗಿರುತ್ತದೆ ಎಂಬ ಬಗ್ಗೆ ಒಂದು ಮಾಸ್ಟರ್ ಪ್ಲಾನ್ ಮಾಡಿ, ಏತಕ್ಕೆ ನಾವು ಇದನ್ನು ಅದರಲ್ಲಿ

ಅಳವಡಿಸಿಕೊಳ್ಳುವುದಕ್ಕೆ ಆಗುವುದಿಲ್ಲ? ಈ ರೀತಿ ಯೋಜನೆ ಅಳವಡಿಸಿಕೊಂಡಾಗ ಮಾತ್ರ ಇದು ಸಾಧ್ಯ ಎನ್ನುವುದು ನನ್ನ ಭಾವನೆ. ನಾನು ಹೆಚ್ಚು ಮಾತನಾಡುವುದಕ್ಕೆ ಹೋಗದಂತೆ...

**ಶ್ರೀ ಎಸ್. ಅಂಗಾರ(ಬಂದರು, ಒಳನಾಡು ಸಾರಿಗೆ ಮತ್ತು ಮೀನುಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕರಾವಳಿ ಕಡಲ ಕೊರೆತಕ್ಕೆ ಸಂಬಂಧಪಟ್ಟ ಹಾಗೆ ಒಂದು ಉಲ್ಲೇಖವನ್ನು ಮಾಡಿದರು. ಕಳೆದ ಅನೇಕ ವರ್ಷಗಳಿಂದ ಸಮುದ್ರ ಕೊರೆತಕ್ಕೆ ಸಂಬಂಧಪಟ್ಟ ಹಾಗೆ, ತಾತ್ಕಾಲಿಕವಾಗಿ ಕಲ್ಲು ಹಾಕುವಂತಹ ಕೆಲಸವನ್ನು ಮಾಡುತ್ತಿದ್ದರು. ಆದರೆ, ಈ ವರ್ಷ ನಾವು ಆ ರೀತಿಯ ತಾತ್ಕಾಲಿಕವಾಗಿ ಕಲ್ಲು ಹಾಕುವಂತಹ ಕೆಲಸವನ್ನು ನಿಲ್ಲಿಸಿದ್ದೇವೆ. ಏಕೆಂದರೆ, ಕಳೆದ 3-4 ವರ್ಷಗಳಿಂದ ಈ ರೀತಿಯ ನಿರಂತರವಾಗಿ ಪ್ರತಿ ವರ್ಷ ಸಹ ಸಮುದ್ರ ಕೊರೆತಕ್ಕೆ ಕಲ್ಲು ಹಾಕುವಂತಹ ಕೆಲಸವನ್ನು ಮಾಡುತ್ತಿದ್ದರು. ಆದರೆ, ಅದಕ್ಕೆ ಯಾವುದೇ ರೀತಿಯ action plan ಮಾಡಲಿಲ್ಲ. ಆದರೆ, ಈಗ ನಮ್ಮ ಮುಂದೆ ಎಲ್ಲರೂ ಬಂದು, ಸಮುದ್ರ ಕೊರೆತಕ್ಕೆ ಕಲ್ಲು ಹಾಕಿದ್ದೇವೆಂದು ಹೇಳಿ, ಅದಕ್ಕಾಗಿ ಹಣ ಪಾವತಿ ಮಾಡಬೇಕೆಂದು ಒತ್ತಾಯವನ್ನು ಸಹ ಮಾಡುತ್ತಾರೆ. ಅದಕ್ಕೋಸ್ಕರ ಈ ಬಾರಿ ಮಾನ್ಯ ಮುಖ್ಯಮಂತ್ರಿಗಳು ನಮಗೆ ಒಂದು ಸೂಚನೆಯನ್ನು ಕೊಟ್ಟು, ಕಡಲ ಕೊರೆತಕ್ಕೆ ಶಾಶ್ವತವಾಗಿರುವಂತಹ ಕಾಮಗಾರಿಯನ್ನು ಮಾಡಬೇಕೆಂದು ಹೇಳಿದರು. ಅದಕ್ಕಾಗಿ, ನಾವು ಈಗಾಗಲೇ ನಮ್ಮ ಮಾನ್ಯ ಮುಖ್ಯಮಂತ್ರಿಗಳ ಸೂಚನೆಯ ಪ್ರಕಾರ ಉಲ್ಲಾಳ ತಾಲ್ಲೂಕು ಕ್ಷೇತ್ರದ ಬಟ್ಟಂಪಾಡಿಯಲ್ಲಿ sea wave breaker ಎನ್ನತಕ್ಕಂತಹ ಪ್ರಾಜೆಕ್ಟ್ ಅನ್ನು ಆಯ್ಕೆ ಮಾಡಿದ್ದೇವೆ ಮತ್ತು ಅದಕ್ಕೆ ತಾಂತ್ರಿಕ ಅನುಮತಿ ಈ ವಾರದಲ್ಲಿ ಬರುತ್ತದೆ. ಅದು ಬಂದ ತಕ್ಷಣ ಬಟ್ಟಂಪಾಡಿಯಲ್ಲಿ ಶಾಶ್ವತವಾಗಿರುವಂತಹ sea wave breaker ಕಾಮಗಾರಿಯನ್ನು ಪ್ರಾಯೋಗಿಕವಾಗಿ ಪ್ರಾರಂಭ ಮಾಡುತ್ತೇವೆ.

ಎರಡನೆಯದಾಗಿ, ಬೈಂದೂರು ಕ್ಷೇತ್ರದ ಮರವಂತೆಯಲ್ಲಿಯೂ ಸಹ ಶಾಶ್ವತವಾಗಿ duck foot ಎನ್ನುವಂತಹ ಯೋಜನೆ ಮಾಡಬೇಕಾಗಿದ್ದು, ಅದನ್ನು ಸಹ ಪ್ರಾಯೋಗಿಕವಾಗಿ ಮಾಡಬೇಕೆಂದು ನಾವು ನಿಶ್ಚಯ ಮಾಡಿದ್ದೇವೆ. ಇದಕ್ಕೂ ಸಹ ತಾಂತ್ರಿಕ ಅನುಮೋದನೆ ಬಂದ ತಕ್ಷಣ ಅಲ್ಲಿ ಶಾಶ್ವತವಾಗಿರುವಂತಹ ಕಾಮಗಾರಿಯನ್ನು ಮಾಡುತ್ತೇವೆ. ಮೂರನೆಯದಾಗಿ, ಬೈಂದೂರು ಕ್ಷೇತ್ರದಲ್ಲಿ ಒಂದು ಶಾಲೆಗೆ ಹೋಗುವಂತಹ ಮಗು ಕಾಲುಸಂಕದಿಂದ ಬಿದ್ದು ಮೃತಪಟ್ಟಿರುವ ಬಗ್ಗೆ ಮಾನ್ಯ

ಸದಸ್ಯರು ಉಲ್ಲೇಖ ಮಾಡಿದ್ದಾರೆ. ಅದಕ್ಕಾಗಿ, ಉಡುಪಿ ಜಿಲ್ಲೆಯ ಜಿಲ್ಲಾಡಳಿತಕ್ಕೆ ಈಗಾಗಲೇ ನಾವು ಸೂಚನೆಯನ್ನು ಕೊಟ್ಟು, ಸುಮಾರು 5 ಲಕ್ಷ ರೂಪಾಯಿ ಒಳಗೆ ಯಾವ್ಯಾವ ಗ್ರಾಮ ಪಂಚಾಯಿತಿಗಳಿಂದ ಎಲ್ಲೆಲ್ಲಿ, ಯಾವ ರೀತಿ ಶಾಶ್ವತವಾಗಿ ಕಾಲು ಸೇತುವೆಯನ್ನು/ಕಾಲುಸಂಕವನ್ನು ನಿರ್ಮಾಣ ಮಾಡಬಹುದು ಎಂಬ ಬಗ್ಗೆ ಪ್ರಸ್ತಾವನೆ ನೀಡಬೇಕೆಂದು ಹೇಳಿದ್ದೇವೆ. ಅದಕ್ಕೋಸ್ಕರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ಕಾಲುಸಂಕವನ್ನು ನಿರ್ಮಾಣ ಮಾಡಬೇಕಾಗಿದೆ, ಅದನ್ನು ನರೇಗಾ ಯೋಜನೆಯಡಿಯಲ್ಲಿ ಮಾಡಬೇಕು. ಅದಕ್ಕೆ ಎಲ್ಲಾ ಪ್ರಸ್ತಾವನೆಯನ್ನು ಸಂಬಂಧಪಟ್ಟ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಮತ್ತು ಗ್ರಾಮ ಪಂಚಾಯಿತಿಗಳಿಗೆ ಸೂಚನೆಯನ್ನು ಈಗಾಗಲೇ ನೀಡಿರುತ್ತೇವೆ. ಅದರಂತೆ, ಈಗಾಗಲೇ ಸುಮಾರು 544 ಕಾಲುಸಂಕಗಳ ಬಗ್ಗೆ ಪ್ರಸ್ತಾವನೆ ಬಂದಿರುತ್ತವೆ. ಅದನ್ನು ನಾವು ಹಂತ-ಹಂತವಾಗಿ ಪ್ರತಿ ಭಾಗದಲ್ಲಿ ಅಂದರೆ, ಉಡುಪಿ ಜಿಲ್ಲೆಯ ಎಲ್ಲಾ ತಾಲ್ಲೂಕು ಮತ್ತು ಗ್ರಾಮಗಳಲ್ಲಿಯೂ ಸಹ ಈ ರೀತಿಯ ಸಮಸ್ಯೆಗಳು ಮುಂದೆ ಆಗಬಾರದು ಎನ್ನುವಂತಹ ರೀತಿಯಲ್ಲಿ ಎಚ್ಚರಿಕೆ ವಹಿಸಬೇಕು ಎಂದು ಯೋಚನೆ ಮಾಡಿದ್ದೇವೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ(ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, the Government of India is having Coastal Protection Scheme. ಈ ಹಿಂದೆ ಮಾನ್ಯ ಸಚಿವರು ಸಣ್ಣ ನೀರಾವರಿ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಮಾಡುತ್ತಿದ್ದರು ಎಂದು ಕಾಣುತ್ತಿದೆ. ಆಗಲೂ ಸಹ sea water breaker ಎಂದು ದೊಡ್ಡ ಯೋಜನೆ ಇದ್ದು, ಅದು ಈಗ ಆಗುತ್ತಿಲ್ಲ. ಭಾರತ ಸರ್ಕಾರದಿಂದ ಇಂತಹ ಯೋಜನೆಗಳಿಗೆ ಸಾಕಷ್ಟು ರೀತಿಯಲ್ಲಿ ಹಣ ಬರುತ್ತದೆ. ಅದಕ್ಕೆ ರಾಜ್ಯ ಸರ್ಕಾರ ಒಂದು action plan ಕಳುಹಿಸಿದರೆ ಸಾಕು. ಆದರೆ, ಗುಜರಾತ್ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಹೋಲಿಸಿದರೆ, ಅದು ನಮ್ಮ ರಾಜ್ಯದಲ್ಲಿ ಇದುವರೆವಿಗೂ ಆಗಿರುವುದಿಲ್ಲ.

**ಶ್ರೀ ಎಸ್. ಅಂಗಾರ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಸಮುದ್ರ ಕರಾವಳಿಯ ಭಾಗ ಏನಿದೆ, ಆ ಭಾಗದಲ್ಲಿ ಬಂದರಿಗೆ ಸಂಬಂಧಪಟ್ಟ ಹಾಗೆ ಇರಬಹುದು, ಜೆಟ್ಟಿಗೆ ಸಂಬಂಧಪಟ್ಟಿದ್ದು ಇರಬಹುದು ಅಥವಾ ಡ್ರೆಜ್ಜಿಗೆ ಸಂಬಂಧಪಟ್ಟ ಹಾಗೆ ಇರಬಹುದು, ಈ ರೀತಿ ಎಲ್ಲೆಲ್ಲಿ ಮೀನುಗಾರಿಕೆಗೆ ಸಂಬಂಧಪಟ್ಟ ಹಾಗೆ ಅಥವಾ ಮೀನುಗಾರಿಕೆ ಸಂಬಂಧಪಟ್ಟಂತಹ ಮೂಲಭೂತ ಸಮಸ್ಯೆಗಳ ಬಗ್ಗೆ

ಈಗಾಗಲೇ ನಾವು ಸುಮಾರು 28 ಯೋಜನೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಅದರಲ್ಲಿ 9 ಯೋಜನೆಗಳು ಮಂಜೂರಾಗಿ ಬಂದಿರುತ್ತವೆ. ಆ ರೀತಿಯಲ್ಲಿ ಕೂಡ ನಾವು ಗಮನ ಹರಿಸಿರುತ್ತೇವೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಅದು minor ports development ಆಯಿತು. ಆದರೆ, ನಾನು ಹೇಳುತ್ತಿರುವುದು sea protection walls ಬಗ್ಗೆ.

**ಶ್ರೀ ಮಂಜುನಾಥ್ ಭಂಡಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರವನ್ನು ಕೊಡುತ್ತಿದ್ದಾರೆ. ಆದರೆ, ಮಾನ್ಯ ಸಭಾನಾಯಕರು ಹಾಗೂ ಮಾನ್ಯ ಮೀನುಗಾರಿಕೆ ಸಚಿವರು ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ ಮತ್ತು ಕರಾವಳಿ ಪ್ರದೇಶಕ್ಕೆ ಸಂಬಂಧಪಟ್ಟವರೇ ಆಗಿದ್ದಾರೆ. ಒಂದು ವೇಳೆ ಬೈಂದೂರು ಕ್ಷೇತ್ರದ ಅನಾಹುತಕ್ಕೆ ಸಂಬಂಧಿಸಿದಂತೆ, ಕಾಲುಸಂಕಗಳಿಗೆ ಒಂದು ಶಾಶ್ವತವಾದಂತಹ ಪರಿಹಾರವನ್ನು ಮುಂದಿನ ಮಳೆ ಬರುವುದಕ್ಕಿಂತ ಮೊದಲು ಮಾಡಬೇಕೆಂದು ನಾನು ತಮ್ಮ ಮೂಲಕ ಮನವಿ ಮಾಡುತ್ತೇನೆ. ಏಕೆಂದರೆ, ಈ ರೀತಿಯ ಪ್ಲಾನ್ ಪ್ರತಿ ವರ್ಷ ಸಹ ಸಲ್ಲಿಸುತ್ತಾರೆ. ತದನಂತರ, ಡಿ.ಪಿ.ಆರ್. ಆಗಬೇಕು, ಆ ಪ್ಲಾನ್ ಸಲ್ಲಿಸಬೇಕು ಅಥವಾ ಕ್ರಿಯಾ ಯೋಜನೆ ಆಗಬೇಕು. ಕ್ರಿಯಾ ಯೋಜನೆ ಆಗಬೇಕಾದರೆ ಸಂಬಂಧಪಟ್ಟ ಶಾಸಕರು ಹೇಳಬೇಕು. ಇದೆಲ್ಲವೂ ಸಹ ನಡೆಯಬಾರದು. ನಾನು ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಎಲ್ಲೆಲ್ಲಿ ಅಂತಹ ಸೇತುವೆಗಳಿವೆ, ಅವುಗಳಿಗೆ ಬರುವ ಮಳೆಗಾಲದೊಳಗೆ ಒಂದು ಶಾಶ್ವತ ಪರಿಹಾರ ಕೊಡಬೇಕೆಂದು ಕೋರುತ್ತೇನೆ. ನನ್ನ ಇನ್ನೊಂದು ಮನವಿ ಏನೆಂದರೆ, ಮಂಗಳೂರಿಗೆ ಸಂಬಂಧಪಟ್ಟ ಸಚಿವರು ಹಾಗೂ ಹಿರಿಯ ಸಚಿವರು ಈ ಸದನದಲ್ಲಿ ಹಾಜರಿರುತ್ತಾರೆ. ಮಾನ್ಯ ಮೀನುಗಾರಿಕೆ ಸಚಿವರು ಆಗಲೇ ಮಾತನಾಡುತ್ತಾ, ನಾನು ಇದಕ್ಕೆ ಒಂದು ಶಾಶ್ವತವಾದಂತಹ ಪರಿಹಾರವನ್ನು ಈಗ ಮಾಡುತ್ತಿದ್ದೇವೆಂದು ಹೇಳಿದರು. ಇದಕ್ಕೆ ಮುಂಚೆ ಏತಕ್ಕೆ ಅದನ್ನು ಮಾಡಿರುವುದಿಲ್ಲ ಎನ್ನುವ ಬಗ್ಗೆ ಮಾತನಾಡುವುದಕ್ಕೆ ಹೋಗುವುದು ಬೇಡ. ಆದರೆ, ನಾವು ಎಷ್ಟು ವರ್ಷಗಳಲ್ಲಿ ಈ ಕೆಲಸವನ್ನು ಪೂರ್ಣಗೊಳಿಸುತ್ತೇವೆ. ಈಗ ಸೆಪ್ಟೆಂಬರ್ ತಿಂಗಳು ಮುಗಿಯುತ್ತಿದ್ದು, ಮಳೆಗಾಲ ಸಹ ಮುಗಿಯುತ್ತಿರುವಾಗ, ಇನ್ನು ಯಾವಾಗ ಮಾಸ್ಟರ್ ಪ್ಲಾನ್ ಮಾಡಿ ಕಳುಹಿಸುತ್ತಾರೆ, ಇದನ್ನು ಯಾವಾಗ ಮಂಜೂರು ಮಾಡುತ್ತಾರೆ, ಇದು ಯಾವ ಆರ್ಥಿಕ ವರ್ಷಕ್ಕೆ ಸೇರುತ್ತದೆ, ಇದು ಈ ವರ್ಷ

ಪ್ರಸ್ತಾವನೆ ಸಲ್ಲಿಸುತ್ತಾರೆಯೇ ಅಥವಾ ಮುಂದಿನ ವರ್ಷ ಪ್ರಸ್ತಾವನೆ ಸಲ್ಲಿಸುತ್ತಾರೆಯೇ ಎನ್ನುವುದರ ಬಗ್ಗೆ ಒಂದು ಸ್ಪಷ್ಟ ಚಿತ್ರಣವನ್ನು ಕೊಟ್ಟು, ಮುಂದಿನ ಮಳೆಗಾಲ ಬಂದಾಗ ಈ ಎಲ್ಲಾ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಯಾವುದಾದರೂ ಒಂದು ಶಾಶ್ವತವಾದ ತಂಡವನ್ನು ರಚಿಸಬೇಕು. ಇಲ್ಲಿ ಏನಾಗಿದೆಯೆಂದರೆ, ಒಬ್ಬ ಜಿಲ್ಲಾಧಿಕಾರಿ ಒಂದು ಪ್ಲಾನ್ ಮಾಡಿದ್ದು, ಅವರು ವರ್ಗಾವಣೆಯಾಗಿ ಮತ್ತೊಬ್ಬರು ಆ ಜಾಗಕ್ಕೆ ಬಂದಾಗ ಅವರಿಗೆ ಸದರಿ ಪ್ಲಾನ್ ಬಗ್ಗೆ ಗೊತ್ತಿರುವುದಿಲ್ಲ. ಈ ರೀತಿ ಆಗದೇ, ಎಲ್ಲೆಲ್ಲಿ ಇಂತಹ ಮಳೆಯಿಂದ ಹಾನಿಗಳಾಗುತ್ತಿವೆ ಈ ಬಗ್ಗೆ ಒಂದು ವಿಶೇಷವಾದಂತಹ ತಂಡವನ್ನು ಮಾಡಿ, ಒಂದು ಶಾಶ್ವತವಾದಂತಹ ಪರಿಹಾರವನ್ನು ಕೊಡಬೇಕು. ಕೊಡಿಯಾಲಬೈಲು ಎಂಬ ಹಲವಾರು ಜಾಗಗಳನ್ನು ತಾವು ಹೇಳಿದ್ದೀರಿ. ನ್ಯಾಷನಲ್ ಹೈವೇ ಎನ್ನುವಂತಹ ಜಾಗಗಳಲ್ಲಿ ಇತ್ತೀಚೆಗೆ ಮಳೆ ಬಂದಂತಹ ಸಂದರ್ಭದಲ್ಲಿ ಬೋಟ್‌ನಲ್ಲಿ ಹೋಗಬೇಕಾದ ಪರಿಸ್ಥಿತಿ ಬಂದಿರುತ್ತದೆ. ಮಂಗಳೂರಿನಲ್ಲಿ ಬೋಟ್‌ನಲ್ಲಿ ಹೋಗುವಂಥದ್ದು ವಿಶೇಷ ಅಲ್ಲ. ಆದರೆ, ಎಲ್ಲಿ ಬಸ್ಸು, ಕಾರು ಹೋಗಬೇಕಾಗಿತ್ತು ಅಥವಾ ಎಲ್ಲಿ ಜನರು ಹೋಗಬೇಕಾಗಿತ್ತು ಅಲ್ಲಿ ಬೋಟ್‌ನಲ್ಲಿ ಹೋಗಬೇಕಾದ ಸಂದರ್ಭ ಇತ್ತು. ಇದನ್ನು ನೋಡಿದಾಗ ನಾವುಗಳು ಯಾವುದೇ ರೀತಿಯ ಮುಂದಾಲೋಚನೆಯನ್ನು ಮಾಡದೇ, ಅಪಾರ್ಟ್‌ಮೆಂಟ್‌ಗಳನ್ನು ಕಟ್ಟುವುದಕ್ಕೆ ಅನುಮತಿಯನ್ನು ನೀಡಿರುವಂಥದ್ದಾಗಿದೆ.

(ಮುಂದು...)

(891) 16.09.2022 1.50 ವೈಎಲ್-ಎಕೆ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಮಂಜುನಾಥ ಭಂಡಾರಿ (ಮುಂದು):-**

ಹಾಗೆಯೇ ಚರಂಡಿಗಳನ್ನು ಒತ್ತುವರಿ ಮಾಡುತ್ತಿರುವುದು ಸಮಸ್ಯೆಯಾಗಿದೆ. ಇವತ್ತಿನ ದಿವಸ ಬೆಂಗಳೂರಿನಲ್ಲಿರುವ ರಾಜಕಾಲುವೆ ಜಾಗವನ್ನು ಒತ್ತುವರಿ ಮಾಡುತ್ತಿದ್ದೇವೆ ಎಂದು ಏನು ಹೇಳುತ್ತಿದ್ದೇವೆ, ಅದು ಪ್ರತಿ ರಾಜ್ಯಗಳಲ್ಲಿ, ಜಿಲ್ಲೆಗಳಲ್ಲಿ, ನಗರಗಳಲ್ಲಿ ಸಹ ರಾಜಕಾಲುವೆ ಜಾಗವನ್ನು ಒತ್ತುವರಿ ಮಾಡುತ್ತಿದ್ದಾರೆ. ಅದು ಕೇವಲ ಮಂಗಳೂರಿಗೆ ಸೀಮಿತವಾಗಿಲ್ಲ. ಹಾಗಾಗಿ ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಬೇಡಿಕೊಳ್ಳುವುದೇನೆಂದರೆ, ಇದಕ್ಕೆ ಸ್ಪಷ್ಟವಾದ ಕಾನೂನು ಮಾಡಬೇಕು.

ಏಕೆಂದರೆ, ಈಗಾಗಲೇ ಮಾನ್ಯ ಎಸ್.ರವಿರವರು ಹೇಳಿದ ಹಾಗೆ ಒಂದು ಅಡಿ, ಮೂರು ಅಡಿ, ಎಂಟು ಅಡಿಗಳವರೆಗೂ ನೀರು ತುಂಬಿಕೊಳ್ಳುತ್ತಿರುವುದನ್ನು ನಾವು ನೋಡುತ್ತಿರುವಾಗ ಮುಂದಿನ ಜನಾಂಗದವರಿಗೆ ನಾವು ಏನನ್ನು ಬಿಟ್ಟು ಹೋಗಬಹುದು? ಈಗಲೇ ಈ ರೀತಿ ಬೆಳೆಯುತ್ತಿರುವುದನ್ನು ನೋಡಿದರೆ, ಮುಂದಿನ ಜನಾಂಗಕ್ಕೆ ನಾವು ಏನನ್ನು ಬಿಟ್ಟು ಕೊಡಬಹುದು? ಇದಕ್ಕೆ ಏನಾದರೂ ಮಾಸ್ಟರ್ ಪ್ಲಾನ್ ಮಾಡಬೇಕಲ್ಲವೇ? ಆ ಮಾಸ್ಟರ್ ಪ್ಲಾನ್ ತಂದು ಸರ್ಕಾರ ಯಾವುದೇ ರೀತಿಯಲ್ಲಿ ಯೋಚನೆ ಮಾಡದೇ ಕ್ರಮಕೈಗೊಳ್ಳಬೇಕು. ನನಗೆ ಮಾತನಾಡಲು ಅವಕಾಶ ಕಲ್ಪಿಸಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

**(ಸದನವು ಮಧ್ಯಾಹ್ನ 1 ಗಂಟೆ 51 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ: 19ನೇ ಸೆಪ್ಟೆಂಬರ್ ಮಾಹೆ 2022 ರಂದು ಸೋಮವಾರ ಬೆಳಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

<><><>